ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ಡಿಸೆಂಬರ್ 11, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 209 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

# ಕನ್ನಡ ಪಠ್ಯದಿಂದ ಜೈನ ಕಾವ್ಯಗಳಿಗೆ ಕತ್ತರಿ

## 'ಧರ್ಮ ಕಾರಣ' ಎಂದು ಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮೀಜಿ ಆಕ್ಷೇಪ



ದಾವಣಗೆರೆ, ಡಿ. 10 – ಕನ್ನಡದಲ್ಲಿ ಮೊದಲು ಕಾವ್ಯ ರಚಿಸಿದವರೇ ಜೈನ ಕವಿಗಳು. ಆದರೆ, ಈಗ ಧಾರ್ಮಿಕ ಕಾರಣದಿಂದ ಜೈನ ಕವಿಗಳ ಕಾವ್ಯಗಳನ್ನು ಪಠ್ಯದಿಂದ ತೆಗೆದು ಹಾಕಲಾಗುತ್ತಿದೆ ಎಂದು ಹೊಂಬುಜದ ಜಗದ್ಗುರು ಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ ಭಗವಾನ್ ಶ್ರೀ 1008 ಕಲ್ಪದ್ರುಮ ಆದಿನಾಥ ಜಿನಮಂದಿರದ ದಶಮಾನೋತ್ಸವ ಹಾಗೂ ಶ್ರೀ ಮಹಾವೀರ ಸಂಘದ ಸುವರ್ಣ ಮಹೋತ್ಸವ ಸಂಭ್ರಮದ 2ನೇ ದಿನದ ವೇದಿಕೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಕರ್ನಾಟಕದಲ್ಲಿ ಕನ್ನಡದಲ್ಲಿ ಕಾವ್ಯಗಳನ್ನು ಮೊದಲು ಸಮೃದ್ಧಗೊಳಿಸಿದವರು ಜೈನ ಕವಿಗಳು. ಅದಕ್ಕೂ ಮೊದಲು ಕರ್ನಾಟಕದಲ್ಲಿ ಕಾವ್ಯ ಸಂಸ್ಕೃತದಲ್ಲಿತ್ತು. ಕನ್ನಡ ಸಾಹಿತ್ಯ ಆರಂಭವಾಗುವುದೇ ಜೈನ ಕವಿಗಳಿಂದ ಎಂದವರು ಹೇಳಿದರು.

ಈ ಹಿಂದೆ ಕನ್ನಡ ಪುಸ್ತಕದಲ್ಲಿ ಸಾಕಷ್ಟು ಹಳೆಗನ್ನಡ ಪದ್ಯಗಳಿರುತ್ತಿದ್ದವು. ಎರಡು ಮೂರು ಪುಟಗಳ ವಿವರ ಇರುತ್ತಿತ್ತು. ಆದಿಪುರಾಣ, ಅಜಿತನಾಥ ಪುರಾಣ, ಯಶೋಧರ ಚರಿತ್ರೆ ಇರುತ್ತಿದ್ದವು. ಈಗ ಪುಸ್ತಕಗಳಿಂದ ಅವು ಮಾಯವಾಗಿವೆ ಎಂದು ಶ್ರೀಗಳು ಹೇಳಿದರು.

ಜೈನ ಸಮುದಾಯದ ಕವಿಗಳ ಪಾಠ ತೆಗೆದರೆ ಏನೂ ಕೇಳುವುದಿಲ್ಲ, ಏನೂ ಮಾಡುವುದಿಲ್ಲ ಎಂದು ನಮ್ಮನ್ನು ಗುರಿಯಾಗಿಟ್ಟುಕೊಂಡಿದ್ದಾರೆ. ಜೈನರು ಸಾಹಿತ್ಯಾತ್ಮಕವಾಗಿ ನೀಡಿದ ಕೊಡುಗೆ ಬೇಡವಾಗಿದೆ ಎಂದು ವಿಷಾದಿಸಿದರು.

ಈಗ ಪಠ್ಯ ಪುಸ್ತಕವು ಧಾರ್ಮಿಕ ಪಠ್ಯದಂತಾಗಿದೆ. ಈ ಧರ್ಮದ್ದು ಒಂದಿಷ್ಟು ಪಾಠ, ಆ ಧರ್ಮದವರ ಪಾಠ ಒಂದಿಷ್ಟು ಬೇಕು ಎಂದು ಸೇರಿಸುತ್ತಿದ್ದಾರೆ ಎಂದೂ ಭಟ್ಟಾರಕ ಸ್ವಾಮೀಜಿ ಹೇಳಿದರು.

ಈ ಬಗ್ಗೆ ಹೋರಾಡಲು ನಮ್ಮ ಬಳಿ ರಾಜಕೀಯ ಶಕ್ತಿಯೂ ಕಡಿಮೆ. ನಮ್ಮ ಕಾವ್ಯ ಹಾಗೂ ಶಾಸ್ತ್ರಗಳಿಗೆ ದೇವಸ್ಥಾನ ಹಾಗೂ ಸಮಾಜದಲ್ಲಿ ಸ್ವಾಧ್ಯಾಯದಿಂದ ಜೀವ ಕೊಡಬೇಕಿದೆ. ಜನರಲ್ಲಿ ಜಾಗೃತಿ ಮೂಡಬೇಕು ಎಂದವರು ತಿಳಿಸಿದರು.

ಪಂಪ ಮಹಾಕವಿ ಮಾನವ ಕುಲಂ ತಾನೊಂದೇ ಒಲಂ ಎಂದು ಹೇಳಿದ್ದರು. ಪಂಪ ಮಹಾಕವಿಯ ಆಶಯವನ್ನು ರಾಷ್ಟ್ರಕವಿ ಕುವೆಂಪು ತಮ್ಮ ಕಾವ್ಯ ಹಾಗೂ ಜೀವನದಲ್ಲಿ ಜಾರಿಗೆ ತಂದರು ಎಂದೂ ಸ್ವಾಮೀಜಿ ತಿಳಿಸಿದರು.

### ಸಿದ್ದೇಶಣ್ಣ ಮತಗಳಿಗೆ ಸುಧಾಕರ್ ನೆರವು !

ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿರುವ ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ. ಸುಧಾಕರ್ ಈ ಕಾರ್ಯಕ್ರಮಕ್ಕೆ ಬಂದಿದ್ದರೆ ನನಗೆ ಜೈನ ಸಮುದಾಯದ ಮತಗಳು ಶೇ.101ರಷ್ಟು ಪಕ್ಕಾ ಆಗಿರುತ್ತಿದ್ದವು ಎಂದು ಬಿಜೆಪಿ ಸಂಸದ ಜಿ.ಎಂ. ಸಿದ್ದೇಶ್ವರ ಚಟಾಕಿ ಹಾರಿಸಿದರು. ಸುಧಾಕರ್ ಜೈನ ಸಮಾಜದ ಮುಖಂಡ, ನನಗೆ ಆಪ್ತ ಸ್ನೇಹಿತ. ಕಳೆದ ಚುನಾವಣೆಗಳಲ್ಲೂ, 'ಇಲ್ಲಿ ಯಾರಿಗೂ ಹೇಳಬೇಡಪ್ಪ, ನಾನು ನಿನಗೆ ಸಹಾಯ ಮಾಡುತ್ತೇನೆ' ಎಂದಿದ್ದರು ಎಂದು ಸಿದ್ದೇಶ್ವರ ಮುಗುಳ್ನಗುತ್ತಾ ಹೇಳಿದರು. ಈ ಸಮಾರಂಭಕ್ಕೆ ಬರುವುದಾಗಿ ಸುಧಾಕರ್ ನನ್ನ ಬಳಿ ಹೇಳಿದ್ದರು. ಆದರೆ, ಇನ್ನೂ ಬಂದಿಲ್ಲ. ಒಂದು ವೇಳೆ ತಡವಾಗೇನಾದರೂ ಬಂದರೆ, 'ಸಿದ್ದೇಶಣ್ಣ ಬೈದು ಹೋದರು' ಎಂದು ಹೇಳಿ ಎಂದು ತಿಳಿಸಿದರು.

### ಜೈನ ಧರ್ಮದಿಂದ ವೀರಶೈವಕ್ಕೆ ಮತಾಂತರ : ಶಾಸಕ ಹರೀಶ್

ವೀರಶೈವರು ಹೆಚ್ಚಾಗಿರುವ ದಾವಣಗೆರೆ ಜಿಲ್ಲೆಯ ಹಲವಾರು ಹಳ್ಳಿಗಳಲ್ಲಿ ಜೈನ ಮಂದಿರಗಳಿವೆ. ಒಂದು ಕಾಲದಲ್ಲಿ ಜೈನರಾಗಿದ್ದವರು, ನಂತರದಲ್ಲಿ ವೀರಶೈವ ಧರ್ಮಕ್ಕೆ ಮತಾಂತರಗೊಂಡಿರಬಹುದು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ಶಾಮನೂರು, ಆನೆಕೊಂಡ ಮುಂತಾದ ಕಡೆಗಳಲ್ಲಿ ಜೈನ ಮಂದಿರಗಳು ಕಂಡು ಬರುತ್ತಿವೆ. ಅದರಲ್ಲೂ ಸಾದು ವೀರಶೈವ ಒಳಪಂಗಡದವರು ಹೆಚ್ಚಾಗಿರುವ ಗ್ರಾಮಗಳಲ್ಲಿ, ಹೆಚ್ಚಿನ ಜೈನ ಮಂದಿರಗಳು ಕಂಡು ಬಂದಿವೆ ಎಂದೂ ಅವರು ತಿಳಿಸಿದರು.



# ಶ್ರದ್ಧೆಗೆ ಬದ್ಧನಾಗಿದ್ದಾಗ ಉತ್ತಮ ವ್ಯಕ್ತಿ

## ಯರಗುಂಟೆ ಗ್ರಾಮದ ಕಾರ್ಯಕ್ರಮದಲ್ಲಿ ಉಜ್ಜಯಿನಿ ಶ್ರೀ ಪ್ರತಿಪಾದನೆ

ದಾವಣಗೆರೆ, ಡಿ. 10- ಮನುಷ್ಯ ನಂಬಿಕೆ, ವಿಶ್ವಾಸ, ಶ್ರದ್ಧೆಗೆ ಬದ್ಧನಾಗಿ ನಡೆದುಕೊಂಡಾಗ ಮಾತ್ರ ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ಬೆಳೆಯಲು ಸಾಧ್ಯವಿದೆ ಎಂದು ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು ಪ್ರತಿಪಾದಿಸಿದರು.

ಇಲ್ಲಿಗೆ ಸಮೀಪದ ಯರಗುಂಟೆ ಗ್ರಾಮದ ಶ್ರೀ ಕ್ಷೇತ್ರ ಅಶೋಕ ನಗರದಲ್ಲಿರುವ ಶ್ರೀ ಗುರು ಕರಿಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದು ಏರ್ಪಾಡಾಗಿದ್ದ ನೂತನ ರಥೋತ್ಸವ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಗ್ರಾಮ, ಪಟ್ಟಣ, ನಗರ, ಜಿಲ್ಲೆ, ರಾಜ್ಯ, ದೇಶದ ಸರ್ವ ಜನಾಂಗದವರು, ಧರ್ಮದವರು ಅನ್ನುವುದಕ್ಕಿಂತ ನಾವೆಲ್ಲರೂ ಈ ದೇಶದ ಪ್ರಜೆಗಳು, ಭಾರತಾಂಬೆಯ ಮಕ್ಕಳು, ನಾವೆಲ್ಲರೂ ಭಾರತೀಯರು ಎನ್ನುವ ಸಮನ್ವಯ ಭಾವ ಎಲ್ಲರಲ್ಲೂ ಒಡಮೂಡಲಿ ಎಂದು ಹಿತನುಡಿದರು.

ಪ್ರತಿಯೊಬ್ಬ ಮನುಷ್ಯ ಧರ್ಮ, ನಂಬಿಕೆ, ವಿಶ್ವಾಸದ ಮೇಲೆ ನಡೆಯಬೇಕು. ಮೂರ್ತಿ ಯಾವುದೇ (4ನೇ ಪುಟಕ್ಕೆ)

# ಶಿವಯೋಗದಿಂದ ಮನೋಒತ್ತಡಕ್ಕೆ ಮುಕ್ತಿ

## ಶರಣರು ಕಂಡ ಶಿವ ಪ್ರವಚನ ಮಾಲೆಯಲ್ಲಿ ಡಾ.ಬಸವರಾಜ ರಾಜಋಷಿ

ದಾವಣಗೆರೆ, ಡಿ.10- ಸದಾ ಒತ್ತಡದಿಂದ ಕೂಡಿದ ಈ ಜೀವನದಲ್ಲಿ ಶಿವ ಯೋಗಕ್ಕಿಂತ ಸರಳ ಯೋಗ ಮತ್ತೊಂದಿಲ್ಲ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಹುಬ್ಬಳ್ಳಿ ಉಪ ವಲಯದ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ ಹೇಳಿದರು.

ಇಲ್ಲಿನ ವಿದ್ಯಾನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಆವರಣದಲ್ಲಿ ನಡೆಯುತ್ತಿರುವ 'ಶರಣರು ಕಂಡ ಶಿವ' ಪ್ರವಚನ ಮಾಲೆಯ 7ನೇ ದಿನವಾದ ಭಾನುವಾರದ ಸಮಾರಂಭದಲ್ಲಿ ಅವರು ಪ್ರವಚನ ನೀಡಿದರು.

ಐಷಾರಾಮಿ ಜೀವನವುಳ್ಳವರು ಶಿವಯೋಗದ ಕಡೆ ಹೋಗುವುದಿಲ್ಲ. ಆದರೆ ಹುಟ್ಟಿನ ಜೊತೆ ಮರಣ ನಿಶ್ಚಿತವಾಗಿರುವ ನಮಗೆ ಪರಮಾತ್ಮನ ಧ್ಯಾನಕ್ಕಾಗಿ ಶಿವಯೋಗ ಮಾಡುವುದು ನಮ್ಮ ಕರ್ತವ್ಯ ಎಂದು ಹೇಳಿದರು.



ಋಗ್ವೇದದ ಕಾಲಕ್ಕೆ ಮೊದಲೇ ಇಷ್ಟಲಿಂಗ ರೂಪದಲ್ಲಿ ಶಿವೋಪಾಸನೆ, ಶಿವಾರ್ಚನೆ ಮಾಡಲಾಗುತ್ತಿತ್ತು ಎಂದು ಋಗ್ವೇದದ ಮಂತ್ರ ಆಧಾರದಿಂದ ಸ್ಪಷ್ಟೀಕರಣ ಮಾಡಿದರು. ಇಷ್ಟಲಿಂಗದ ಉಪಾಸನೆ, ಶೈವ ಪರಂ ಪರೆಯಲ್ಲಿ ವೀರಶೈವ ಪರಂಪರೆಯಾಗಿ ಮೂಡಿ ಬಂದಿದೆ. ಮೊದಲು ಎಲ್ಲರೂ ಶಿವಭಕ್ತರೇ, ಆದರೆ ಪುರಾಣ ಕಾಲ ಬಂದ ಮೇಲೆ ಒಂದೊಂದು ದೇವರಿಗೆ ಪ್ರತ್ಯೇಕ (2ನೇ ಪುಟಕ್ಕೆ)

### ಆತ್ಮಲಿಂಗವೂ ಅಲ್ಲ, ಗುರುಲಿಂಗವೂ ಅಲ್ಲ, ಶಿವಲಿಂಗವೇ ಸತ್ಯ

ಭಾರತ ಆತ್ಮ ಜ್ಞಾನಿಗಳು, ಪರಮಾತ್ಮ ಜ್ಞಾನಿಗಳು ಇದ್ದ ದೇಶ. ಧ್ಯಾನ ಮಾರ್ಗದಿಂದಲೇ ಅವರು ಆತ್ಮ ಹಾಗೂ ಪರಮಾತ್ಮನ ಧ್ಯಾನ ಮಾಡುತ್ತಿದ್ದರು. ಶ್ರೀ ಸಾಮಾನ್ಯನಿಗೆ ಅವನ ಬುದ್ದಿ ಮಟ್ಟಕ್ಕೆ ಆತ್ಮ ಜ್ಞಾನ, ಪರಮಾತ್ಮನ ಜ್ಞಾನ ಮುಟ್ಟದೇ ಇದ್ದುದರಿಂದ, ಅನೇಕ ಶಿವಾಲಯಗಳನ್ನು ನಿರ್ಮಿಸಲು ಪ್ರಯತ್ನಿಸಿದರು. ಪರಮ ಜ್ಯೋತಿರ್ಲಿಂಗದ ಸ್ವರೂಪವನ್ನು ಶಿಲೆಗಳಲ್ಲಿ ಮಾಡಿ ಪೀಠದ ಮೇಲಿಟ್ಟು ಶಿವಧ್ಯಾನ, ಶಿವಾರಾಧನೆ ಮಾಡಲು ಆರಂಭಿಸಿದರು.

ಆದಿಕಾಲದ ಭಕ್ತಿ ಮಾರ್ಗದ ಪ್ರಥಮ ಅಧ್ಯಾಯ ಇದಾಯಿತು. ಬೇರೆ ಯಾವ ದೇವತೆ, ದೇವರಿಗೂ ದಾರ್ಶನಿಕರಿಗೂ ದೇವಸ್ಥಾನಗಳಿರಲಿಲ್ಲ. ಶಿವಲಿಂಗ ಉಪಾಸನೆ ಮಾತ್ರ ನಡೆಯುತ್ತಿತ್ತು. ಅಂದಿನ ಶಿವಭಕ್ತರಿಗೆ (2ನೇ ಪುಟಕ್ಕೆ)

# ಜಗಳೂರು ದಾವಣಗೆರೆಯಲ್ಲಿಯೇ ಇರಲಿ

ಜಗಳೂರು, ಡಿ.10- ಜಗಳೂರು ತಾಲ್ಲೂಕು ದಾವಣಗೆರೆ ಜಿಲ್ಲೆಗೆ ಸೇರಿದ್ದರ ಪ್ರತಿಫಲವಾಗಿ 57 ಕೆರೆಗಳಿಗೆ ನೀರು, ಭದ್ರಾ ಮೇಲ್ದಂಡೆ ಯೋಜನೆಗಳು, ಶಿಕ್ಷಣ, ಆರೋಗ್ಯ ಸೇರಿದಂತೆ ಹಲವಾರು ಸೌಲಭ್ಯ ಗಳನ್ನು ಕಲ್ಪಿಸಿಕೊಟ್ಟಿರುವ ದಾವಣಗೆರೆ ಜಿಲ್ಲೆಯಲ್ಲೇ ಜಗಳೂರು ಮುಂದು ವರೆಯಬೇಕೆಂದು ಹೋರಾಟ ಸಮಿತಿಯ ಮುಖಂಡ ರಾದ ಸುಭಾಸ್‌ಚಂದ್ರಬೋಸ್ ಹೇಳಿದರು.

ಪಟ್ಟಣದ ವೀರಶೈವ ಕಲ್ಯಾಣ ಮಂಟಪದಲ್ಲಿ ದಾವಣಗೆರೆ ಜಿಲ್ಲೆಯಲ್ಲೇ ಜಗಳೂರು ಮುಂದುವರೆಯಬೇಕು ಎಂದು ಒತ್ತಾಯಿಸಲು ಕರೆದಿದ್ದ ಮುಖಂ ಡರುಗಳ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ, ಅವರು ಮಾತನಾಡಿದರು.

1997 ರಲ್ಲಿ ಗದ್ದಿಗೌಡರ್, ಹುಂಡೇ ಕರ್, ವಾಸುದೇವರ ಸಮಿತಿ ಆಧರಿಸಿ ಭೌಗೋಳಿಕವಾಗಿ ಆಗಿನ 20 ಜಿಲ್ಲೆಗಳನ್ನು 27 ಕ್ಕೆ ಏರಿಸಿ ಆಗಿನ ಮುಖ್ಯಮಂತ್ರಿ ಜೆ.ಹೆಚ್.ಪಟೇಲರು ಚಿತ್ರದುರ್ಗದಲ್ಲಿದ್ದ ದಾವಣಗೆರೆಯನ್ನು ಬೇರ್ಪಡಿಸಿ, ದಾವಣಗೆರೆ ಜಿಲ್ಲೆ ಮಾಡಿ, ದಾವಣಗೆರೆಗೆ ಜಗಳೂರು ಸೇರಿಸಿದ್ದರು. ದಾವಣಗೆರೆ ಸೇರಿ 25 ವರ್ಷಗಳಿಂದ ಜಗಳೂರು ಅಭಿವೃದ್ಧಿಯತ್ತ ಮುನ್ನಡೆಯುತ್ತಿರುವುದು ಜನರಿಗೆ ಸಾಕ್ಷಿಯಾಗಿದೆ ಎಂದರು.

ಹಿರಿಯ ವಕೀಲ ತುಪ್ಪದಹಳ್ಳಿ ಬಸವರಾಜಪ್ಪ ಮಾತನಾಡಿ, ಜಗಳೂರು ದಾವಣಗೆರೆಗೆ ಸೇರಿದ ನಂತರ ನೂತನ ಕೋರ್ಟ್ ಕಟ್ಟಡ, ಅಗ್ನಿಶಾಮಕ ಠಾಣೆ, ಐಟಿಐ ಕಾಲೇಜು, ಡಿಗ್ರಿ ಕಾಲೇಜು, ದಾವಣಗೆರೆಯಲ್ಲಿ ಉನ್ನತ ಶಿಕ್ಷಣ ಸೇರಿದಂತೆ ಹಲವಾರು ಸಲವತ್ತುಗಳು ಸಿಗುತ್ತಿವೆ. ಕೆಲವು ಜನರ ಸ್ವ-ಇತಾಸಕ್ತಿ ಯಿಂದ ಜಗಳೂರನ್ನು ಚಿತ್ರದುರ್ಗ ಜಿಲ್ಲೆಗೆ ಸೇರಿಸಬೇಕೆಂಬ ದೂರಾಲೋಚನೆ ಮಾಡಿರುವುದು ಸ್ಪಷ್ಟವಾಗಿ ಕಾಣುತ್ತದೆ. ಅದಕ್ಕೆ ಅವಕಾಶ ತಾಲ್ಲೂಕಿನ ಜನರು ಕೊಡುವುದಿಲ್ಲ ಎಂದರು.

ದಲಿತ ಸಮಾಜದ ಹಿರಿಯ ಮುಖಂಡ ಜಿ.ಹೆಚ್.ಶಂಭುಲಿಂಗಪ್ಪ ಮಾತನಾಡಿ, ಜಗಳೂರು ತಾಲ್ಲೂಕು ದಾವಣಗೆರೆ ಜಿಲ್ಲೆಗೆ ಸೇರಿದಾಗಿನಿಂದಲೂ ಜಗಳೂರಿಗೆ (5ನೇ ಪುಟಕ್ಕೆ)

### ಸಾರ್ವಜನಿಕರ ಪರವಾಗಿ ಇರುತ್ತೇನೆ : ಶಾಸಕ



ಮನವಿ ಸ್ವೀಕರಿಸಿ ಮಾತನಾಡಿದ ಶಾಸಕ ಬಿ. ದೇವೇಂದ್ರಪ್ಪ, ಜಗಳೂರು ಬೇರೆ ಜಿಲ್ಲೆಗೆ ಸೇರ್ಪಡೆ ವಿಚಾರ ನನ್ನ ಗಮನಕ್ಕೆ ಇಲ್ಲ, ದಾವಣಗೆರೆ ಜಿಲ್ಲೆಯಲ್ಲೇ ಜಗಳೂರು ಉಳಿಸಿಕೊಳ್ಳಬೇಕು ಎಂದು ಅಭಿಪ್ರಾಯಗಳು ಬಂದಿವೆ. ಆದರೆ ಸಾರ್ವಜನಿಕರಿಗೆ ಎಲ್ಲಿ ಹಿತವೆನಿಸುತ್ತದೆಯೋ ಅವರ ಪರವಾಗಿ ನಾನು ಇರುತ್ತೇನೆ ಎಂದು ತಿಳಿಸಿದರು.

ಚಿತ್ರದುರ್ಗಕ್ಕೆ ಮರು ಸೇರ್ಪಡೆಯಾದರೆ ಸಾಕಷ್ಟು ಸಮಸ್ಯೆ, ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಹಾಗಾಗಿ (5ನೇ ಪುಟಕ್ಕೆ)

# ಐಟಿ ದಾಳಿ ಹಣ ಎಣಿಕೆ ಪೂರ್ಣ ಒಟ್ಟು 351 ಕೋಟಿ ರೂ. ಪತ್ತೆ

**200 ಚೀಲ, ಟ್ರಂಕ್‌ಗಳಲ್ಲಿ ಹಣ ಬ್ಯಾಂಕ್‌ಗಳಿಗೆ ರವಾನೆ**

ನವದೆಹಲಿ, ಡಿ. 10 – ಕಾಂಗ್ರೆಸ್ ಸಂಸದರ ಕುಟುಂಬದ ಮಾಲೀಕತ್ವದ ಒಡಿಶಾ ಡಿಸ್ಟಿಲರಿ ಕಂಪನಿ ಮೇಲೆ ನಡೆಸಲಾದ ಆದಾಯ ತೆರಿಗೆ ಇಲಾಖೆ (ಐ.ಟಿ.) ದಾಳಿಯಲ್ಲಿ ಒಟ್ಟು 351 ಕೋಟಿ ರೂ.ಗಳ ನಗದು ಪತ್ತೆಯಾಗಿದೆ. ಆದಾಯ ತೆರಿಗೆ ಇಲಾಖೆ ನಡೆಸಿದ ಒಂದೇ ದಾಳಿಯಲ್ಲಿ ಪತ್ತೆಯಾದ ಅತಿ ದೊಡ್ಡ ಮೊತ್ತ ಇದಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಜಾರ್ಖಂಡ್‌ನ ಕಾಂಗ್ರೆಸ್ ರಾಜ್ಯಸಭಾ ಸದಸ್ಯ ಧೀರಜ್ ಪ್ರಸಾದ್ ಸಾಹು ಹಾಗೂ ಅವರ ಕುಟುಂಬದ ಬೌಧ್ ಡಿಸ್ಟಿಲರಿ ಕಂಪನಿಗೆ ಸಂಬಂಧಿಸಿದ ತಾಣಗಳ ಮೇಲೆ ದಾಳಿ ನಡೆಸಲಾಗಿತ್ತು.

ಸುದೀರ್ಘ ಐದು ದಿನಗಳ ಕಾಲ ನಡೆದ ದಾಳಿ ಭಾನುವಾರ ಅಂತ್ಯವಾಗಿದೆ. ಡಿಸೆಂಬರ್ 6ರಂದು ದಾಳಿ ಆರಂಭಿಸಲಾಗಿತ್ತು. ಈ ವೇಳೆ ಒಟ್ಟು 351 ಕೋಟಿ ರೂ. ನಗದು ವಶಪಡಿಸಿಕೊಳ್ಳಲಾಗಿದೆ. ನಗದಿನ ಎಣಿಕೆ ಪೂರ್ಣಗೊಂಡಿದೆ.

ಆದಾಯ ತೆರಿಗೆ ಇಲಾಖೆ ಹಾಗೂ ಹಲವು ಬ್ಯಾಂಕ್‌ಗಳ ಸುಮಾರು 80 ಸಿಬ್ಬಂದಿಗಳ ಒಂಭತ್ತು ತಂಡಗಳು ದಿನದ 24 (4ನೇ ಪುಟಕ್ಕೆ)

# ಲಾರಿಗಳಿಗೆ ಎ.ಸಿ. ಕ್ಯಾಬಿನ್ ಕಡ್ಡಾಯ

ನವದೆಹಲಿ, ಡಿ. 10 – ಬರುವ ಅಕ್ಟೋಬರ್ 1, 2025ರಿಂದ ಎಲ್ಲಾ ಹೊಸ ಲಾರಿ ಉತ್ಪಾದಕರು ಚಾಲಕರಿಗೆ ಎ.ಸಿ. ಕ್ಯಾಬಿನ್ ಅಳವಡಿಸುವುದು ಕಡ್ಡಾಯವಾಗಿದೆ. ಈ ಬಗ್ಗೆ ಕೇಂದ್ರ ಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯ ಅಧಿಸೂಚನೆ ಹೊರಡಿಸಿದೆ.

ಎನ್2 ಹಾಗೂ ಎನ್3 ದರ್ಜೆಯ ವಾಹನಗಳ ಚಾಲಕರ ಕ್ಯಾಬಿನ್‌ಗಳಿಗೆ ಎ.ಸಿ. ಅಳವಡಿಕೆ ಕಡ್ಡಾಯವಾಗಿದೆ. ಕಡ್ಡಾಯಗೊಳಿಸುವ ಎ.ಸಿ.ಗಳು ಐ.ಎಸ್.ಐ. 4618:2022 ದರ್ಜೆಯವಾಗಿರಬೇಕು.

ಲಾರಿ ಕ್ಯಾಬಿನ್‌ಗಳಿಗೆ ಎ.ಸಿ. ಕಡ್ಡಾಯಗೊಳಿಸುವ ಕರಡು ಅಧಿಸೂಚನೆಗೆ ಒಪ್ಪಿಗೆ ನೀಡಲಾಗಿದೆ ಎಂದು ಕಳೆದ ಜುಲೈನಲ್ಲಿ ಕೇಂದ್ರ ಹೆದ್ದಾರಿ ಹಾಗೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದ್ದರು.



# ಅಪಾಯದಲ್ಲಿರುವ ಸಂವಿಧಾನದ ರಕ್ಷಣೆಗೆ ಪ್ರಜ್ಞಾವಂತರು ಪಣ ತೊಡಬೇಕಾಗಿದೆ

## ಕ.ದ.ಸಂ.ಸ ರಾಜ್ಯ ಸಂಚಾಲಕ ಎಂ. ಗುರುಮೂರ್ತಿ ಶಿವಮೊಗ್ಗ

ಹರಿಹರ, ಡಿ.10- ದಲಿತರು, ಶೋಷಿತರು, ಮಹಿಳೆಯರಿಗೆ ಇಂದು ಸಿಗುತ್ತಿರುವ ಹಕ್ಕುಗಳಿಗೆ ಕಾರಣವಾಗಿರುವ ಸಂವಿಧಾನವು ಆರಾಧನೆಗೆ ಯೋಗ್ಯವಾಗಿದೆಯೆ ಹೊರತು ಯಾವುದೇ ಧರ್ಮ ಅಥವಾ ಅಧ್ಯಾತ್ಮಿಕ ದೇವ, ದೇವತೆಗಳಲ್ಲ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ. ಕೃಷ್ಣಪ್ಪ ಸ್ಥಾಪಿತ) ರಾಜ್ಯ ಸಂಚಾಲಕ ಎಂ. ಗುರುಮೂರ್ತಿ ಶಿವಮೊಗ್ಗ ಹೇಳಿದರು.

ನಗರದ ಅಕ್ಷಯ ಆಸ್ಪತ್ರೆ ಆವರಣದಲ್ಲಿ ಭಾನುವಾರ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ), ಅಕ್ಷಯ ಆಸ್ಪತ್ರೆ, ಐ ದೃಷ್ಟಿ ಕಣ್ಣಿನ ಆಸ್ಪತ್ರೆ, ಬೇಬಿ ಸೈನ್ಸ್, ಎಸ್.ಎಸ್. ನಾರಾಯಣ ಹಾರ್ಟ್ ಆಸ್ಪತ್ರೆ ಸಹಯೋಗದಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ರವರ 67ನೇ ಮಹಾಪರಿನಿಬ್ಬಾಣ ದಿನದ ನಿಮಿತ್ತ ಡಾ.ಬಿ.ಆರ್. ಅಂಬೇಡ್ಕರ್ ಸದ್ಭಾವನ ಪ್ರಶಸ್ತಿ ಪ್ರಧಾನ ಸಮಾರಂಭ ಹಾಗೂ ವಿಚಾರ ಸಂಕಿರಣ ಮತ್ತು ಉಚಿತ ಆರೋಗ್ಯ ಶಿಬಿರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕೆಲವರು ಹೆಮ್ಮೆ ಎಂದು ಕರೆಯುವ ಭಾರತೀಯ ಪರಂಪರೆಗಳು ಮಹಿಳೆಯನ್ನು ಮನೆಯ ನಾಲ್ಕು ಗೋಡೆ ಮಧ್ಯೆ ಬಂಧಿಸಿತ್ತು. ಆ ಮಹಿಳೆ ಶಿಕ್ಷಣ ಪಡೆಯಲು, ಸಾರ್ವಜನಿಕ ಬದುಕು ನಡೆಸಲು, ಉದ್ಯೋಗಿಗಳಿಗೆ ಹೆರಿಗೆ ರಜೆ, ಮತದಾನದ ಹಕ್ಕು ಸೇರಿದಂತೆ ಇತ್ಯಾದಿ ಹಕ್ಕುಗಳು ಡಾ. ಅಂಬೇಡ್ಕರ್ ರಚಿಸಿದ ಕಾನೂನುಗಳಿಂದ ಲಭಿಸಿವೆ.

ಇಂತಹ ಡಾ.ಅಂಬೇಡ್ಕರ್‌ರವರು ಮಹಿಳೆಯರಿಗೆ ಆದರ್ಶವಾಗುವ ಬದಲು ತನ್ನ ಪತ್ನಿ ಸೀತೆಯನ್ನು ಕಾಡಿಗಟ್ಟಿದ ಶ್ರೀರಾಮ ಇವರನ್ನು ಆದರ್ಶ ಪುರುಷ ಎಂದು ಮಹಿಳೆಯರು ಆರಾಧಿಸುವುದು ಸರಿಯೇ ಎಂದು ಪ್ರಶ್ನಿಸಿದ ಅವರನ್ನು ದೇವಸ್ಥಾನಗಳ ಪ್ರವೇಶದಿಂದ ಹೊರಗಿಡುವ ಧರ್ಮದ ಬದಲು ಈ ದೇಶದ ರಾಷ್ಟ್ರಪತಿ, ಪ್ರಧಾನಿ, ಮುಖ್ಯಮಂತ್ರಿಯಂತಹ ಅಧಿಕಾರ ದೊರಕಿಸುವ ಸಂವಿಧಾನವೇ ನಮಗೆಲ್ಲಾ ಶ್ರೇಷ್ಠ ಹಾಗೂ ಆದರ್ಶವಾಗಬೇಕೆಂದು ಪ್ರತಿಪಾದಿಸಿದರು.

ದೇಶದ ದಲಿತರು, ಶೋಷಿತರು, ಮಹಿಳೆಯರಿಗೆ ಸಮಾನ ಹಕ್ಕು ಕೊಡಿಸಿದ ಸಂವಿಧಾನದ ರಕ್ಷಣೆ ಮಾಡಬೇಕಾದವರ ಮಕ್ಕಳು ಇಂದು ಗಂಟೆ ಬಾರಿಸುತ್ತಿದ್ದಾರೆ, ಗಂಟೆ ಭಾರಿಸುವವರ ಮಕ್ಕಳು ಇಂದು ಸಂವಿಧಾನ ಬದಲಿಸಬೇಕೆಂಬ ಹುನ್ನಾರ ನಡೆಸುತ್ತಿದ್ದಾರೆ. ಸಂವಿಧಾನದ ಸ್ಥಾನ ಇಂದು ಅಪಾಯದಲ್ಲಿದ್ದು ಅದರ ರಕ್ಷಣೆಗೆ ಪ್ರಜ್ಞಾವಂತರು ಪಣ ತೊಡಬೇಕಾಗಿದೆ ಎಂದರು.



ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಹಿರಿಯೂರು ಕೋಡಿಹಳ್ಳಿ ಮಠದ ಷಡಕ್ಷರಮುನಿ ದೇಶೀಕೇಂದ್ರ ಶ್ರೀಗಳು ಮಾತನಾಡಿ, ಪ್ರತಿಯೊಬ್ಬರು ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕೆಂದರು.

ಸಾಧಕರಿಗೆ ಪುರಸ್ಕರಿಸಿದ ಶಾಸಕ ಬಿ.ಪಿ. ಹರೀಶ್‌ಮಾತನಾಡಿ, ಇಂದು ಆರೋಗ್ಯಯುತವಾಗಿ ಕಾಣುವ ವ್ಯಕ್ತಿ ಮಾರನೇ ದಿನ ಮರಣ ಹೊಂದುವ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿವೆ. ನಮಗಾಗಿ ಅಲ್ಲದಿದ್ದರೂ ನಮ್ಮನ್ನು ನಂಬಿರುವ ಕುಟುಂಬದವರಿಗಾಗಿ ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕೆಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕ.ದ.ಸಂ.ಸ ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್ ಮಾತನಾಡಿ, 2012ರಲ್ಲಿ ಭದ್ರಾವತಿ ನ್ಯಾಯಾಲಯ ಎಂ.ಗುರುಮೂರ್ತಿಯವೇ ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ ಸಂಘಟನೆಯ ವಾರಸುದಾರರು ಎಂದು ಘೋಷಣೆ ಮಾಡಿದೆ. ಹೈಕೋರ್ಟ್ ಕೂಡ ಈ ತೀರ್ಪನ್ನು ಎತ್ತಿ ಹಿಡಿದಿದೆ. ಆದರೂ ಕೂಡ ಇತ್ತೀಚಿಗೆ ಕೆಲವರು ಪ್ರೊ.ಬಿ.ಕೃಷ್ಣ ಸ್ಥಾಪಿತ ಸಂಘಟನೆ ಎಂದು ದಾರಿ ತಪ್ಪಿಸುತ್ತಿದ್ದಾರೆ. 26 ವರ್ಷಗಳ ಹಿಂದೆ ಮರಣ ಹೊಂದಿರುವ ಪ್ರೊ.ಕೃಷ್ಣಪ್ಪನವರು ಅದು ಹೇಗೆ ಬಂದು ಹೊಸ ಸಂಘಟನೆ ನೋಂದಾಯಿಸಿದರು. ಸಮಾಜದಲ್ಲಿ ಗೊಂದಲ ಮೂಡಿಸುವ ಕೆಲಸ ಮಾಡಬಾರದು ಎಂದು ಕಿವಿ ಮಾತು ಹೇಳಿದರು.

ಮಾಜಿ ಶಾಸಕ ಎಸ್.ರಾಮಪ್ಪ ಪ್ರಶಸ್ತಿ ಪ್ರದಾನ ಮಾಡಿದರು. ಅಕ್ಷಯ ಆಸ್ಪತ್ರೆ ಮುಖ್ಯಸ್ಥ ಡಾ. ನಾಗರಾಜ ವಿ.ಟಿ., ಕ.ದ.ಸಂ.ಸ ಜಿಲ್ಲಾ ಸಂಚಾಲಕ ಕುಂದುವಾಡ ಮಂಜುನಾಥ್, ವೆಂಕಟೇಶ್ ತೇಲ್ಕರ್, ಅಂಜುಮನ್ ಸಂಸ್ಥೆ ಅಧ್ಯಕ್ಷ ಸೈಯದ್ ಏಜಾಜ್, ಹರಳಹಳ್ಳಿ ಗ್ರಾಪಂ ಅಧ್ಯಕ್ಷ ಎಚ್. ಎಂ.ಹನುಮಂತಪ್ಪ, ಗುಳದಹಳ್ಳಿ ಮಂಜಪ್ಪ, ಹನುಮಂತಪ್ಪ, ತಿಮ್ಮಣ್ಣ ಕಡ್ಲೆಗೊಂದಿ, ಭಾನುವಳ್ಳಿ ಗ್ರಾಪಂ ಸದಸ್ಯ ಮಂಜಪ್ಪ, ಕೆಂಚಪ್ಪ, ಚೌಡಪ್ಪ ಸಿ. ಭಾನುವಳ್ಳಿ, ಜಯಪ್ಪ ಜಿಗಳಿ, ಚೌಡಪ್ಪ, ಅಂಜನಿ ಯಲವಟ್ಟಿ, ನಳಿನಿ, ಬಿ.ಆರ್.ಹನುಮಂತಪ್ಪ, ಅಣ್ಣಪ್ಪ ಅಜ್ಜೇರ್ ಇದ್ದರು.

ಈ ಸಂದರ್ಭದಲ್ಲಿ ಪತ್ರಕರ್ತರಾದ ಶೇಖರ್ ಗೌಡ ಪಾಟೀಲ್, ಜಿಗಳಿ ಪ್ರಕಾಶ್, ಬಿ.ವಾಸುದೇವ, ಎಂ.ಚಿದಾನಂದ ಕಂಚಿಕೇರಿ, ಎಂ.ಕೆ.ರಾಮಶೆಟ್ಟಿ, ಎಚ್.ಎಂ.ಸದಾನಂದ, ಪಿಎಸ್‌ಐ ಎಸ್. ಬಿ.ಚಿದಾನಂದಪ್ಪ, ಹೊನ್ನಾಳಿ ಶಿಕ್ಷಕ ಚನ್ನೇಶ್ವರ ಎ.ಕೆ. ಇವರಿಗೆ ಡಾ.ಬಿ.ಆರ್.ಅಂಬೇಡ್ಕರ್ ಸದ್ಭಾವನಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

## ತಹಶೀಲ್ದಾರ್‌ಗೆ ಬೆದರಿಕೆ ಕರೆ



ನ್ಯಾಮತಿ, ಡಿ. 10 - ಲೋಕಾಯುಕ್ತ ಕಚೇರಿ ಹೆಸರಿನಲ್ಲಿ ನ್ಯಾಮತಿ ತಹಶೀಲ್ದಾರ್‌ಗೆ ಬೆದರಿಕೆ ಕರೆ ಬಂದಿದ್ದು, ಈ ಬಗ್ಗೆ ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಪ್ರಕರಣ ದಾಖಲಾಗಿದ್ದು ತಡವಾಗಿ ಬೆಳಕಿಗೆ ಬಂದಿದೆ.

ನ್ಯಾಮತಿ ತಹಶೀಲ್ದಾರ್ ಆಗಿ ಇತ್ತೀಚಿಗೆ ಅಧಿಕಾರ ವಹಿಸಿಕೊಂಡಿರುವ ಎಚ್.ಬಿ. ಗೋವಿಂದಪ್ಪನವರ ಮೊಬೈಲ್‌ಗೆ ಕರೆ ಮಾಡಿ ಅಪರಿಚಿತ ವ್ಯಕ್ತಿ ಲೋಕಾಯುಕ್ತ ಕಚೇರಿಯ ಡಿವೈಎಸ್ಪಿ ಎಂದು ಪರಿಚಯಿಸಿಕೊಂಡಿದ್ದಾನೆ. ಬಳಿಕ ಅವರ ವಿವರಗಳನ್ನು ಪಡೆದುಕೊಂಡು, 'ನಿಮ್ಮ ಮೇಲೆ ಬೆಂಗಳೂರಿನ ಎಂ.ಎಸ್. ಬಿಲ್ಡಿಂಗ್‌ನಲ್ಲಿರುವ ಲೋಕಾಯುಕ್ತ ಕಚೇರಿಯಲ್ಲಿ ಎಫ್‌ಐಆರ್ ದಾಖಲಾಗಿದೆ. ಈ ಸಂಬಂಧ ಲೋಕಾಯುಕ್ತ ಎಸ್‌ಪಿ ಮತ್ತು ಸಿಬ್ಬಂದಿ ನೀವು ಕೆಲಸ ಮಾಡುತ್ತಿರುವ ಸ್ಥಳ ಮತ್ತು ವಾಸವಿರುವ ಮನೆಯ ಮೇಲೆ ದಾಳಿ ಮಾಡಲು ತಯಾರಿ ಮಾಡಿಕೊಂಡಿದ್ದಾರೆ' ಎಂದು ಹೇಳಿದ್ದಾನೆ.

ನಿಮ್ಮ ಬಗ್ಗೆ ವಿಚಾರ ಮಾಡಿದಾಗ ನೀವು ಒಳ್ಳೆಯವರು ಎಂದು ತಿಳಿದು ಬಂದಿದೆ. ಮೇಲಾಧಿಕಾರಿಗಳಿಗೆ ದಾಳಿ ಮಾಡದಂತೆ ತಿಳಿಸಿದ್ದೇನೆ. ಆದ್ದರಿಂದ ನಾನು ಹೇಳಿದ ಎರಡು ನಂಬರ್‌ಗಳಿಗೆ ತಕ್ಷಣ 2 ಲಕ್ಷ ರೂ. ಕಳುಹಿಸಿ ಎಂದಿದ್ದಾನೆ. ಪದೇ ಪದೇ ಕರೆ ಮಾಡಿ ಹಣ ಹಾಕಲು ಒತ್ತಾಯ ಮಾಡಿದ. ಹಣ ಹಾಕಲು ಒಪ್ಪದಿದ್ದಾಗ 'ನಿನಗೆ ಮುಂದೆ ಏನು ಮಾಡಬೇಕು ಎಂದು ಗೊತ್ತಿದೆ ಎಂದು ಪ್ರಾಣ ಬೆದರಿಕೆ ಹಾಕಿದ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಪ್ರಾಣ ಬೆದರಿಕೆ ನೀಡಿರುವ ವ್ಯಕ್ತಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ತಹಶೀಲ್ದಾರ್ ಎಚ್.ಬಿ. ಗೋವಿಂದಪ್ಪ ದೂರಿನಲ್ಲಿ ತಿಳಿಸಿದ್ದಾರೆ.

## ಆನಗೋಡು ಬಳಿ ಅಪಘಾತ : ಸಾವು

ದಾವಣಗೆರೆ, ಡಿ.10- ತನ್ನ ಕುಟುಂಬದೊಂದಿಗೆ ಆನಗೋಡಿನ ಇಂದಿರಾ ಪ್ರಿಯದರ್ಶಿನಿ ಪಾರ್ಕ್ ನೋಡಲು ಹೊರಟಿದ್ದ ಬೈಕ್ ಸವಾರನಿಗೆ ಹಿಂಬದಿಯಿಂದ ಮಹೀಂದ್ರಾ ವಾಹನವು ಡಿಕ್ಕಿ ಹೊಡೆದ ಪರಿಣಾಮ ಆತ ಸಾವಿಗೀಡಾಗಿರುವ ಘಟನೆ ನಡೆದಿದೆ. ಗ್ರಂಥಾಲಯದಲ್ಲಿ ಅಟೆಂಡರ್ ಆಗಿದ್ದ ಕೆಟಿಜೆ ನಗರದ ಷಫೀವುಲ್ಲಾ ಅವರು ತನ್ನ ಹೆಂಡತಿ ರೇಷ್ಮಾ, ಮಕ್ಕಳಾದ ಆಫೀಯಾ, ಆಸ್ಮೀಯಾ ಅವರುಗಳನ್ನು ಕರೆದುಕೊಂಡು ತನ್ನ ದ್ವಿಚಕ್ರ ವಾಹನ ಆಕ್ಟಿವಾ ಹೊಂಡಾದಲ್ಲಿ ಮಧ್ಯಾಹ್ನ 2.30 ರ ಸಮಯದಲ್ಲಿ ಹೋಗುತ್ತಿದ್ದಾಗ ಈ ಘಟನೆ ಸಂಭವಿಸಿದ್ದು, ತೀವ್ರ ಗಾಯಗೊಂಡಿದ್ದ ಶಫೀವುಲ್ಲಾ ಅವರನ್ನು ಎಸ್ಸೆಸ್ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಶಫೀವುಲ್ಲಾ ಮೃತಪಟ್ಟಿದ್ದಾರೆ. ಹೆಂಡತಿ ಹಾಗೂ ಮಕ್ಕಳು ಸ್ಥಿತಿ ಗಂಭೀರವಾಗಿದೆ.

## ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ರಾಹುಲ್ ಗಾಂಧಿಗೆ ಆಹ್ವಾನ

ಹರಪನಹಳ್ಳಿ, ಡಿ. 10 - ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರನ್ನು ಸ್ಪರ್ಧೆಗೆ ಆಹ್ವಾನಿಸುವುದಾಗಿ ಕೆಪಿಸಿಸಿ ಸದಸ್ಯ ಕಲ್ಲೇಶ್‌ರಾಜ್ ಪಟೇಲ್ ತಿಳಿಸಿದ್ದಾರೆ.

ಕೇಂದ್ರದಲ್ಲಿ ಸರ್ಕಾರ ರಚಿಸಲು ಕಾಂಗ್ರೆಸ್ ಪಕ್ಷಕ್ಕೆ ಉತ್ತಮ ಅವಕಾಶವಿದ್ದು, ರಾಹುಲ್ ಗಾಂಧಿಯವರು ಸ್ಪರ್ಧಿಸಲು ಇಚ್ಚಿಸಿದರೆ ದಾವಣಗೆರೆ ಕ್ಷೇತ್ರದಿಂದ ಸ್ವತಃ ಟಿಕೆಟ್ ಆಕಾಂಕ್ಷಿಯಾಗಿರುವ ನಾನು ಹಾಗೂ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಸಹ ಸಂತೋಷದಿಂದ ಸ್ವಾಗತಿಸುವುದಾಗಿ ಹೇಳಿದರು.

**ಆಕಾಂಕ್ಷಿ:** ರಾಹುಲ್ ಗಾಂಧಿಯವರು ಸ್ಪರ್ಧೆಯಾಗದಿದ್ದರೆ ನಾನು ಸಹ ದಾವಣಗೆರೆ ಲೋಕಸಭಾ ಕ್ಷೇತ್ರದ ಆಕಾಂಕ್ಷಿಯಾಗಿದ್ದೇನೆ ಎಂದ ಅವರು, ನಾನೂ ಎನ್‌ಎಸ್‌ಯುಐ ವಿದ್ಯಾರ್ಥಿ ಸಂಘಟನೆಯಿಂದ ತಳಮಟ್ಟದ ಕಾರ್ಯಕರ್ತನಾಗಿ ಇಂದು ಕೆಪಿಸಿಸಿ ಸದಸ್ಯರಾಗಿ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಕೆಲಸ ಮಾಡಿರುವ ಹಿನ್ನೆಲೆಯಲ್ಲಿ ನಾನು ಸಹ ಈ ಕ್ಷೇತ್ರದ ಆಕಾಂಕ್ಷಿಯಾಗಿದ್ದೇನೆ ಎಂದರು.

ಮುಂಬೈ-ಪುನಾ-ಬೆಂಗಳೂರು ರಸ್ತೆಗೆ ಸಂಪರ್ಕಿಸುವ ಹರಪನಹಳ್ಳಿ ಹಸಿರು ರಾಷ್ಟ್ರೀಯ ಹೆದ್ದಾರಿಯನ್ನು ಹಿಂದೆ ಸೇರಿಸಲಾಗಿತ್ತು. ಆದರೆ ಪ್ರಸ್ತುತ ಸಂಸದ ಜಿ.ಎಂ.ಸಿದ್ದೇಶ್ವರರವರು ಈ ಬಗ್ಗೆ ನಿರ್ಲಕ್ಷ್ಯ ವಹಿಸಿದ್ದು, ಅದನ್ನು ಪುನಃ ಸೇರ್ಪಡೆ ಮಾಡಿ, ಹಸಿರು ರಾಷ್ಟ್ರೀಯ ಹೆದ್ದಾರಿಯನ್ನು ಅಭಿವೃದ್ದಿಗೊಳಿಸಬೇಕು ಎಂದು ಹೇಳಿದರು.

## ಸನ್ಮಾನಕ್ಕೆ ಮಾಜಿ ಸೈನಿಕರಿಂದ ಅರ್ಜಿ

ದಾವಣಗೆರೆ, ಡಿ.10- ಶಿವಮೊಗ್ಗದ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ವತಿಯಿಂದ ಇದೇ ದಿನಾಂಕ 16 ರಂದು ನಡೆಯಲಿರುವ 'ವಿಜಯ ದಿವಸ'ದ ಅಂಗವಾಗಿ 1971ರ ಯುದ್ದದಲ್ಲಿ ಸಕ್ರಿಯ ವಾಗಿ ಭಾಗವಹಿಸಿದ ಮಾಜಿ ಸೈನಿಕರಿಂದ ಸನ್ಮಾನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಯುದ್ದದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಮಾಜಿ ಸೈನಿಕರು ತಮ್ಮ ಮಾಜಿ ಸೈನಿಕ ಗುರುತಿನ ಚೀಟಿ ಮತ್ತು ಪೂರ್ವ ಅಥವಾ ಪಶ್ಚಿಮ ಮೆಡಲ್‌ಗಳನ್ನು ಹೊಂದಿರುವ ಸ್ವವಿವರಗಳನ್ನೊಳಗೊಂಡ ಮಾಹಿತಿಯನ್ನು soldiersshimoga@gmail.com ಅಥವಾ ದೂ.08182-220925ಗೆ ಕರೆ ಮಾಡಿ ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಶಿವಮೊಗ್ಗ ದೂ.08182-220925ಗೆ ಸಂಪರ್ಕಿಸಲು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಪ್ರಭಾರ ಉಪ ನಿರ್ದೇಶಕ ಡಾ. ಸಿ.ಎ ಹಿರೇಮಠ್ ತಿಳಿಸಿದ್ದಾರೆ.

## ಕೊಟ್ಟೂರಿನಲ್ಲಿ ಗವಾಯಿ ಅವರ ಸ್ವರ ಶ್ರದ್ಧಾಂಜಲಿ



ಉಭಯ ಗಾನ ವಿಶಾರದರು, ತ್ರಿಭಾಷಾ ಕವಿವರ್ಯ, ಸಕಲ ವಾದ್ಯ ಕಂಠೀರವ ನಾಡೋಜ ಹಾಗೂ ಕಾಳಿದಾಸ ಪ್ರಶಸ್ತಿ ವಿಜೇತರು ಪರಮಪೂಜ್ಯ ಪಂಡಿತ್ ಪುಟ್ಟರಾಜ ಗವಾಯಿಗಳವರ ಹದಿನಾಲ್ಕನೇ ಸ್ವರ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಇಂದು ಸಂಜೆ 6 ಗಂಟೆಗೆ ಕೊಟ್ಟೂರಿನ ಕಾಲೇಜಿನಲ್ಲಿ ಆಯೋಜಿಸಲಾಗಿದೆ. ಸಂಜೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕರಾದ ಸಿದ್ದಾರ್ಥ್ ಬೆಳ್ಮಣ್ಣು ಇವರಿಂದ ಸಂಗೀತ ಕಾರ್ಯಕ್ರಮವಿರುತ್ತದೆ ಹಾಗೂ ಇವರೊಂದಿಗೆ ತಬಲಾ ಸಾಥಿಯಾಗಿ ಹೆಸರಾಂತ ತಬಲಾ ವಾದಕ ಶ್ರೀಧರ ಮಾಂಡ್ರೆ, ಹಾರ್ಮೋನಿಯಂ ವಾದಕ ಸತೀಶ್ ಭಟ್ ಹೆಗ್ಗಾರ್, ತಾಳವಾದ್ಯದೊಂದಿಗೆ ಸಂತೋಷ್ ಅಳವಂಡಿ (ದೀಕ್ಷಿತ್) ಜೊತೆಯಾಗಲಿದ್ದಾರೆ ಎಂದು ಪಂಡಿತ ಪುಟ್ಟರಾಜ ಗವಾಯಿಗಳವರ ಸೇವಾ ಸಮಿತಿಯ ಸುಧಾಕರ ಪಾಟೀಲ್ ತಿಳಿಸಿದ್ದಾರೆ.

## ಸ್ವಾತಂತ್ರ್ಯ ಹೋರಾಟಗಾರ ಕುಟುಂಬಸ್ಥರ ಸತ್ಯಾಗ್ರಹ

ಹಾವೇರಿ, ಡಿ.10- ಇದೇ ದಿನಾಂಕ 12ರಂದು ಬೆಳಗಾವಿಯ ಸುವರ್ಣ ಸೌಧದ ಆವರಣದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬಸ್ಥರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಶಾಂತಿಯುತ ಪ್ರತಿಭಟನಾ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗಿದೆ. ರಾಜ್ಯದ ಎಲ್ಲ ಸ್ವಾತಂತ್ರ್ಯ ಹೋರಾಟಗಾರರು, ಸಂಘದ ಪದಾಧಿಕಾರಿಗಳು, ಸದಸ್ಯರು ಮತ್ತು ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದ ವಂಶಸ್ಥರು ಭಾಗವಹಿಸುವಂತೆ ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಹಾಗೂ ಉತ್ತರಾಧಿಕಾರಿಗಳ ಸಂಘದ ಅಧ್ಯಕ್ಷ ಚಂದ್ರಶೇಖರ ಕರೇಗೌಡ ಹಲಗೇರಿ ಮತ್ತು ಪ್ರಧಾನ ಕಾರ್ಯದರ್ಶಿ ಶಿವಯೋಗಯ್ಯ ಬಿ.ಲೋಕನಗೌಡ್ರ ತಿಳಿಸಿದ್ದಾರೆ.

## ಕಾರ್ಮಿಕರಿಂದ ಬೇಡಿಕೆಗಳ ಜಾರಿಗೆ ಸಚಿವ ಪ್ರಿಯಾಂಕ ಖರ್ಗೆ ಮನವಿ



ರಾಣೇಬೆನ್ನೂರು, ಡಿ. 10 - ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಯೋಜನೆಯ ಕೆಲಸದ ದಿನಗಳನ್ನು 2 ನೂರಕ್ಕೇರಿಸುವ, ದಿನಗೂಲಿಯನ್ನು 5 ನೂರಕ್ಕೇರಿಸುವ, ಇದುವರೆಗೂ ನೀಡದಿರುವ ಅನುಷ್ಠಾನದ ಮೇಟಿಗಳ ಗೌರವ ಧನವನ್ನು ಈ ಕೂಡಲೇ ಬಿಡುಗಡೆ ಮಾಡಬೇಕು,

ಯೋಜನೆಯ ಕಾರ್ಮಿಕರ ಮಕ್ಕಳಿಗೆ ಕಾರ್ಮಿಕ ಇಲಾಖೆಯ ಶಿಷ್ಯವೇತನ ಬಿಡುಗಡೆ ಮಾಡಬೇಕು, ಸಾಮಾಜಿಕ ಭದ್ರತಾ ಯೋಜನೆಯನ್ವಯ ಕಾರ್ಮಿಕರಿಗೆ 5 ಸಾವಿರ ನಿವೃತ್ತಿ ವೇತನ ಹಾಗೂ ಜೀವ ವಿಮೆ ಸೌಲಭ್ಯ ಕಲ್ಪಿಸಬೇಕು ಎಂದು ಹಾವೇರಿ ಜಿಲ್ಲೆ ಕೂಲಿ ಕಾರ್ಮಿಕರ ಸಂಘಟನೆ ಒತ್ತಾಯಿಸಿದೆ.

ರಾಣೇಬೆನ್ನೂರಿನ ವನಸಿರಿ ಸಂಸ್ಥೆಯ ಸಂಚಾಲಕ ಎಸ್.ಡಿ. ಬಳೆಗಾರ ನೇತೃತ್ವದಲ್ಲಿ ತೆರಳಿ ಸಚಿವ ಪ್ರಿಯಾಂಕ ಖರ್ಗೆ ಅವರ ವಿಧಾನಸೌಧದ ಕಛೇರಿಯಲ್ಲಿ ಭೇಟಿಯಾಗಿ ಮನವಿ ಸಲ್ಲಿಸಿದರು. ಶಂಕ್ರಯ್ಯ ಕಳಸೂರಮಠ, ರತ್ನಾ ಮತ್ತಿಹಳ್ಳಿ, ಗುತ್ತೆಮ್ಮ ಸುಣಗಾರ, ಲಲಿತಮ್ಮ ಚನ್ನಳ್ಳಿ, ರೂಪಾ ಸರವಂದ, ದೀಪಾ ಕಜ್ಜರಿ, ಯಲ್ಲಪ್ಪ ಹುಳಬುತ್ತಿ, ನಾಗರಾಜ ಹಾವನೂರ, ಸಚಿನ್ ಬೂದಿಹಾಳ, ಹನುಮಂತಪ್ಪ ಬ್ಯಾಡಗಿ, ಅಶೋಕ ಬೂದಿಹಾಳ ಮತ್ತಿತರರಿದ್ದರು.

## ಚನ್ನಗಿರಿಯಲ್ಲಿ ಇಂದು ಶಿಶಿಕ್ಷು ಮೇಳ

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ವತಿಯಿಂದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಜಿಲ್ಲಾ ಮಟ್ಟದ ರಾಷ್ಟ್ರೀಯ ಶಿಶಿಕ್ಷು ಮೇಳವನ್ನು ಇಂದು ಆಯೋಜಿಸಲಾಗಿದೆ. ಐ.ಟಿ.ಐ, ಡಿಪ್ಲೋಮಾ ಪೂರೈಸಿದ ನಿರುದ್ಯೋಗಿ ಯುವಕ, ಯುವತಿಯರು ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳು ಸಹ ಮೇಳದಲ್ಲಿ ಭಾಗವಹಿಸಬಹುದು. ವಿವರಕ್ಕೆ ಮೊಬೈಲ್ 9844710844, 9901602345 ಹಾಗೂ 9902908395ಗೆ ಸಂಪರ್ಕಿಸಬಹುದು.

## ಶಿವಯೋಗದಿಂದ ಮನೋಒತ್ತಡಕ್ಕೆ ಮುಕ್ತಿ

**(1ನೇ ಪುಟದಿಂದ)** ದೇವಾಲಯಗಳು ನಿರ್ಮಾಣವಾದವು.

ವಿದ್ಯೆಗೆ ಸರಸ್ವತಿ, ಐಶ್ವಯಕ್ಕೆ ಲಕ್ಷ್ಮಿ, ವಿಘ್ನ ನಿವಾರಣೆಗೆ ವಿಘ್ನೇಶ್ವರ, ಮಳೆಗಾಗಿ ವರುಣ ಹೀಗೆ ಒಂದೊಂದು ದೇವತೆಗಳನ್ನು ರೂಪಿಸಿಕೊಂಡು ಇಷ್ಟಾನುಸಾರ ಪೂಜಿಸಲು ಆಂಭಿಸಲಾಯಿತು. ಆದರೆ ಅವೆಲ್ಲವುಗಳ ಆದಿಯಲ್ಲಿ ಇದ್ದದ್ದು ಪರಮಾತ್ಮನ ಚಿಹ್ನೆಯಾದ ಶಿವಲಿಂಗವಲ್ಲದೇ ಬೇರೇನೂ ಅಲ್ಲ. ಬೇರೆ ದೇವರುಗಳಿಗೆ ಹಣ್ಣು, ಹೂ, ಕಾಯಿ, ಅರ್ಚನೆ ಬೇಕು. ಆದರೆ ಶಿವಯೋಗಕ್ಕೆ ಧ್ಯಾನವೊಂದೇ ಸಾಕು ಎಂದು ವಿಶ್ಲೇಷಿಸಿದರು.

ಪುರಾತನ ಕಾಲದಿಂದಲೂ ಇಷ್ಟಲಿಂಗಕ್ಕೆ ಮಹತ್ವವಿದೆ. ಶಿವನನ್ನು ಅರಿಯಬೇಕಾದರೆ ಆತ್ಮಜ್ಞಾನ, ಪರಮಾತ್ಮ ಜ್ಞಾನ, ಅಧ್ಯಾತ್ಮಿಕ ತಳಹದಿಯ ಆಧಾರದ ಮೇಲೆಯೇ ಅರಿಯಬೇಕು ಎಂದು ಹೇಳಿದರು.

ಈಶ್ವರೀಯ ವಿಶ್ವವಿದ್ಯಾಲಯದ ದಾವಣಗೆರೆ ಶಾಖೆಯ ಪ್ರಧಾನ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ನೇತೃತ್ವದಲ್ಲಿ ಸಂಸ್ಥೆಯ ವಿದ್ಯಾನಗರ ಶಾಖೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಗೀತಾಜಿ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು. ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ಪ್ರವಚನ ಮಾಲೆಗೆ ಶುಭ ಹಾರೈಸಿದರು.

**ನೇರ ಪ್ರಸಾರ :** ಸುದೀರ್ಘ ಒಂದು ತಿಂಗಳ ಕಾಲ ಪ್ರತಿದಿನ ಸಂಜೆ 6.30 ರಿಂದ 7.30ರವರೆಗೆ 1 ಗಂಟೆ ಸಮಯ ನಡೆಯುವ ಈ ಪ್ರವಚನವನ್ನು ನೇರ ಪ್ರಸಾರ ವೀಕ್ಷಿಸಲು ಯು ಟ್ಯೂಬ್ ಚಾನಲ್ಲಾದ ರಾಜಯೋಗ ಟಿವಿ ಕನ್ನಡದಲ್ಲಿ (youtube/rajayogatvkannada) ವೀಕ್ಷಿಸಬಹುದು.

## ಗುರುಲಿಂಗವೂ ಅಲ್ಲ, ಶಿವಲಿಂಗವೇ ಸತ್ಯ

**(1ನೇ ಪುಟದಿಂದ)** ಅಂಗದ ಮೇಲೆ ಶಿವಲಿಂಗ ಕಟ್ಟಿ ಶಿವಲಿಂಗವೇ ದೇಹದ ಮೇಲೆ ಇದೆ. ನಿತ್ಯ ಪೂಜೆ ಮಾಡಿ ಆನಂದ ಪಡು ಎಂದು ಅಂಗದ ಮೇಲೆ ಲಿಂಗ ಧರಿಸಿದರು. ಲಿಂಗ ಧರಿಸಿದ ಮೇಲೆ ಲಿಂಗಾಯತರು ಎಂದಾಯ್ತು.

ಹೀಗೆ ಇಷ್ಟ ಪಟ್ಟು ಕಟ್ಟಿಕೊಂಡ ಇಷ್ಟಲಿಂಗದ ಬಗ್ಗೆ ಮೂರು ಪ್ರಶ್ನೆಗಳಿವೆ. ಈ ಇಷ್ಟಲಿಂಗ ಆತ್ಮಲಿಂಗದ ಕುರುಹೋ ಅಥವಾ ಗುರುಕೊಟ್ಟ ಕಾರಣ ಗುರುಲಿಂಗವೋ? ಅಥವಾ ಶಿವಲಿಂಗವೋ ಯಾವುದರ ಸಂಕೇತ? ಎಂದು. ಈ ಬಗ್ಗೆ ಅಧ್ಯಯನ ನಡೆಸಿದಾಗ ಅಂಗೈಯಲ್ಲಿನ ಶಿವಲಿಂಗ ಗುರುಲಿಂಗವಲ್ಲ, ಆತ್ಮಲಿಂಗವೂ ಅಲ್ಲ, ಇದು ಶಿವಲಿಂಗ ಎಂಬುದು ಬಸವಣ್ಣನವರ ವಚನಗಳ ಅಧ್ಯಯನದಿಂದ ತಿಳಿಯಿತು. ಅಷ್ಟೇ ಅಲ್ಲದೆ, ಅಕ್ಕಮಹಾದೇವಿ, ಚನ್ನಬಸವಣ್ಣ, ಅಲ್ಲಮಪ್ರಭುಗಳೂ ಸಹ ಈ ಗೊಂದಲ ನಿವಾರಣೆಗೆ ವಚನಗಳ ಮೂಲಕ ಮಾರ್ಗದರ್ಶನ ಮಾಡಿದ್ದಾರೆ ರಾಜಯೋಗಿ ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ ಹೇಳಿದರು.

ಶರಣ ಸಮಾಧಿ ಮೇಲೆ ಲಿಂಗ ಇಟ್ಟರೆ ಅದು ಆತ್ಮಲಿಂಗವಾಗುತ್ತದೆ. ಗುರುಗಳು ದೇಹ ತ್ಯಾಗ ಮಾಡಿದಾಗ ಅವರ ಸಮಾಧಿ ಮೇಲೆ ಇಡುವ ಲಿಂಗ ಗುರುಲಿಂಗ. ಅಂಗದ ಮೇಲೆ ಇಷ್ಟಪಟ್ಟು ಕಟ್ಟಿಕೊಂಡ ಲಿಂಗವೇ ಶಿವಲಿಂಗ ಎಂದು ಪ್ರತಿಪಾದಿಸಿದರು.

ಸದಾ ಶಿವಲಿಂಗ ಉಪಾಸನೆ ಮಾಡುವುದು ಶಿವಪಥ ಅರಿವು ಮಾರ್ಗ ಎಂಬ ಸತ್ಯವನ್ನು ಶರಣರು ತಿಳಿಸಿಕೊಟ್ಟಿದ್ದಾರೆ. ಶಿವಲಿಂಗ ಉಪಾಸನೆ ಮಾಡದ ಹೊರತು ಸದ್ಗತಿ ಪ್ರಾಪ್ತಿಯಾಗದು ಎಂದರು.

## ಕುಶಲಕರ್ಮಿ ಶೇಖರಪ್ಪ ಬಳ್ಳಾರಿಗೆ ಪ್ರಶಸ್ತಿ : ಗೌರವ



ದಾವಣಗೆರೆ, ಡಿ.10- ಮಹಾನಗರ ಪಾಲಿಕೆಯಿಂದ ಜರುಗಿದ ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಕುಶಲಕರ್ಮಿಯಾಗಿ ಸುಮಾರು 40 ವರ್ಷಗಳಿಂದ ಹೊಸ ಪಾದರಕ್ಷೆಗಳು ಹಾಗೂ ಹರಿದ ಪಾದರಕ್ಷೆಗಳನ್ನು ರಿಪೇರಿ ಮಾಡುವ ಕಾಯಕ ಸೇವೆ ಮಾಡುತ್ತಿರುವ ಬಳ್ಳಾರಿ ಶೇಖರಪ್ಪನವರಿಗೆ ಮತ್ತು ಪ್ರಶಸ್ತಿ ನೀಡಿ ಗೌರವಿಸಿದ ಮಹಾಪೌರರು ಹಾಗೂ ಪಾಲಿಕೆ ಆಡಳಿತ ವರ್ಗಕ್ಕೆ ಕೆ.ಟಿ.ಜೆ.ನಗರದ ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ, ಕೆ.ಪಿ.ಸಿ.ಸಿ. ಎಸ್ಸಿ ವಿಭಾಗದ ಕಾರ್ಯದರ್ಶಿ ಸೋಮಲಾಪುರ ಹನುಮಂತಪ್ಪ ಅಭಿನಂದಿಸಿದ್ದಾರೆ.

ವೀರಶೈವ ಪಂಚಮಸಾಲಿ ಮುಖಂಡ ಮಂಜುನಾಥ್ ಕಲಘಟಗಿ ಹಾಗೂ ದಲಿತ ಮುಖಂಡ ಗುಮ್ಮನೂರು ರಾಮಚಂದ್ರಪ್ಪ, ಎಸ್. ನಿಂಗಪ್ಪ, ಕರಿಬಸಪ್ಪ ಗಾಂಧಿನಗರ, ನಾಗರಾಜ ಬಸಾಪುರ, ವಸಂತ ಸಿಂಗ್ರಿಹಳ್ಳಿ, ಆನಂದ ಕೆ.ಬಿ. ಬಡಾವಣೆ, ಐಗೂರು ಸುರೇಶ್ ಮತ್ತು ಸೋಮಲಾಪುರ ಅವರುಗಳು, ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ದುಡ್ಡು ಇಲ್ಲದಿದ್ದರೂ ಬಡ ಶಾಲಾ ಮಕ್ಕಳ ಪಾದರಕ್ಷೆಗಳನ್ನು ರಿಪೇರಿ ಮಾಡಿ, ಚೆನ್ನಾಗಿ ಓದಿ ವಿದ್ಯಾವಂತರಾಗಿ, ದೊಡ್ಡ ಅಧಿಕಾರಿಗಳಾಗಿ ಎಂದು ಬುದ್ದಿವಾದ ಹೇಳಿದ ನಿಮ್ಮ ಸೇವೆ ಗುರುತಿಸಿ, ಪ್ರಶಸ್ತಿ ನೀಡಿರುವುದಕ್ಕೆ ಸಂತಸವಾಗಿದೆ ಎಂದು ಶೇಖರಪ್ಪ ಬಳ್ಳಾರಿ ಇವರಿಗೆ ಪುಷ್ಪ ಮಾಲೆ ಹಾಕಿ, ಸಿಹಿ ತಿನ್ನಿಸಿ ಅಭಿನಂದಿಸಿದರು.

## ನಿಟುವಳ್ಳಿಯಲ್ಲಿ ಇಂದು ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಧರ್ಮ ಸಭೆ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್, ದೇವನಗರಿ ತಾಲ್ಲೂಕು ಪ್ರಗತಿ ಬಂಧು ಸ್ವ-ಸಹಾಯ ಸಂಘಗಳ ಒಕ್ಕೂಟ ದಾವಣಗೆರೆ-ಡಿ-ವಲಯ ಇವರುಗಳ ಸಂಯುಕ್ತಾಶ್ರಯದಲ್ಲಿ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮವು ನಿಟ್ಟುವಳ್ಳಿಯ ಚಿದಂಬರ ಸಭಾ ಭವನದಲ್ಲಿ ಇಂದು ನಡೆಯಲಿದೆ.

ಬೆಳಿಗ್ಗೆ 7 ಗಂಟೆಗೆ ಪೂಜಾ ಕಾರ್ಯಕ್ರಮ, ಬೆಳಿಗ್ಗೆ 11 ಗಂಟೆಗೆ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ. ದಿವ್ಯ ಸಾನ್ನಿಧ್ಯವನ್ನು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ವಹಿಸುವರು.

ಅಧ್ಯಕ್ಷತೆಯನ್ನು ಪಾಲಿಕೆ ಸದಸ್ಯ ಕೆ.ಎಂ. ವೀರೇಶ್ ವಹಿಸುವರು. ಕಾರ್ಯಕ್ರಮವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೇ ಬಿ.ಸಿ. ಟ್ರಸ್ಟ್‌ನ ಹಿರಿಯ ಜಿಲ್ಲಾ ನಿರ್ದೇಶಕ ಲಕ್ಷ್ಮಣ ಎಂ. ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಮೋಹನ ದೀಕ್ಷಿತ್, ಶ್ರೀಮತಿ ಮಂಜುಳಾ ಜಿ.ವಿ., ಶ್ರೀಮತಿ ಉಮಾಪ್ರಕಾಶ್, ಅಣಬೇರು ಮಂಜಣ್ಣ, ಮುಕುಂದಪ್ಪ ಆಗಮಿಸುವರು.

## ಹಿರೇಗಂಗೂರು ರುದ್ರೇಶ್ ನಿಧನ



ದಾವಣಗೆರೆ ಸರಸ್ವತಿ ಬಡಾವಣೆ, 1ನೇ ಮೇನ್, 4ನೇ ಕ್ರಾಸ್ ವಾಸಿ ಎಲೆಕ್ಟ್ರೀಷಿಯನ್ ಇಂಜಿನಿಯರ್, VLCC ಕಂಪನಿ ಬೆಂಗಳೂರು ಇದರ ಉದ್ಯೋಗಿಯಾಗಿದ್ದ ಹಿರೇಗಂಗೂರು ರುದ್ರೇಶ್ ಹೆಚ್.ಆರ್ (47) ಇವರು ದಿನಾಂಕ 10.12.2023ರ ಭಾನುವಾರ ಸಂಜೆ 4.45ಕ್ಕೆ ನಿಧನರಾದರು. ತಾಯಿ, ಪತ್ನಿ, ಓರ್ವ ಪುತ್ರಿ, ಸಹೋದರರು, ಸಹೋದರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.12.2023ರ ಸೋಮವಾರ ಸಂಜೆ 4ಕ್ಕೆ ನಗರದ ಬೂದಾಳ್ ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ.

## ಕೊಟ್ಟೂರು : ಆಟಗಳಲ್ಲಿ ಭಾಗವಹಿಸಲು ಮಕ್ಕಳಿಗೆ ಕರೆ



### ಪಿಎಸ್‌ಐ ಗೀತಾಂಜಲಿ ಸಿಂಧೆ

ಕೊಟ್ಟೂರು, ಡಿ. 10 - ಮಕ್ಕಳು ಆಟಗಳಲ್ಲಿ ಭಾಗವಹಿಸುವುದರಿಂದ ಸ್ಪರ್ಧೆಗಳ ಬಗ್ಗೆ ಜ್ಞಾನ ಮೂಡುತ್ತದೆ ಎಂದು ಕೊಟ್ಟೂರು ಪೊಲೀಸ್ ಠಾಣ ಪಿಎಸ್‌ಐ ಕು. ಗೀತಾಂಜಲಿ ಸಿಂಧೆ ಅಭಿಪ್ರಾಯಪಟ್ಟರು.

ಇಲ್ಲಿನ ಇಂದು ಸಿ.ಬಿ.ಎಸ್.ಇ. ಶಾಲೆಯಲ್ಲಿ ನಿನ್ನೆ ಆಯೋಜಿಸಲಾಗಿದ್ದ ವಾರ್ಷಿಕ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇಂದು ಶಾಲೆಯ ಆಡಳಿತಾಧಿಕಾರಿ ಹೆಚ್.ಎನ್. ವೀರಭದ್ರಪ್ಪ ಮಾತನಾಡಿ, ಮಕ್ಕಳ ಯಶಸ್ಸನ್ನು ಅಳೆಯುವ ಪೋಷಕರ ಮಾನದಂಡ ಬದಲಾಗಬೇಕು. ಕ್ರೀಡೆಯಲ್ಲಿ ಮಕ್ಕಳು ಪಾಲ್ಗೊಳ್ಳಲು ಬೆಂಬಲ ನೀಡಬೇಕು ಎಂದು ತಿಳಿಸಿದರು.

ಶಾಲಾ ಪ್ರಾಂಶುಪಾಲ ಎ. ಚೇತನ್ ಕುಮಾರ್, ಮುಖ್ಯಗುರುಗಳಾದ ಬಿ. ಬಸವರಾಜ, ಪದವಿ ಪ್ರಾಂಶುಪಾಲ ಡಾ. ಪಿ.ಎಂ. ವಾಗೀಶಯ್ಯ, ಪಿ.ಯು ಕಾಲೇಜಿನ ಪ್ರಾಂಶುಪಾಲರು ಪವನ್ ಕುಮಾರ್ ಹೆಚ್. ಉಪಸ್ಥಿತರಿದ್ದರು. ಶಿಕ್ಷಕಿ ಬಿ.ವಿ. ಪ್ರೇಮ ನಿರೂಪಿಸಿದರು, ವಾಣಿ ಡಿ.ಬಿ. ಸ್ವಾಗತಿಸಿದರು. ವಿಜಯಲಕ್ಷ್ಮಿ ವಂದಿಸಿದರು.

## ರೋಗಗಳು ಬರುವ ಮುನ್ನ ಎಚ್ಚರ ವಹಿಸಿ ಆಸ್ಪತ್ರೆ, ಮಾತ್ರೆಗಳಿಂದ ದೂರವಿರಿ

### ಹರಪನಹಳ್ಳಿ ಕಾರ್ಯಕ್ರಮದಲ್ಲಿ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ವೈ.ಡಿ. ಅಣ್ಣಪ್ಪ ಕರೆ



ಹರಪನಹಳ್ಳಿ, ಡಿ. 10 - ರೋಗಗಳು ಬರುವ ಮುನ್ನ ಎಚ್ಚರ ವಹಿಸಿದರೆ ಆಸ್ಪತ್ರೆ ಮತ್ತು ಮಾತ್ರೆಗಳಿಂದ ದೂರವಿರಬಹುದು ಎಂದು ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ವೈ.ಡಿ. ಅಣ್ಣಪ್ಪ ಹೇಳಿದರು.

ತಾಲ್ಲೂಕಿನ ದುಗ್ಗಾವತಿ ಗ್ರಾಮದಲ್ಲಿ ಯೋಗ ನರಸಿಂಹ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಹಾಗೂ ಶ್ರೀನಿವಾಸ್ ಆಸ್ಪತ್ರೆ ಇವರ ಸಹಯೋಗದಲ್ಲಿ ಉಚಿತ ವೈದ್ಯಕೀಯ ತಪಾಸಣಾ ಶಸ್ತ್ರಚಿಕಿತ್ಸಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದಿನ ದಿನಗಳಲ್ಲಿ ವಾಂತಿ-ಬೇದಿ, ಟೈಫಾಯಿಡ್, ಕ್ಷಯ, ಕಾಲರಾದಂತಹ ರೋಗಗಳು ಸಾಮಾನ್ಯವಾಗಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ಪ್ರತಿಯೊಬ್ಬರಿಗೂ ಬಿಪಿ, ಶುಗರ್, ಹೃದ್ರೋಗ ಹಾಗೂ ಕಿಡ್ನಿ ಕಾಯಿಲೆಗಳು ಸಾಮಾನ್ಯವಾಗಿವೆ. ಇವು ಶ್ರೀಮಂತ ಕಾಯಿಲೆ ಗಳಾಗಿದ್ದು, ಬಡ ಜನರು ಆರ್ಥಿಕವಾಗಿ ಭರಿಸಲು ಅಸಾಧ್ಯ. ಗ್ರಾಮೀಣ ಭಾಗದ ಹಾಗೂ ನಗರ ಪ್ರದೇಶದ ಬಡ ಜನರಿಗೆ ಇಂತಹ ಉಚಿತ ಶಿಬಿರಗಳ ಮೂಲಕವೇ ಚಿಕಿತ್ಸೆಗೊಳಪಡಿಸಿದಾಗ ಮಾತ್ರ ಅವರನ್ನು ಸಂಕಷ್ಟದಿಂದ ಪಾರು ಮಾಡಲು ಸಾಧ್ಯ ಎಂದರು.

ಶಿಬಿರದ ಆಯೋಜಕ ಶ್ರೀನಿವಾಸ್ ಕಮ್ಮತ್ತಹಳ್ಳಿ ಮಾತನಾಡಿ, ಆರೋಗ್ಯವಾಗಿದ್ದರೆ ಸುಖವಾಗಿ ಬಾಳಬಹುದು. ಇಲ್ಲವಾದರೆ ದುಡಿದ ಹಣವನ್ನು ಆಸ್ಪತ್ರೆಗೆ ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ರೋಗದ ಲಕ್ಷಣ ಕಾಣುವ ಮುನ್ನವೇ ಆಗಾಗ್ಗೆ ಆರೋಗ್ಯ ತಪಾಸಣೆ ಮಾಡಿಸಿಕೊಂಡು ವೈದ್ಯರು ನೀಡುವ ಸಲಹೆ ಪಾಲಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಯುವ ಮುಖಂಡ ಮಂಜುನಾಥ, ಅರಸಿಕೇರಿ ಗ್ರಾ.ಪಂ.ಅಧ್ಯಕ್ಷ ಇನಾಯತ್, ಬಾಲೇನಹಳ್ಳಿ ಕೆಂಚನಗೌಡ, ಜಂಬಪ್ಪರ ಪರಸಪ್ಪ, ಶ್ರೀನಿವಾಸ್, ನವೀನ್ ಮತ್ತು ಇತರರು ಉಪಸ್ಥಿತರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ವಕೀಲರ ಸಂರಕ್ಷಣಾ ಕಾಯ್ದೆ ಜಾರಿಗೊಳಿಸಲು ಹರಿಹರ ವಕೀಲರ ಸಂಘದ ಆಗ್ರಹ



ಹರಿಹರ, ಡಿ.10- ಕಲ್ಬುರ್ಗಿಯ ವಕೀಲ ಈರಣ್ಣ ಗೌಡರ ಹತ್ಯೆಯ ಎಲ್ಲ ಹಂತಕರನ್ನು ಕೂಡಲೇ ಬಂಧಿಸಿ, ಮೃತರ ಕುಟುಂಬ ವರ್ಗದವರಿಗೆ ಸರ್ಕಾರ ಸೂಕ್ತ ಪರಿಹಾರ ಒದಗಿಸಬೇಕು ಮತ್ತು ವಕೀಲರ ಸಂರಕ್ಷಣಾ ಕಾಯ್ದೆಯನ್ನು ಕೂಡಲೇ ಜಾರಿಗೊಳಿಸಬೇಕು ಎಂದು ಹರಿಹರ ಅಡ್ವೊಕೇಟ್ಸ್ ಅಸೋಸಿಯೇಷನ್ ಆಗ್ರಹಿಸಿದೆ. ರಾಜ್ಯಪಾಲರಿಗೆ ಇಲ್ಲಿನ ತಹಶೀಲ್ದಾರರ ಮೂಲಕ ಮನವಿ ಸಲ್ಲಿಸಿ, ವಕೀಲರ ಮೇಲೆ ಪದೇ ಪದೇ ಹಲ್ಲೆಗಳು ನಡೆಯುತ್ತಿದ್ದು, ರಾಜ್ಯಾದ್ಯಂತ ವಕೀಲರು ಪ್ರತಿಭಟನೆ ನಡೆಸುತ್ತಿದ್ದರೂ ಸಹ ಪೊಲೀಸ್ ಇಲಾಖೆ ಸಮಂಜಸ ಕ್ರಮ ತೆಗೆದುಕೊಂಡಿರುವುದಿಲ್ಲ. ಸರ್ಕಾರವು ಈ ಚಳಿಗಾಲದ ಅಧಿವೇಶನದಲ್ಲಿಯೇ ವಕೀಲರ ಸಂರಕ್ಷಣಾ ಕಾಯ್ದೆಯನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಲಾಯಿತು.


ಸಂಘದ ಅಧ್ಯಕ್ಷ ಪಿ. ರುದ್ರಗೌಡ, ಉಪಾಧ್ಯಕ್ಷೆ ಎನ್.ಎಸ್. ಸಾಕಮ್ಮ, ಕಾರ್ಯದರ್ಶಿ ಗಣೇಶಪ್ಪ ಕೆ. ದುರ್ಗದ್, ಜಂಟಿ ಕಾರ್ಯದರ್ಶಿ ಪಿ.ಹೆಚ್.ಬಾಲಾಜಿ ಸಿಂಗ್, ಕಾರ್ಯಕಾರಿ ಸಮಿತಿ ಸದಸ್ಯರಾದ ಅಬ್ದುಲ್ ರಹೀಮ್ ಬಾಷಾ, ಕೆ.ವಿ ನಾಗರಾಜ್, ಬಿ. ಮಾರುತಿ, ಹನುಮಂತರಾಜು, ಬಿ.ಸಿ ಪ್ರಕಾಶ್, ಸಿ.ಜಿ. ಮಹದೇವಯ್ಯ, ಉಮೇಶ್ ಹುಲ್ಮನಿ, ಬಿ.ಹೆಚ್ ಅರುಣ್‌ಕುಮಾರ್ ಮತ್ತಿತರರು ಹಾಜರಿದ್ದರು.

## ಗ್ರಾಮ ಸಹಾಯಕರ ಪಾದಯಾತ್ರೆಗೆ ಬೆಂಬಲ

ಜಗಲೂರು ಡಿ. 10- ಕರ್ನಾಟಕ ರಾಜ್ಯ ಕಂದಾಯ ಇಲಾಖೆ ಗ್ರಾಮ ಸಹಾಯಕರ ಬೆಳಗಾವಿ ಚಲೋ ಪಾದಯಾತ್ರೆಗೆ ತಾಲ್ಲೂಕಿನಿಂದ ಬೆಂಬಲಿಸಿ ಭಾಗವಹಿಸಲಾಗುವುದು ಎಂದು ಸಂಘದ ತಾಲ್ಲೂಕು ಅಧ್ಯಕ್ಷ ಬಿಸ್ತುವಳ್ಳಿ ರಾಜು ಹಾಗೂ ಖಜಾಂಚಿ ಗುತ್ತಿದುರ್ಗ ಶಾಂತಪ್ಪ ತಿಳಿಸಿದ್ದಾರೆ.

ನಾಳೆ ದಿನಾಂಕ 11 ರಂದು ಕಿತ್ತೂರಿನ ಕಿತ್ತೂರು ರಾಣಿ ಚೆನ್ನಮ್ಮನ ಕೋಟೆ ಅರಮನೆ ಮೈದಾನದಿಂದ ಬೆಳಗಾವಿ ಸುವರ್ಣ ಸೌಧದವರೆಗೆ ಪಾದಯಾತ್ರೆ ಮೂಲಕ ಆಗಮಿಸಿ, ನಂತರ ನಾಡಿದ್ದು ದಿನಾಂಕ 12 ರಂದು ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕಿ ವಿವಿಧ ಬೇಡಿಕೆಗಳನ್ನು ಈಡೇರಿಸಲು ಮನವಿ ಮಾಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

## ಅರ್ಜುನ ನಿನಗೊಂದು ನಮನ



ಅಂಬಾರಿ ಹೊತ್ತ
ಅರ್ಜುನ
ಮುಗಿಸಿ
ಹೊರಟೆ ನಿನ್ನ
ಪಯಣ
ದುಃಖ
ಸಾಗರದಲ್ಲಿ ಮುಳುಗಿದೆ
ನಿನ್ನ ಒಡನಾಡಿಯ ಮನ

ಅವನು ಬರೀ ಒಂದು ಆನೆಯಲ್ಲ
ಎಂಟು ಬಾರಿ ಮೈಸೂರಿನ ದಸರೆಗೆ
ಮೆರಗು ತಂದ ಗಜಪಡೆಯ ಮಲ್ಲ
ಕಾಡು ನಾಡು ಎರಡೂ ಆತ ಬಲ್ಲ

ಅಂಬಾರಿ ಹೊರಲು ಕೊಟ್ಟರು ನಿವೃತ್ತಿ
ಕಾಡು ಪ್ರಾಣಿಗಳ ಹಿಡಿಯಲು ಸಿಕ್ಕದ್ದು ಬಡ್ತಿ
ಯಾರೋ ಮಾಡಿದ ಘೋರ ತಪ್ಪಿಗೆ
ಬಲಿಯಾಗಿ ಬಿಟ್ಟಿತು ದೈತ್ಯ ಶಕ್ತಿ

ದೈವ ಸ್ವರೂಪಿ ಗಜಾನನ
ಮಾವುತನ ಮನೆಗೆ ಅಪ್ಪನಂತೆ
ಮಗನಂತೆ ಜೀವಕ್ಕೆ ಜೀವವಾಗಿದ್ದ
ನಿಲ್ಲುತ್ತಿಲ್ಲ ಅಲ್ಲೀಗ ಅಶ್ರುತರ್ಪಣ

ನರರೂಪದ ರಾಕ್ಷಸನ ನಿಜವಾದ ಬಣ್ಣ
ಮೂಕ ಪ್ರಾಣಿಗಳನ್ನು ಮೃತ್ಯು ಕೂಪಕ್ಕೆ ತಳ್ಳುವ
ಹೇಡಿ ಕೃತ್ಯಕ್ಕೆ ಯಾರು ಹಾಕುವರು ಅಂಕುಶ
ಮಾತು ಬಾರದ ಜೀವ ಜೀವವಿಲ್ಲವೇನು?

- ಅನುಪಮ ವಿರುಪಾಕ್ಷಪ್ಪ, ದಾವಣಗೆರೆ

## ಉಚಿತ ಕೊಡುಗೆ : ಉಪ ರಾಷ್ಟ್ರಪತಿ ಆಕ್ಷೇಪ

ನವದೆಹಲಿ, ಡಿ. 10 – ಉಚಿತ ಕೊಡುಗೆಗಳ ರಾಜಕೀಯದಿಂದ ವೆಚ್ಚದ ಆದ್ಯತೆಯ ಮೇಲೆ ಪರಿಣಾಮವಾಗುತ್ತಿದೆ. ನಾವು ಜನರ ಮನಸ್ಸುಗಳನ್ನು ಸಬಲೀಕರಣ ಮಾಡಬೇಕಿದೆಯೇ ಹೊರತು ಜೇಬುಗಳನ್ನು ಅಲ್ಲ ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಹೇಳಿದರು. ಭಾರತ ಮಂಡಪಂನಲ್ಲಿ ಮಾನವ ಹಕ್ಕುಗಳ ದಿನಾಚರಣೆ ಅಂಗವಾಗಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜನರ ಜೇಬುಗಳನ್ನು ಸಬಲೀಕರಣ ಮಾಡುವುದರಿಂದ ಅವರು ಸರ್ಕಾರದ ಮೇಲೆ ಅವಲಂಬಿಸುವುದು ಹೆಚ್ಚಾಗುತ್ತದೆ ಎಂದರು. ಉಚಿತ ಕೊಡುಗೆ ನೀಡಲು ನಡೆಸಲಾಗುವ ಹುಚ್ಚು ಸ್ಪರ್ಧೆಯಿಂದ ಸರ್ಕಾರದ ವೆಚ್ಚದ ಆದ್ಯತೆ ಮೇಲೆ ಪರಿಣಾಮವಾಗುತ್ತದೆ. ಇದರಿಂದ ಸಮಗ್ರ ಆರ್ಥಿಕ ವ್ಯವಸ್ಥೆಯ ಮೇಲೆ ಪರಿಣಾಮವಾಗುತ್ತದೆ ಎಂದರು.

ದೀರ್ಘಾವಧಿಯಲ್ಲಿ ಈ ರೀತಿಯ ವೆಚ್ಚಗಳಿಂದ ಆರ್ಥಿಕತೆ, ಜೀವನದ ಗುಣ ಮಟ್ಟ ಹಾಗೂ ಸಾಮಾಜಿಕ ಸಾಮರಸ್ಯದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಯೋಚಿಸಬೇಕಿದೆ ಎಂದು ಧನಕರ್ ಹೇಳಿದರು.

## ಅರ್ಚಕರ ವೃತ್ತಿ ಶಿಕ್ಷಣ ತರಬೇತಿ ಶಿಬಿರ

ನಾಗಮಂಗಲ, ಡಿ.10- ತಾಲ್ಲೂಕಿನ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಶ್ರೀ ಕಾಲ ಭೈರವೇಶ್ವರ ಸಂಸ್ಕೃತ ವೇದ ಆಗಮ ಮಹಾವಿದ್ಯಾಲಯದ ಆಶ್ರಯದಲ್ಲಿ ಇದೇ ದಿನಾಂಕ 18 ರಿಂದ 28 ರವರೆಗೆ ರಾಜ್ಯ ಮಟ್ಟದ 15ನೇ ಅರ್ಚಕರ ವೃತ್ತಿ ಶಿಕ್ಷಣ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿರುವ ವಿವಿಧ ದೇವಾಲಯಗಳ ಅರ್ಚಕರುಗಳಿಗೆ ಹಾಗೂ ಅರ್ಚಕರಾಗಲು ಬಯಸುವವರಿಗೆ, ಧಾರ್ಮಿಕ ದತ್ತಿ ಇಲಾಖೆ ಸಹಯೋಗದ ಈ ಶಿಬಿರದಲ್ಲಿ ಯಾವುದೇ ಜಾತಿ, ಮತ ಭೇದವಿಲ್ಲದೆ ಎಲ್ಲಾ ಆಗಮದವರೂ ಭಾಗವಹಿಸಬಹುದು. ಆಗಮ ಶಾಸ್ತ್ರೋಕ್ತ ಪೂಜಾಕ್ರಮ, ಪಂಚಾಂಗ ಶ್ರವಣ, ವಿವಾಹಾದಿ ಶುಭ ಕಾರ್ಯಗಳಿಗೆ ಮುಹೂರ್ತ ಇತ್ಯಾದಿಗಳನ್ನು ಕಲಿಸಲಾಗುವುದು.

ಆಸಕ್ತರು, ಡಾ.ಶ್ರೀಕಾಂತ ಪುರೋಹಿತ ಪ್ರಾಚಾರ್ಯರು, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ, ಆಗಮ ಮಹಾವಿದ್ಯಾಲಯ, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ - 571 811. ಮೊ.9481492311. ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : 7899607523, 9886958585, 9535601859.

# ದೇಶದ ಆರ್ಥಿಕ ಉತ್ಪಾದನೆಯಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರ ಮಹತ್ವದ್ದು



ಹರಿಹರ ತಾಲ್ಲೂಕು ಎಳೆಹೊಳೆ ಗ್ರಾಮದಲ್ಲಿನ ಭಾರತ ನಮ್ಮ ಸಂಕಲ್ಪ ಯಾತ್ರೆ ಉದ್ಘಾಟನೆಯಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ

ಹರಿಹರ, ಡಿ. 10- ದೇಶದ ಆರ್ಥಿಕತೆಯಲ್ಲಿ ಅದರಲ್ಲೂ ಗ್ರಾಮೀಣ ಆರ್ಥಿಕತೆಯಲ್ಲಿ ಮಹಿಳಾ ಸ್ವಸಹಾಯ ಗುಂಪುಗಳು ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ಸಂಸದ ಜಿ.ಎಂ.ಸಿದ್ದೇಶ್ವರ ಹೇಳಿದರು.

ಹರಿಹರ ತಾಲ್ಲೂಕು ಎಳೆಹೊಳೆ ಗ್ರಾಮದಲ್ಲಿ ನಿನ್ನೆ ಏರ್ಪಾಡಾಗಿದ್ದ ಭಾರತ ನಮ್ಮ ಸಂಕಲ್ಪ ಯಾತ್ರೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

2022-23 ರ ಕೇಂದ್ರ ಸರ್ಕಾರದ ಆರ್ಥಿಕ ಸಮೀಕ್ಷೆ ವರದಿಯ ಪ್ರಕಾರ ದೇಶದಲ್ಲಿ ಸುಮಾರು 1.20 ಕೋಟಿಗೂ ಹೆಚ್ಚು ಮಹಿಳಾ ಸ್ವಸಹಾಯ ಸಂಘಗಳಿವೆ. ಈ ಸ್ವಸಹಾಯ ಸಂಘಗಳನ್ನು ಸಬಲೀಕರಣ ಮಾಡುವುದರೊಂದಿಗೆ ಕೃಷಿ ವಲಯಕ್ಕೂ ತಂತ್ರಜ್ಞಾನದ ಪ್ರಯೋಜನ ಒದಗಿಸಲು ಕೇಂದ್ರ ಸರ್ಕಾರ ಮಹತ್ವದ ಯೋಜನೆಯನ್ನು ಘೋಷಣೆ ಮಾಡಿದೆ ಎಂದರು.

ಮಹಿಳಾ ಸ್ವಸಹಾಯ ಗುಂಪುಗಳಿಗೆ 1,261 ಕೋಟಿ ರೂ. ವೆಚ್ಚದಲ್ಲಿ ಡ್ರೋನ್‌ಗಳನ್ನು ಒದಗಿಸುವ ನಿರ್ಧಾರ ಕೈಗೊಳ್ಳಲಾಗಿದೆ. ನ್ಯಾನೋ ರಸಗೊಬ್ಬರ, ಕೀಟನಾಶಕಗಳ ಸಿಂಪಡಣೆ ಸೇರಿ ಕೃಷಿಯ ವಿವಿಧ ಉದ್ದೇಶಗಳಿಗಾಗಿ ರೈತರಿಗೆ ಬಾಡಿಗೆ ಒದಗಿಸಲು ಮಹಿಳಾ ಸ್ವಸಹಾಯ ಸಂಘಗಳಿಗೆ ಡ್ರೋನ್ ಒದಗಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಮಹಿಳಾ ಸ್ವಸಹಾಯ ಸಂಘಗಳ ಸಬಲೀಕರಣ ಮತ್ತು ಕೃಷಿ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಬಳಕೆಯೇ ಈ ಯೋಜನೆಯ ಉದ್ದೇಶವಾಗಿದೆ. ಡ್ರೋನ್ ಖರೀದಿಗೆ ಶೇಕಡ 80 ರಷ್ಟು ಹಣವನ್ನು ಕೇಂದ್ರ ಸರ್ಕಾರ ನೀಡಲಿದೆ ಎಂದರು. ಈ ರೀತಿಯಾಗಿ ಮಹಿಳಾ ಸಂಘಗಳ ಸಬಲೀಕರಣ ಹಾಗೂ ಕೃಷಿ ಕ್ಷೇತ್ರದ ಸುಧಾರಣೆಯನ್ನು ಏಕಕಾಲದಲ್ಲಿ ಮಾಡುವ ಕೆಲಸಕ್ಕೆ ಸರ್ಕಾರ ಮುನ್ನುಡಿ ಬರೆದಿದೆ ಎಂದು ಹೇಳಿದರು.

ದೇಶಾದ್ಯಂತ ಸುಮಾರು 2000 ಪ್ರಚಾರದ ವಾಹನಗಳು, ಸುಮಾರು 1000 ಕೃಷಿ ವಿಜ್ಞಾನ ಕೇಂದ್ರಗಳು, ಕಾಮನ್ ಸರ್ವೀಸ್ ಸೆಂಟರ್‌ಗಳು, ನಬಾರ್ಡ್ ಹಾಗೂ ಬ್ಯಾಂಕ್‌ಗಳು ಈ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿವೆ.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಜನಪರ ಯೋಜನೆಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶ. ನವೆಂಬರ್ 15 ರಿಂದ ಪ್ರಾರಂಭವಾಗಿರುವ ಈ ಕಾರ್ಯಕ್ರಮವು ಜನವರಿ 22 ರವರೆಗೆ ದೇಶಾದ್ಯಂತ ನಡೆಯಲಿದೆ. ಪ್ರತಿಯೊಂದು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಯೋಜನೆಗಳ ಕುರಿತು ಜನರಲ್ಲಿ ಅರಿವು ಮೂಡಿಸಲಾಗುತ್ತದೆ.

ಈಗಾಗಲೇ ಕೇಂದ್ರ ಸರ್ಕಾರ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯ ಮೂಲಕ ಈ ದೇಶದ ಸುಮಾರು 80 ಕೋಟಿ ಜನರಿಗೆ ಉಚಿತವಾಗಿ 5 ಕೆ.ಜಿ ಆಹಾರ ಧಾನ್ಯವನ್ನು ನೀಡುತ್ತಿದೆ.

2020 ರಲ್ಲಿ ಕೋವಿಡ್ ಸಮಯದಲ್ಲಿ ಉಚಿತ ಪಡಿತರ ನೀಡುವುದಾಗಿ ಘೋಷಣೆ ಮಾಡಿದ ಮೋದೀಜಿಯವರು, ಈ ಯೋಜನೆಯನ್ನು ಡಿಸೆಂಬರ್ 2023 ರಿಂದ ಮುಂದಿನ 5 ವರ್ಷದ ವರೆಗೆ ವಿಸ್ತರಣೆ ಮಾಡಿದ್ದಾರೆ. ಇದಕ್ಕಾಗಿ ಕೇಂದ್ರ ಸರ್ಕಾರ 3.90 ಲಕ್ಷ ಕೋಟಿ ಹಣವನ್ನು ಒದಗಿಸಿದೆ.

ಪ್ರಧಾನಮಂತ್ರಿ ಉಜ್ವಲಾ ಯೋಜನೆಯಡಿ ಈಗಾಗಲೇ 10 ಕೋಟಿ ಕುಟುಂಬಗಳಿಗೆ ಉಚಿತ ಗ್ಯಾಸ್ ಸಂಪರ್ಕ ಕಲ್ಪಿಸಲಾಗಿದೆ. ನಮ್ಮ ಕ್ಷೇತ್ರದಲ್ಲಿ 1.30 ಲಕ್ಷ ಜನರಿಗೆ ಉಚಿತ ಗ್ಯಾಸ್ ಸಂಪರ್ಕ ಒದಗಿಸಲಾಗಿದೆ.

ಈ ದೇಶದ ಸುಮಾರು 51 ಕೋಟಿ ಜನರು ಜನಧನ್ ಖಾತೆ ಮುಖಾಂತರ 2 ಸಾವಿರ ಕೋಟಿ ಹಣವನ್ನು ಖಾತೆಗಳಲ್ಲಿ ಜಮಾ ಮಾಡಿದ್ದಾರೆ. ಈ ರೀತಿ ಅನೇಕ ಜನಪರ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ಈ ಸಂಕಲ್ಪ ಯಾತ್ರೆ ನಡೆಯುತ್ತಿದೆ ಎಂದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಸರ್ಕಾರದ ಯೋಜನೆಗಳು ಕಟ್ಟ ಕಡೆಯ ವ್ಯಕ್ತಿಗೂ ಕೂಡ ತಲುಪಬೇಕು. ಇದರಲ್ಲಿ ಸಾರ್ವಜನಿಕರೂ ಕೂಡ ಭಾಗಿಯಾಗಬೇಕು ಎಂದರು.

ಡಿಸಿಸಿ ಬ್ಯಾಂಕ್ ನಿರ್ದೇಶಕರ ಹೊಳೆಸಿರಿಗೆರೆ ಹಾಲೇಶಪ್ಪ, ಲೀಡ್ ಬ್ಯಾಂಕ್ ಮ್ಯಾನೇಜರ್ ಪ್ರಕಾಶ್, ನಬಾರ್ಡ್ ಅಧಿಕಾರಿಗಳು, ಕೃಷಿ ವಿಜ್ಞಾನ ಕೇಂದ್ರದ ಸಿಬ್ಬಂದಿ, ಬಿ.ಜೆ.ಪಿ. ಮುಖಂಡರುಗಳಾದ ಚಂದ್ರಶೇಖರ್ ಪೂಜಾರ್, ತಾಲ್ಲೂಕು ಬಿ.ಜೆ.ಪಿ. ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್ ಸೇರಿದಂತೆ, ಅನೇಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಉಗ್ರವಾದದಿಂದ ನಾಗರಿಕರ ಹಕ್ಕುಗಳ ಉಲ್ಲಂಘನೆ : ನ್ಯಾ. ಮಿಶ್ರ

ನವದೆಹಲಿ, ಡಿ. 10 - ಉಗ್ರವಾದದಿಂದ ವಿಶ್ವದಾದ್ಯಂತದ ನಾಗರಿಕರ ಹಕ್ಕುಗಳ ಗಂಭೀರ ಉಲ್ಲಂಘನೆಯಾಗುತ್ತಿದೆ. ಉಗ್ರವಾದವನ್ನು ಸಮರ್ಥಿಸುವುದು ಮಾನವ ಹಕ್ಕುಗಳಿಗೆ ಮಾಡುವ ಘೋರ ಅಪಚಾರ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ (ಎನ್.ಹೆಚ್.ಆರ್.ಸಿ.) ಅಧ್ಯಕ್ಷ ನಿವೃತ್ತ ನ್ಯಾಯಮೂರ್ತಿ ಅರುಣ್ ಕುಮಾರ್ ಮಿಶ್ರ ಹೇಳಿದರು.

ಮಾನವ ಹಕ್ಕುಗಳ ದಿನಾಚರಣೆಯಂದು ಭಾರತ ಮಂಡಪಂನಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ನ್ಯಾಯಮೂರ್ತಿ ಮಿಶ್ರ, ಉಗ್ರವಾದದ ಕಾರಣದಿಂದ ಅಮಾಯಕರು ಬಳಲುತ್ತಿದ್ದಾರೆ ಎಂದರು.

ಉಗ್ರವಾದವನ್ನು ವೈಭವೀಕರಿಸುವ ಇಲ್ಲವೇ ಸಹಾನುಭೂತಿ ತೋರುವ ಕೆಲಸ ಮಾಡಬಾರದು ಎಂದವರು ತಿಳಿಸಿದರು.

ಪರಿಸರ ಬದಲಾವಣೆ, ಜೀವ ವೈವಿಧ್ಯತೆಯ ನಾಶ ಹಾಗೂ ಪರಿಸರ ಮಾಲಿನ್ಯಗಳ ಕಾರಣದಿಂದ ಅಸಮಾನತೆ ತೀವ್ರವಾಗಿ ಏರಿಕೆಯಾಗುತ್ತಿದೆ. ಈ ಬಗ್ಗೆಯೂ ತುರ್ತು ಗಮನ ಹರಿಸಬೇಕಿದೆ ಎಂದರು.

ಅಂತರ್ಜಾಲದ ಕರಾಳ ಮುಖದ ಬಗ್ಗೆಯೂ ಗಮನ ಹರಿಸಬೇಕಿದೆ. ಇದರಿಂದ ಜನರ ಖಾಸಗಿತನದ ಉಲ್ಲಂಘನೆಯಾಗುತ್ತಿದೆ.

ದ್ವೇಷ ಭಾಷಣ, ಅಪಪ್ರಚಾರ ಹರಡುವ ಮೂಲಕ ಪ್ರಜಾಸತ್ತಾತ್ಮಕ ಪ್ರಕ್ರಿಯೆ ಕಡೆಗಣಿಸಲಾಗುತ್ತಿದೆ ಎಂದೂ ಅವರು ಕಳವಳ ವ್ಯಕ್ತಪಡಿಸಿದರು.

## ಜಗಳೂರು : ಕೆನರಾ ಬ್ಯಾಂಕ್‌ನಿಂದ ಬೆಂಚ್ ಪೂರೈಕೆ



ಜಗಳೂರು, ಡಿ.10- ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕಾ ನಿಧಿ ಯೋಜನೆಯಡಿ ಪ್ರತಿ ವರ್ಷ ಬ್ಯಾಂಕ್ ವತಿಯಿಂದ ಮೂಲಸೌಕರ್ಯ ಕಲ್ಪಿಸಲಾಗುತ್ತಿದೆ ಎಂದು ಕೆನರಾ ಬ್ಯಾಂಕ್, ವಿಜಯಪುರ ಪ್ರಾದೇಶಿಕ ಕಚೇರಿಯ ಸಹಾಯಕ ಪ್ರಬಂಧಕ ಕಿರಣ್ ಎನ್.ಎಸ್ ಹೇಳಿದರು.

ಪಟ್ಟಣದ ಸರ್ಕಾರಿ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಕೆನರಾ ಬ್ಯಾಂಕ್ ವತಿಯಿಂದ ರೂ 1.5 ಲಕ್ಷ ಮೊತ್ತದ 30 ಬೆಂಚ್‌ಗಳನ್ನು ಉಚಿತವಾಗಿ ವಿತರಿಸಿ ಮಾತನಾಡಿದರು.

ಪ್ರಸ್ತುತ ನಾನು ಬ್ಯಾಂಕ್ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದು, 1980ರ ದಶಕದಲ್ಲಿ ಇದೇ ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದ್ದೇನೆ. ಈ ಸರ್ಕಾರಿ ಶಾಲೆಯಲ್ಲಿ ಓದಿದ್ದರಿಂದ ಇಂದು ನಾನು ಉನ್ನತ ಅಧಿಕಾರಿಯಾಗಿರುವ ಬಗ್ಗೆ ನನಗೆ ಹೆಮ್ಮೆ ಇದೆ. ಎಲ್ಲರೂ ಕಷ್ಟಪಟ್ಟು ಓದಿ ಉನ್ನತ ಭವಿಷ್ಯ ರೂಪಿಸಿಕೊಳ್ಳಿ ಎಂದು ಸಲಹೆ ನೀಡಿದರು.

ನಾನು ಇಲ್ಲಿ ಓದುತ್ತಿದ್ದಾಗ ಸುಮಾರು 700 ವಿದ್ಯಾರ್ಥಿಗಳು ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಮಕ್ಕಳ ಸಂಖ್ಯೆ ಕುಸಿಯಲು ಕಾರಣವೇನು? ಎಂಬ ಬಗ್ಗೆ ಚರ್ಚೆ ನಡೆಯಬೇಕು ಎಂದರು.

ಕೆನರಾ ಬ್ಯಾಂಕ್ ಜಗಳೂರು ಶಾಖೆಯ ವ್ಯವಸ್ಥಾಪಕ ಹಣಮಂತ ಭೈರಗೊಂಡ, ಎಸ್‌ಡಿಎಂಸಿ ಅಧ್ಯಕ್ಷ ಮಾರಪ್ಪ, ಬಿಆರ್‌ಸಿ ಸಂಪನ್ಮೂಲ ವ್ಯಕ್ತಿಗಳಾದ ಅಂಜಿನಪ್ಪ, ಲೋಕೇಶ್, ಮಂಜುನಾಥ್, ಮುಖ್ಯ ಶಿಕ್ಷಕ ರಂಗನಾಥ್, ಸಹಶಿಕ್ಷಕಿ ಎಸ್.ಕೆ. ಪುಷ್ಪಾವತಿ, ಜಿ. ನೇತ್ರಮ್ಮ, ಟಿ. ಉಮಾದೇವಿ ಇದ್ದರು.

# ಹಿರಿಯರ ತ್ಯಾಗ, ಪರಿಶ್ರಮಗಳು ಮಕ್ಕಳನ್ನು ಪ್ರತಿಭಾವಂತರನ್ನಾಗಿ ಮಾಡುತ್ತವೆ

### ಶ್ರೀ ಪಾಂಡುರಂಗ ವಿಠ್ಠಲ ರುಕ್ಮಿಣಿ ದಿಂಡಿ ಮಹೋತ್ಸವದಲ್ಲಿ ಚಿಂತಕ ಜಗನ್ನಾಥ ನಾಡಿಗೇರ್




ದಾವಣಗೆರೆ, ಡಿ. 10- ಯಾವುದೇ ಒಂದು ಸಮಾಜ ಎಲ್ಲಾ ರೀತಿಯಿಂದ ಅಭಿವೃದ್ಧಿಯಾಗಬೇಕಾದರೆ ಅದರಲ್ಲಿ ಹೃದಯವಂತ ಹಿರಿಯರು ಮತ್ತು ಪ್ರತಿಭಾವಂತ ಮಕ್ಕಳ ಪಾತ್ರ ತುಂಬಾ ಪ್ರಮುಖವಾದುದು, ಅಂತವರನ್ನು ಗೌರವಿಸಬೇಕಾದದ್ದು ಆ ಸಮಾಜದ ಮೊದಲ ಕರ್ತವ್ಯ ಎಂದು ಶೈಕ್ಷಣಿಕ ಸಲಹೆಗಾರ ಮತ್ತು ತರಬೇತುದಾರ ಜಗನ್ನಾಥ ನಾಡಿಗೇರ್ ಅಭಿಪ್ರಾಯಪಟ್ಟರು.

ನಗರದ ನಾಮದೇವ ಸಿಂಪಿ ಸಮಾಜ ದೈವ ಮಂಡಳಿ ಮತ್ತು ಅದರ ವಿವಿಧ ಅಂಗ ಸಂಸ್ಥೆಗಳು ಸೇರಿ ಆಚರಿಸುತ್ತಿರುವ 98ನೇ ಶ್ರೀ ಪಾಂಡುರಂಗ ವಿಠ್ಠಲ ರುಕ್ಮಿಣಿ ದಿಂಡಿ ಮಹೋತ್ಸವದ ಮೊದಲ ದಿನವಾದ ಶುಕ್ರವಾರ ನಡೆದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿರಿಯರ ತ್ಯಾಗ ಮತ್ತು ಪರಿಶ್ರಮಗಳೇ ಮಕ್ಕಳನ್ನು ಪ್ರತಿಭಾವಂತರನ್ನಾಗಿ ಮಾಡುತ್ತವೆ. ಆ ಮಕ್ಕಳು ಅಧ್ಯಯನದಲ್ಲಿ ಪರಿಶ್ರಮ ಮತ್ತು ಸಾಧನೆ ಮಾಡಿದಾಗ ಆ ಹಿರಿಯರನ್ನು ಮತ್ತು ಸಮಾಜವನ್ನು ಕೀರ್ತಿವಂತರನ್ನಾಗಿ ಮಾಡುತ್ತದೆ ಎಂದು ಅವರು ತಿಳಿಸಿದರು.

ದಾವಣಗೆರೆಯಲ್ಲಿ 65ಕ್ಕೂ ಹೆಚ್ಚು ಸಮಾಜಗಳ ಜನರಿದ್ದಾರೆ. ನಮ್ಮ ನಾಮದೇವ ಸಮಾಜವು ಸಂಖ್ಯಾತ್ಮಕವಾಗಿ ಕಡಿಮೆ ಇದ್ದರೂ, ಗುಣಾತ್ಮಕವಾಗಿ ಉತ್ತಮ ಸ್ಥಿತಿಯಲ್ಲಿದೆ. ಇದಕ್ಕೆ ಈ ಸಮಾಜದ ಹಿರಿಯರೇ ಕಾರಣ. ಇಂದು ಈ ಸಮಾಜ ಪ್ರಸಿದ್ಧವಾಗಲು ಇದರ ಪ್ರತಿಭಾವಂತರು ಕಾರಣ. ಅಂತವರನ್ನು ಗುರುತಿಸಿ ಇಂದು ಗೌರವಿಸುತ್ತಿರುವುದು ನಮ್ಮ ಸಮಾಜದ ಕರ್ತವ್ಯ ಎಂದು ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ವಿಠ್ಠಲ್ ಎಂ.ಎಸ್ ಅಭಿಪ್ರಾಯ ಪಟ್ಟಿದ್ದಾರೆ.

ದಿಂಡಿ ಮಹೋತ್ಸವವನ್ನು ಕೇವಲ ಧಾರ್ಮಿಕ ಕಾರ್ಯಕ್ರಮವನ್ನಾಗಿ ಮಾಡದೇ ಸಮಾಜದಲ್ಲಿರುವ ಸಾಧಕರನ್ನು ಮತ್ತು ಅರ್ಹರನ್ನು ಗುರುತಿಸಿ, ಗೌರವಿಸುತ್ತಿರುವುದು ಶ್ಲಾಘನೀಯವಾದದ್ದು. ಮೂರು ದಿನಗಳ ಕಾಲ ಶ್ರದ್ಧಾ ಭಕ್ತಿಗಳಿಂದ ನಡೆಯುತ್ತಿರುವುದು ನಮ್ಮ ಸಮಾಜದ ಉತ್ಸವ ಮತ್ತು ವಿಶೇಷತೆ. ಸಮಾಜದ ಎಲ್ಲರೂ ಕೈ ಜೋಡಿಸಿದಾಗ ಏನನ್ನಾದರೂ ಸಾಧಿಸಬಹುದು ಎಂದು ವಿಠಲ್ ಅವರು ತಿಳಿಸಿದರು.

ರಾಜ್ಯಮಟ್ಟದಲ್ಲಿ ಸಾಧನೆ ಮಾಡಿದ ಚಾರ್ಟರ್ಡ್ ಅಕೌಂಟೆಂಟ್ ಶ್ರೀನಿವಾಸ ಮಹೇಂದ್ರಕರ್, ಬೆಸ್ಕಾಂನ ನಿವೃತ್ತ ಆಪ್ತ ಸಹಾಯಕಿ ಶ್ರೀಮತಿ ಉಮಾ ಮಹೇಂದ್ರಕರ್, ರಾಜ್ಯ ಮಟ್ಟದ ಕ್ರೀಡಾ ಪ್ರಶಸ್ತಿ ವಿಜೇತೆ ಅವನಿ ಬೊಂಗಾಳೆ ಇವರನ್ನು ಸನ್ಮಾನಿಸಲಾಯಿತು.

ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯ ಡಾ. ರವೀಂದ್ರ ಕುಮಾರ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಸಮಾಜದ ಗೌರವಾಧ್ಯಕ್ಷ ಜ್ಞಾನದೇವ ಬೊಂಗಾಳೆ ಅಧ್ಯಕ್ಷತೆ ವಹಿಸಿದ್ದರು.

ಉಪಾಧ್ಯಕ್ಷರಾದ ಆನಂದರಾವ್ ರಾಕುಂಡೆ ಮತ್ತು ಹೆಚ್.ಕೆ.ಪರಶುರಾಮ್, ಸಹ ಕಾರ್ಯದರ್ಶಿ ವಿಠ್ಠಲ್ ರಾಕುಂಡೆ ಮತ್ತು ಮಂಜುನಾಥ ಪಿಸೆ ವೇದಿಕೆ ಮೇಲೆ ಉಪಸ್ಥಿತರಿದ್ದರು. ಮಂಡಳಿಯ ಸದಸ್ಯ ಪರಶುರಾಮ್ ಹೋವಳೆ ಪ್ರಾರ್ಥಿಸಿದರು. ಪ್ರಧಾನ ಕಾರ್ಯದರ್ಶಿ ಮನೋಹರ ವಿ.ಬೊಂಗಾಳೆ ವಂದನಾರ್ಪಣೆ ಮಾಡಿದರು. ಸದಸ್ಯ ಅಶೋಕ್ ಮಾಳೋದೆ ಕಾರ್ಯಕ್ರಮ ನಿರೂಪಿಸಿದರು.



ಹೃತ್ಪೂರ್ವಕ ಕೃತಜ್ಞತೆಗಳು



ಭರ್ಮಪ್ಪ ಕೆ.ಆರ್.


ಗೋಣೆಪ್ಪ ಹೆಚ್.ಎಂ


ದಿಳ್ಳೆಪ್ಪ .ಬಿ


ಪರಶುರಾಮ್ ಕೆ.


ಲಕ್ಕಪ್ಪ ಪಿ.


ಗಣೇಶ್ ಹೆಚ್.ಸಿ


ವೀರಭದ್ರಪ್ಪ (ಜರೇಶ್)


ಕಾಂತೇಶ್ ಎಸ್.ಹೆಚ್


ಪ್ರಕಾಶ್ ಟಿ.ಎನ್.


ಶ್ರೀಮತಿ ಗೀತಾ ಬಿ. ಮಾಲತೇಶಪ್ಪ


ಶ್ರೀಮತಿ ಶ್ವೇತಾ ಕೆ.ಪಿ (ಶಶಧರ್ ಹಾಲೇಕಲ್)


ಹನುಮಂತಪ್ಪ ಅವಿರೋಧ ಆಯ್ಕೆ


ದಿನಾಂಕ 10.12.2023ರಂದು ಭಾನುವಾರ
ಕನಕ ಪಟ್ಟಣ ಸಹಕಾರ ಬ್ಯಾಂಕಿನ ನಿರ್ದೇಶಕ ಮಂಡಳಿಗೆ
ನಡೆದ ಚುನಾವಣೆಯಲ್ಲಿ ಅತ್ಯಧಿಕ ಮತಗಳಿಂದ ನಮ್ಮನ್ನು ಆಯ್ಕೆ ಮಾಡಿದ ಬ್ಯಾಂಕಿನ ಸರ್ವ ಸದಸ್ಯರಿಗೂ, ಬ್ಯಾಂಕಿನ ಆಡಳಿತ ಮಂಡಳಿಯವರಿಗೂ, ಸಮಾಜದ ಮುಖಂಡರುಗಳಿಗೂ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ
ಹೃತ್ಪೂರ್ವಕ ಕೃತಜ್ಞತೆಗಳು.


ಹೆಚ್.ಜಿ. ಸಂಗಪ್ಪ


ಎನ್.ಜೆ. ನಿಂಗಪ್ಪ


ಕೆ. ರೇವಣ್ಣ


ಎಸ್.ಎಸ್. ಗಿರೀಶ್


ಚಿಕ್ಕಣ್ಣ ಜಡಗನಹಳ್ಳಿ


ಹೆಚ್.ವೈ.ಶಶಿಧರ್


ಡಿ.ಜಿ..ಪ್ರಕಾಶ್


# ನೆನಪಿನಂಗಳದಿಂದೆದ್ದು ಬಂದ ಕೊಂಡಜ್ಜಿ ಬಸಪ್ಪನವರ 108ನೇ ವರ್ಷದ ಜನ್ಮ ದಿನಕ್ಕೆ

ಜನಜೀವನದಲ್ಲಿ ಸಹಕಾರಿ ಮನೋಭಾವವು ನಾಗರಿಕತೆಯ ಆರಂಭದಿಂದಲೇ ಒಂದು ಮೂಲಭೂತ ಸೂತ್ರವಾಗಿ ಮೂಡಿ ಬಂದಿದೆ. ಹಿಂದಿನಂತೆ, ಇಂದು-ನಾಳೆ ಎಲ್ಲವೂ ಇರುವುದಿಲ್ಲ. ಪ್ರಗತಿಯ ದೃಷ್ಟಿಯಿಂದ ಹಾಗೆ ಇರುವುದು ಸರಿಯೂ ಅಲ್ಲ. ನಿನ್ನೆಯದು-ಇಂದಾಗಿರುವುದಿಲ್ಲ; ಇಂದಿದ್ದುದು ನಾಳೆ ಇರುವುದಿಲ್ಲ. ಭವಿಷ್ಯತ್ತಿನ ಈ ಎಲ್ಲಾ 'ನಾಳೆ'ಗಳು ಒಂದು ದಿನ ವರ್ತಮಾನವನ್ನು ದಾಟಿ ಭೂತದ 'ನಿನ್ನೆ'ಗಳಾಗಿಯೇ ರೂಪ ತಾಳುತ್ತವೆ. ಹಾದಿ ತಪ್ಪಿದ ಜನ, ಗುರಿ ತಪ್ಪಿದ ಸಮಾಜ, ಮಾನವೀಯ ನಂದನವನವನ್ನು ಇದು ಹಳೆಯದು, ಅಲ್ಪ, ಯಾರದೋ, ಹುರುಳಿಲ್ಲದ್ದು, ಸತ್ವಹೀನ, ನಿಷ್ಪ್ರಯೋಜಕ, ಕತ್ತಲೆ, ಅಚೇತನ, ಗ್ರಾಮ್ಯ ಎಂದು ತಿಳಿಯುತ್ತಾ, ತುಳಿದು-ತುಳಿದು ನೆಲಸಮ ಮಾಡಿದ ಮೇಲೆ ಅಲ್ಲಿ ಏನನ್ನು ಬಿತ್ತಿದರೋ ಅದನ್ನು ಕಂಡಾಗ ಮಾತ್ರ ಸಜೀವತೆಯ ಸ್ಪರ್ಷ ಎಂಬ ಅರಿವಿನ ತಳಹದಿಯ ಮೇಲೆ ವ್ಯಕ್ತಿತ್ವವನ್ನು ಮೂರ್ತಗೊಳಿಸಿಕೊಂಡವರು ಶ್ರೀಯುತ ಕೊಂಡಜ್ಜಿ ಬಸಪ್ಪನವರು.

ಚಿತ್ರದುರ್ಗ ಜಿಲ್ಲೆ ಹರಿಹರ ತಾಲ್ಲೂಕಿಗೆ ಒಳಪಟ್ಟ ಕುಗ್ರಾಮ ಕೊಂಡಜ್ಜಿ. ಗುಡ್ಡ-ಮರಡಿಗಳನ್ನು, ದೊಡ್ಡ ಕೆರೆಯನ್ನು ಪಶ್ಚಿಮಕ್ಕೆ ತುಂಗಭದ್ರಾ ನದಿಯನ್ನು ಹೊಂದಿದೆ. ಇಲ್ಲಿ ದೊರೆತಿರುವ ಹನುಮಂತ ದೇವಾಲಯದ ಬಳಿ ಇರುವ ಶಾಸನ ಮತ್ತು ಮಲ್ಲಿಕಾರ್ಜುನ ದೇವಾಲಯದ ಮುಂಭಾಗದಲ್ಲಿರುವ ವೀರಗಲ್ಲು ಊರಿನ ಪ್ರಾಚೀನತೆಯನ್ನು, ಇತಿಹಾಸವನ್ನು ಬಿಂಬಿಸುತ್ತವೆ. ಇದು ಇಂದು ಪ್ರೇಕ್ಷಣೀಯ ಸ್ಥಳವೂ ಆಗಿದೆ. ಇವೆಲ್ಲದರಿಂದ ಊರು ಶ್ರೀಯುತರಿಗೆ ಅತ್ಯಂತ ಆತ್ಯಾಂತಿಕ ರನ್ನಗನ್ನಡಿಯಾಗಿದೆ.

ಕೊಂಡಜ್ಜಿ ಬಸಪ್ಪನವರ ತಂದೆ: ನಿಂಗಪ್ಪ, ತಾಯಿ: ಹಾಲಮ್ಮನವರ ಸಾಮಾನ್ಯ ರೈತ ಕುಟುಂಬದಲ್ಲಿ ದಿನಾಂಕ: 11-12-1915 ರಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಕೊಂಡಜ್ಜಿಯಲ್ಲಿ, ಲೋಯರ್ ಸೆಕೆಂಡರಿಯನ್ನು ಮಲೇಬೆನ್ನೂರಿನ ಬೆಣ್ಣೆಹಳ್ಳಿ ಕುಟುಂಬದವರ ಸಹಾಯದಿಂದ ಮುಗಿಸಿದರು. ಪ್ರೌಢಶಾಲಾ ಶಿಕ್ಷಣಕ್ಕೆ ಆರ್ಥಿಕ ತೊಂದರೆಯಾದಾಗ ಈಚಘಟ್ಟದ ಬಸಪ್ಪ, ಹನುಮನಳ್ಳಿ ಪಟೇಲ್ ಮಹಾದೇವಪ್ಪನವರ ಸಹಾಯದಿಂದ ದಾವಣಗೆರೆಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದರು. ಮುಂದಿನ ಶಿಕ್ಷಣಕ್ಕೆ ದಾರಿ ತೋರದೆ ಕೆಲಸಕ್ಕೆ ಸೇರಿಕೊಂಡು, ಮನೆಗೆ ಆರ್ಥಿಕ ನೆರವಾಗಬೇಕೆಂಬ ವಿಚಾರದಲ್ಲಿದ್ದಾಗ ಡಾ|| ಮಹಾಂತಯ್ಯನವರ ಕೃಪೆಯಿಂದ, ಡಿ.ಹೆಚ್. ಚಂದ್ರಶೇಖರಯ್ಯನವರು ವಿದ್ಯಾರ್ಥಿ ವೇತನ ಕೊಡಿಸಿದ್ದರಿಂದ, 'ವೀರಶೈವ ವಿದ್ಯಾವರ್ಧಕ ಸಂಘ'ದ ಸಹಕಾರದಿಂದ ಬೆಂಗಳೂರಿನ ಇಂಟರ್‌ಮೀಡಿಯೆಟ್ ಕಾಲೇಜಿಗೆ ಪ್ರವೇಶಾಕಾತಿಯನ್ನು ಪಡೆದು, ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಅದೇ ವರ್ಷ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್.ಸಿ. ಪದವಿಗೆ ಸೇರಿ 1932 ರಲ್ಲಿ ಪದವೀಧರರಾದದ್ದು ಸುಲಭೀಕರಣವಾಗಿರಲಿಲ್ಲ. ತದನಂತರ ಮುಂದಿನ ವಿದ್ಯಾಭ್ಯಾಸಕ್ಕೆ ಮತ್ತೆ ತೊಡರು-ತೊಡಕುಗಳೇ-ತೊಡವಾದಾಗ ವಿವಾಹವು ಕೂಡಿ ಬಂದಿದ್ದರ ಪ್ರಯುಕ್ತ ಕಂದಗಲ್ಲು ಗ್ರಾಮದ ಪಟೇಲ್ ಚನ್ನಬಸಪ್ಪನವರು ತಮ್ಮ ಪುತ್ರಿಯಾದ ಸರ್ವಮಂಗಳಮ್ಮನವರನ್ನು ಧಾರೆಯೆರೆದು ಕಾನೂನು ಶಿಕ್ಷಣ ಪಡೆಯಲು ಪೂನಾಕ್ಕೆ ಕಳುಹಿಸಿದರು. ಗಮನಾರ್ಹ ವಿಷಯವೇನೆಂದರೆ, ಜಿಲ್ಲಾಧಿಕಾರಿಯಾಗಿ, ಜನಪದ ತಜ್ಞರಾಗಿ ವಿಖ್ಯಾತರಾಗಿದ್ದ ಹೆಚ್.ಎಲ್. ನಾಗೇಗೌಡರು ಸಹಪಾಠಿಯಾದ ಸತ್ಪಾರ್ಥ ಮುಂದೆ ಸತ್ಪಥವಾಯಿತು. ಇವೆಲ್ಲದರ ಕ್ರೋಢೀಕೃಪದಿಂದ 1940 ರಲ್ಲಿ ಎಲ್.ಎಲ್.ಬಿ. ಪದವೀಧರರಾದರು. ಶ್ರೀಯುತರ ವಿದ್ಯಾಭ್ಯಾಸ ಸುದೀರ್ಘ ಸಾಹಸ ಪ್ರವಾಸ (Odyssey in education field) ದಲ್ಲಿ ಸಂತುಷ್ಠಿಯಾಯಿತು. ಅಮೇರಿಕದ ವಿಜ್ಞಾನಿ ರ‍್ಯಾಂಡಿ ಪಾಷನ್‌ನ ಅಂತಿಮ ಪ್ರಭಾಷಣ (The last Lecturer) 'ಎಲ್ಲರೂ ಕನಸು ಕಾಣಬೇಕು, ಅವುಗಳನ್ನು ನನಸು ಮಾಡಿಕೊಳ್ಳಬೇಕು' ಎಂಬ ಸಂದೇಶ ಹಾಗೂ ಗೋಪಾಲಕೃಷ್ಣ ಅಡಿಗರ 'ಬನ್ನಿ ಬನ್ನಿ ಕನಸುಗಳೇ ಮರಳಿ ಮನೆಗೆ ಬನ್ನಿ' ಎಂಬ ವಾಕ್ಯಗಳ ಸಾರಾಗ್ರತೆ, 'ನಾನೆಂಬುದು ನಾನಲ್ಲ' (I am not what I am) ಎಂಬುದರಿಂದ ಸಿಡಿದೆದ್ದ ಚೈತನ್ಯ 'ನಾನು ನಾನೇ ಇದ್ದೇನೆ' (I am myself) ಎಂಬ ದಿಮ್ಮಿತ್ರ ಭಾವನೆಯಿಂದ ವ್ಯಕ್ತ್ಯಾತೀತ ವ್ಯಕ್ತಿತ್ವವನ್ನು ಬೆಳೆಸಿಕೊಂಡರು.

ಶ್ರೀಯುತರು ಕಾನೂನು ಪದವೀಧರರಾದ ನಂತರ ವಕೀಲರಾಗುವ ಇಚ್ಛೆಯಿಂದ ಪ್ರಸಿದ್ಧರಾದ ಬೆಳಗುತ್ತಿ ಹೆಚ್. ಲಿಂಗಪ್ಪನವರ ಬಳಿಯಲ್ಲಿ ಒಂದು ವರ್ಷ ಶಿವಮೊಗ್ಗದಲ್ಲಿ ತರಬೇತಿ ಹೊಂದಿ, 1962 ರಲ್ಲಿ ಸ್ವತಂತ್ರ ವಕೀಲಿ ವೃತ್ತಿಯನ್ನು ದಾವಣಗೆರೆಯಲ್ಲಿ ಆರಂಭಿಸಿದರು. ಪ್ರಾರಂಭದಲ್ಲಿ ವೃತ್ತಿ ತೃಪ್ತಿಕರವಾಗದಿದ್ದರೂ, ಕಾಲಕ್ರಮೇಣ ಪರಿಣಿತಿಯನ್ನು ಹೊಂದಿ ದೊಡ್ಡ-ದೊಡ್ಡ ಮೊಕದ್ದಮೆಗಳಲ್ಲಿ ಜಯ ಗಳಿಸಿ ಪ್ರಗಲ್ಭರಾದರು. ತತ್ಸಮನಾಗಿ ಕಿರಿಯ ವಕೀಲರುಗಳಿಗೆ



ಆ ಶ್ರ ಯ ವಿ ತ್ತು , ಔ ದಾ ರ್ಯ ದಿ ಂ ದ ಪ್ರೋತ್ಸಾಹಿಸಿ, ವೃತ್ತಿ ವಿಶ್ವಾಸ ಬೆಳೆಯುವಂತೆ ಮಾಡಿ, ಕಿರಿಯರು ಬೆಳೆದರೆ ತಾವೂ ಬೆಳೆದಂತೆ ಎಂಬ ಸತ್ಪ್ರೋತ್ಸಾಹ ಭಾವನೆ ಶ್ರೀಯುತರದ್ದಾಗಿತ್ತು.

ಕುಗ್ರಾಮದ ಒಂದು ರೈತ ಕುಟುಂಬದಲ್ಲಿ ಜನಿಸಿ ರಾಜಕೀಯ ಪ್ರವೇಶ ಅಷ್ಟು ಸುಲಭದ್ದಾಗಿರಲಿಲ್ಲ. ಇವರ ಮಾವನವರಾದ ಕಂದಗಲ್ ಪಟೇಲ್ ಚನ್ನಬಸಪ್ಪನವರು ಅಳಿಯನನ್ನು ರಾಜಕೀಯ ಕ್ಷೇತ್ರಕ್ಕೆ ತರುವಲ್ಲಿ ಶ್ರಮ ವಹಿಸಿದರು. ಬ್ರಿಟೀಷರ ದಬ್ಬಾಳಿಕೆಯ ಕಾಲ ಅವರು ಪೂರ್ಣಾಧಿಕಾರವನ್ನು ತಮ್ಮಲ್ಲಿಟ್ಟುಕೊಂಡು, ಆಡಳಿತದ ನಿಬಂಧನೆಯ ಮೇರೆಗೆ ಸ್ಥಳೀಯ ರಾಜರುಗಳಿಗೆ ಆಡಳಿತವನ್ನು ವಹಿಸಿಕೊಟ್ಟಿದ್ದರ ಫಲವಾಗಿ 'ಪ್ರಜಾ ಪ್ರತಿನಿಧಿ ಸಭೆ' ಕಾರ್ಯೋನ್ಮುಖವಾಯಿತು. ಈ ಸಭೆಗೆ ಚನ್ನಬಸಪ್ಪನವರು ಸದಸ್ಯರಾಗಿದ್ದುದರ ಪರಿಣಾಮವಾಗಿ ಶ್ರೀಯುತರು ರಾಜಕೀಯ ರಂಗಕ್ಕೆ ಪ್ರವೇಶಿಸಲು ದಾರಿಯಾಯಿತು.

ಪ್ರಥಮ ಬಾರಿಗೆ 1943 ರಲ್ಲಿ ಚಿತ್ರದುರ್ಗ ಜಿಲ್ಲಾ ಬೋರ್ಡ್ ಹರಿಹರ ಕ್ಷೇತ್ರದಿಂದ ಸ್ಪರ್ಧಿಸಿ ಸೋಲನನ್ನು ಭವಿಸಿದರು. ಸೋತ ಕೊಂಡಜ್ಜಿಯವರು ಅದೇ ಕ್ಷೇತ್ರದಿಂದ ಕೆಲವೇ ದಿನಗಳಲ್ಲಿ ಜಯ ಗಳಿಸಿದರು. ಅದು ಆದದ್ದು ಹೀಗೆ! ಕಾನೂನು ಪ್ರಕಾರ ಗೆದ್ದ ಅಭ್ಯರ್ಥಿ ಕಾರಣಾಂತರಗಳಿಂದ ರಾಜೀನಾಮೆ ಕೊಟ್ಟರೆ ಮರು ಚುನಾವಣೆಯಾಗದೇ, ಸೋತ ಅಭ್ಯರ್ಥಿಗಳಲ್ಲಿ ಯಾರು ಹೆಚ್ಚು ಮತ ಪಡೆದಿರುತ್ತಾರೋ ಅವರು ತೆರವಾದ ಸ್ಥಾನ ತುಂಬಲು ಅರ್ಹರಾಗಿರುತ್ತಿದ್ದರು. ಅದರಂತೆಯೇ ಈ ಅವಕಾಶ ಶ್ರೀಯುತರಿಗೆ ಲಭಿಸಿತು. ಮುಂದೆ ಚಿತ್ರದುರ್ಗ ಜಿಲ್ಲಾ ಬೋರ್ಡ್ ಅಧ್ಯಕ್ಷರಾದರು. 28 ವರ್ಷದ ಯುವಕ ಕೊಂಡಜ್ಜಿಯವರು ಆಯ್ಕೆಯಾಗಿ ಹೊಸ ಇತಿಹಾಸ ರಚಿಸಿದ್ದು ಅವಿಸ್ಮರಣೀಯ.

ಶ್ರೀಯುತರು ಮೊದಲು ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ನೀಡಿ, ಪ್ರತಿ ತಾಲ್ಲೂಕಿನಲ್ಲಿ ಪ್ರೌಢ ಶಾಲೆ ತೆರೆಯಿಸಿದರು. ಸಾರ್ವಜನಿಕ ಆಸ್ಪತ್ರೆಗಳ ಬಗ್ಗೆ ಕಾಳಜಿ ವಹಿಸಿದರು. ಪ್ರವಾಸ ಕೈಗೊಂಡಿದ್ದಾಗ ಊರ ಹೊರಗೆ 'ಗೊಲ್ಲರ' ಗುಡಿಸಲನ್ನು ಕಂಡು ಮನಕರಗಿ, ಕ್ರೂರ ಸಂಪ್ರದಾಯಕ್ಕೆ ತಿಳಿಹೇಳಿ ಕಂದಾಚಾರಕ್ಕೆ ತೆರೆ ಎಳೆದರು. ರೈತರ ಬೆಳೆಗಳಿಗೆ ಸರಿಯಾದ ಬೆಲೆ ದೊರಕಲು 'ಸಹಕಾರ ಸಂಘ ಮತ್ತು ಸಹಕಾರ ಸಂಸ್ಥೆ'ಗಳನ್ನು ಕಾರ್ಯರೂಪಕ್ಕೆ ತಂದರು. ದಲಿತ ಮತ್ತು ದುರ್ಬಲ ವರ್ಗದವರ ಬಗ್ಗೆ ವಿಶೇಷ ಕಾಳಜಿ ವಹಿಸಿದರು.

1962 ರ ಸಾರ್ವಜನಿಕ ಚುನಾವಣೆಯಲ್ಲಿ ದಾವಣಗೆರೆ ಕ್ಷೇತ್ರದಿಂದ ಗೆದ್ದು ಶ್ರೀ ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿ ಉಪಸಚಿವರಾಗಿ, ಸಹಕಾರ, ಸಮಾಜ ಮತ್ತು ಅಬಕಾರಿ ಇಲಾಖೆಗಳನ್ನು ವಹಿಸಿಕೊಂಡು ದಕ್ಷತೆಯಿಂದ ಕಾರ್ಯನಿರ್ವಹಿ ಸಿದರು. 1967 ರ ಚುನಾವಣೆಯಲ್ಲಿ ವಿಜಯಿಗಳಾಗಿ ತದನಂತರ ರಾಜೀನಾಮೆ ಕೊಟ್ಟು, 1972 ರಲ್ಲಿ ಲೋಕಸಭೆಗೆ ಚಿತ್ರದುರ್ಗ ಕ್ಷೇತ್ರದಿಂದ ವಿಜಯಿಗಳಾಗಿ ಸಂಸತ್ತಿನ ಸದಸ್ಯರಾಗಿ ಆರೋಗ್ಯ ಮತ್ತು ಕುಟುಂಬ ಯೋಜನೆಯ ಉಪ ಸಚಿವರಾಗಿ ಕಾರ್ಯನಿರ್ವಹಿಸಿ, ಕಾರಣಾಂತರಗಳಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ, ಸಂಸತ್ ಸದಸ್ಯರಾಗಿ ಮುಂದುವರೆದು, ರಾಜಕೀಯದ ರಂಗು-ರಂಗಿನ-ರಿಂಗಣಗುಣಿತದಲ್ಲಿ ಯಾವ ಗಳಿಗೆಯಲ್ಲಿ ವಕ್ರವಾಗುತ್ತದೋ ತಿಳಿಯಲಾಗದು ಎಂದು ಅರಿತು ರಾಜಕೀಯ ರಂಗಕ್ಕೆ ವಿದಾಯ ಹೇಳಿ, ತಮ್ಮ ಚೈತನ್ಯದಾಯಕ ಒಲವಿನ ವಿಶ್ವ ಸ್ಕೌಟ್ಸ್ ಮತ್ತು ಗೈಡ್ಸ್ ಸೇವಾ ಸಂಸ್ಥೆ ಕೈಬೀಸಿ ಕರೆದಾಗ 'ಊಡುತಿದೆ ತಾಯಿ ಬೇರು' ಎಂದರಿತು ಮುಗ್ಧ ಹಸುಗೂಸಿನಂತೆ ಅಪ್ಪಿಕೊಂಡರು. ತದನಂತರ ಮಗ ಕೊ.ಬ. ಷಣ್ಮುಖಪ್ಪನವರು ಕಿಂಕರರಾಗಿ ಕೈಂಕರ್ಯದಿಂದ 'ರಜತಗಜ' ಭೂಷಿತರಾದದ್ದು ಅಭಿನಂದನೀಯ.

ಕೊಂಡಜ್ಜಿಯವರ ಕುಟುಂಬ ದೊಡ್ಡದು. ಹಡಗಿನಂತಹ ಸಂಸಾರ, ಏಳು ಜನ ಗಂಡು ಮಕ್ಕಳು, ಓರ್ವ ಮಗಳು ಒಟ್ಟು 8 ಜನ ಮಕ್ಕಳನ್ನೊಳಗೊಂಡ ರಸೋತ್ಕಟ ಸಂಸಾರ. ಇಡೀ ಕುಟುಂಬದ ಜವಾಬ್ದಾರಿ ಶ್ರೀಮತಿ ಸರ್ವಮಂಗಳಮ್ಮನವರದ್ದಾಗಿತ್ತು. ಇದರಿಂದ ಕೊಂಡಜ್ಜಿಯವರಿಗೆ ವೃತ್ತಿಯ ಕಡೆ ಗಮನೀಕರಿಸಲು ಅನುಕೂಲವಾಯಿತು.

ಶ್ರೀಯುತರು ನಿರ್ಮತ್ಸರೀಯಾಗಿ, ವಕೀಲರಾಗಿ, ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ, ಶಿಕ್ಷಣ ಪ್ರೇಮಿಯಾಗಿ, ಕರುಣಾಮಯಿಯಾಗಿ, ಸಾರ್ವತ್ರಿಕ ಶಿಕ್ಷಣದ ರೂವಾರಿಯಾಗಿ, ವಸ್ತ್ರ ದಾನಿಯಾಗಿ, ಸಹಕಾರಿ ಕ್ಷೇತ್ರದ ಹೊಳೆವ ನಕ್ಷತ್ರಕರಾಗಿ, ಸ್ವಾವಲಂಬಿಯಾಗಿ, ಏಕೀಕರಣದ ಭಾಗತರಾಗಿ, ಕುಲದೈವದ ಭಕ್ತರಾಗಿ, ಸ್ಕೌಟ್ಸ್ ಸೇವೆಯ ಓಂಕಾರರಾಗಿ, ವಿದೇಶಿ ಪ್ರವಾಸಿಗರಿಗೆ, ಕೃತ ಸಂಕಲ್ಪರಾಗಿ, ಸತ್ಯ, ಧರ್ಮ, ನ್ಯಾಯ ನಿಷ್ಠುರಗಳನ್ನು ಒಪ್ಪಿ – ಅಪ್ಪಿಕೊಂಡು ಜೀವನ ಮೌಲ್ವಿಕರಾಗಿ ಅಷ್ಟೇ ಅಲ್ಲ ತಮ್ಮ ಸಂಪರ್ಕ ಹೊಂದಿದ ಎಲ್ಲರಲ್ಲಿಯೂ ಈ ಮೌಲ್ಯಗಳನ್ನು ಬಿತ್ತಿ ಬೆಳೆಯುವ ಸಂಕಲ್ಪ – ದೃಢತ್ವ ತುಂಬಿದ ತತ್ವಗಳಿಗೆ ಬದ್ಧರಾಗಿ, ಹಿಗ್ಗದೆ-ಕುಗ್ಗದೆ ಸ್ಥಿರ ಪ್ರಾಜ್ಞರಾಗಿ ಬಾಳಿನ ನಡುವೆ ಕಗ್ಗತ್ತಲೆಯಲ್ಲಿ ಹೆಜ್ಜೆಯನ್ನಿಡುತ್ತಾ, ಕಾಂತಿಕುಂಜದಲ್ಲಿ ಅಪ್ಯಾಯಮಾನಕರಾಗಿ ಅಹರ್ನಿಷಿ ಸಾತ್ವಿಕರಾಗಿ, ತಗಲೂಫಿಗೆ ಹೆದರದೆ, ಅಖಿಲ್ಯರಾಗದೆ, ಹಪಾಹಪಿಗೊಳಗಾದೇ, ಅಗಚಾಟಲುಗಳ ನಡುವೆ ಬದುಕಿದವರು.

ಕೊನೆಯದಾಗಿ ಸ್ವಾಮಿ ವಿವೇಕಾನಂದರು ದಿನಾಂಕ: 22-06-1894 ರಲ್ಲಿ ಬಸ್ಟನ್‌ನಿಂದ ಇಂಗ್ಲೀಷ್‌ನಲ್ಲಿ ಮೈಸೂರು ಮಹಾರಾಜ ಚಾಮರಾಜ ಒಡೆಯರಿಗೆ ಬರೆದ ಪತ್ರದ ಒಕ್ಕಣಿಕೆ : My noble prince! This life is short, the vanities of the world are transient, but they alone live who live for others, the rest are more dead than alive (ಉದಾತ್ತ ಸ್ವಭಾವದ ಮಹಾರಾಜರೇ! ಬದುಕು ಅಲ್ಪಕಾಲಿಕವಾದದ್ದು, ಜಗತ್ತಿನ ಆಡಂಬರಗಳೆಲ್ಲಾ ಕ್ಷಣಿಕವಾದದ್ದು, ಆದರೆ ಯಾರು ಇತರರಿಗಾಗಿ ಬದುಕುತ್ತಾರೆಯೋ ಅವರು ನಿಜವಾದ ಸಜೀವಿಗಳು. ಉಳಿದವರೆಲ್ಲಾ ಜೀವಚ್ಛವರು) ಅಂದರೆ ಸಹಾನುಭೂತಿ (Empathy) ಗಿಂತ ಅನುಭೂತಿ ಮುಖ್ಯ, ಬನಾವಣೆ (Fabrication) ಗಿಂತ ವ್ಯವಸ್ಥಿತ ಜೋಡಣೆ (Imbrication) ಪ್ರಮುಖವೆಂಬುದನ್ನರಿತು, ಮುಪ್ಪಿನಲ್ಲಿ ಸಹಜವಾಗಿ ಉಂಟಾಗುವ ದೂರದೃಷ್ಟಿ(Epitaph) ತರಾಗಿ ನೈಜ ಬದುಕಿನ ಸರಳ-ಸುಂದರ-ಹಂದರಲ್ಲಿ 'ಮೈಂ ಅಹಿಂಸಕ್ ಹೂಂ, ನ ಕೋಈ ಶತ್ರು ಹೈ' (ಅಹಿಂಸಕನು ನಾನು ನನಗಿಲ್ಲ ಶತ್ರು) ಎಂದು ಬಾಳಿ ದಿನಾಂಕ: 14-11-1992 ರಂದು ಆದರವಿರದ, ಕದವಿರದ, ಹೆಸರಿರದ, ಹೋದವರು ಹಿಂದಿರುಗಿ ಬರಲು ಹಾದಿಯಿರದ, ವಿಶೇಷ ಕೊನೆಯ ನಿಲ್ದಾಣದಲ್ಲಿ ತಂಗಿ ಚೈತ್ಯೋಪಲಿಪಿ (Epitaph) ಗ್ರಸ್ತರಾದರು.



- ಪ್ರೊ|| ಬಾತಿ ಬಸವರಾಜ್,
ಶೈಕ್ಷಣಿಕ ಸಲಹೆಗಾರರು,
ದವನ ಕಾಲೇಜು, ದಾವಣಗೆರೆ.
88845 27130

## ಎಸ್‌ಎಫ್‌ಐ ವಿದ್ಯಾರ್ಥಿಗಳ ಹೋರಾಟಕ್ಕೆ ಜಯ

ರಾಣೇಬೆನ್ನೂರು, ಡಿ.10- ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯಲ್ಲಿ 120 ಮಕ್ಕಳಿಗೆ ಮೂಲಭೂತ ಸೌಕರ್ಯಗಳನ್ನು ನೀಡದೇ ಊಟ ಕೇಳಿದ ಮಕ್ಕಳಿಗೆ ಮನಸೋ ಇಚ್ಛೆ ಥಳಿಸಿದ ವಾರ್ಡನ್ ಅವರನ್ನು ಅಮಾನತ್ತು ಮಾಡಬೇಕೆಂದು ಆಗ್ರಹಿಸಿ, ಎಸ್‌ಎಫ್‌ಐ ನೇತೃತ್ವದಲ್ಲಿ ವಿದ್ಯಾರ್ಥಿಗಳು ಮಂಗಳವಾರ ಬೆಳಿಗ್ಗೆಯಿಂದ ತಡರಾತ್ರಿವರೆಗೂ ಹೋರಾಟ ಧರಣಿ ನಡೆಸಿದರು.

ವಿದ್ಯಾರ್ಥಿಗಳು ನಡೆಸಿದ ಹೋರಾಟಕ್ಕೆ ಬಾರಿ ಉತ್ತಮ ಸ್ಪಂದನೆ ಸಿಕ್ಕಿದ್ದು, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ರೇಷ್ಮಾ ಕೌಸರ್ ಬೇಗಂ ಅವರು, ವಾರ್ಡನ್ ಬದಲಾವಣೆ ಮಾಡಿ, ಕೊಟ್ರೇಶ್ ಹಿರೇಮಠ ಅವರನ್ನು ತಾತ್ಕಾಲಿಕ ನೇಮಕ ಮಾಡಿ ಆದೇಶ ಹೊರಡಿಸಿದರು. ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಯಿತು. ನಿಯೋಜನೆ ಆದೇಶ ಹಿಂಪಡೆದು ಸದರಿ ವಾರ್ಡನ್ ಸ್ಥಾನಕ್ಕೆ ಸುಜಾತ ಕಡೇಮನಿ ಅವರನ್ನು



ನೇಮಕ ಮಾಡಲಾಯಿತು. ಸಂಪೂರ್ಣ ಆರೋಪದ ಕುರಿತು 24 ಗಂಟೆಗಳ ಒಳಗೆ ಸತ್ಯ ವರದಿ ನೀಡಲು ಆದೇಶ ಹೊರಡಿಸಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಅಣ್ಣಪ್ಪ ಹೆಗಡೆ, ಕಾನೂನು ಪರಿವೀಕ್ಷಣಾಧಿಕಾರಿ ಬಸವನಾಯ್ಕರ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷ ಎಸ್.ಜಿ. ಮಜೀದ್ ಶ್ರಮವಹಿಸಿ, ವಾರ್ಡನ್ ಮೇಲೆ ಎಫ್‌ಐಆರ್

**ರಾಣೇಬೆನ್ನೂರು**

ದಾಖಲಿಸಿದರು. ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಆದ ತಕ್ಷಣ ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡಿದ ವಸತಿ ಮೇಲ್ವಿಚಾರಕಿಯನ್ನು ಅಮಾನತ್ತುಗೊಳಿಸಿ ಆದೇಶ ಹೊರಡಿಸಿದರು.

ವಸತಿ ನಿಲಯದ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ನಡೆಸಲು ತಹಶೀಲ್ದಾರ್ ಹನುಮಂತಪ್ಪ ಶಿರಹಟ್ಟಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕಿ ರೇಷ್ಮಾ ಕೌಸರ್ ಬೇಗಂ ತಾಲ್ಲೂಕು ಅಧಿಕಾರಿಗಳಿಗೆ ತಿಳಿಸಿದರೂ ಕೂಡ ನಿರ್ಲಕ್ಷ್ಯ ವಹಿಸಿದ್ದರು. ಇಷ್ಟೆಲ್ಲಾ ಬೆಳವಣಿಗೆ ವಿದ್ಯಾರ್ಥಿಗಳಿಗೆ ಆದ ಗಾಯಗಳಿಗೆ ವೈದ್ಯಕೀಯ ಚಿಕಿತ್ಸೆ ಕೊಡಿಸಿಲ್ಲ ಎಂದು ಎಸ್‌ಎಫ್‌ಐ ಆರೋಪಿಸಿತ್ತು ಸುದ್ದಿ ತಿಳಿದು ಜಿಲ್ಲಾ ಆರೋಗ್ಯಾಧಿಕಾರಿ ಮಧ್ಯಸ್ಥಿಕೆ ವಹಿಸಿ ಚಿಕಿತ್ಸೆ ಕೊಡಿಸಿದರು.

## ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಛಟ್ಟಿ ಅಮವಾಸ್ಯೆ ವಿಶೇಷ ಪೂಜೆ



ದಾವಣಗೆರೆ, ಡಿ.10- ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಛಟ್ಟಿ ಅಮಾವಾಸ್ಯೆ ಪ್ರಯುಕ್ತ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ನಾಡಿದ್ದು ದಿನಾಂಕ 12ರ ಮಂಗಳವಾರ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ ಮತ್ತು ಸಂಜೆ 7 ಗಂಟೆಗೆ ಸಹಸ್ರ ದೀಪೋತ್ಸವ ಹಾಗೂ ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವಾಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ಶ್ರದ್ಧೆಗೆ ಬದ್ಧನಾಗಿದ್ದಾಗ ಉತ್ತಮ ವ್ಯಕ್ತಿ

(1ನೇ ಪುಟದಿಂದ) ಇರಲಿ, ಮನುಷ್ಯ ಹೃದಯದೊಳಗೆ ನಂಬಿಕೆ, ವಿಶ್ವಾಸ, ಭಕ್ತಿ ಇಲ್ಲದೇ ಹೋದರೆ ಕಲ್ಲಿನ ಸ್ವರೂಪದಲ್ಲಿ ಕಾಣುತ್ತದೆ. ಉತ್ಕಟ ಪ್ರೇಮ ಇದ್ದಲ್ಲಿ ಕಲ್ಲಿನ ವಿಗ್ರಹ ಭಗವಂತನ ಸ್ವರೂಪವಾಗಿ ಕಾಣುತ್ತದೆ ಎಂದರು.

ಯಾರ ಮನಸ್ಸು ಸ್ವಚ್ಛ ಮತ್ತು ಹೃದಯ ಸ್ವಚ್ಛವಾಗಿರುತ್ತದೆಯೋ ಅಂತಹ ವ್ಯಕ್ತಿ ಯಾರಿಗೂ ಹೆದರುವ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿದರು.ನಂಬಿದ ಭಕ್ತರನ್ನು ಶ್ರೀ ಕರಿಬಸವೇಶ್ವರ ಸ್ವಾಮಿ ಎಂದಿಗೂ ಕೈಬಿಡುವುದಿಲ್ಲ. ಭಕ್ತರ ರಕ್ಷಣೆ ಮಾಡುತ್ತಾನೆ. ಭಕ್ತರ ಸಹಕಾರದಿಂದ ಶ್ರೀಮಠ ಇನ್ನೂ ಅಭಿವೃದ್ಧಿ ಹೊಂದಲಿ ಎಂದು ಆಶಿಸಿದರು.

ನಾಡು ಸಮೃದ್ಧವಾಗಿ ಒಳ್ಳೆಯ ಮಳೆ, ಬೆಳೆಯಾಗಲಿ, ಬೆಳೆಗೆ ತಕ್ಕ ಮಾರುಕಟ್ಟೆ ಮೌಲ್ಯ ಸಿಕ್ಕು, ದೇಶದ ಅನ್ನದಾತ ರೈತ, ದೇಶ ಕಾಯುವ ಸೈನಿಕನ ಬಾಳು ಹಸನಾಗಲಿ, ಮಾನವರು ಸಂಕಷ್ಟದಿಂದ ಪಾರಾಗಿ, ವ್ಯಾಪಾರ, ಉದ್ಯೋಗಗಳು ಅಭಿವೃದ್ಧಿಯಾಗಲಿ, ವಧು-ವರರ ಕಲ್ಯಾಣವಾಗಲಿ, ಸಂಸ್ಕಾರವಂತ ಮಕ್ಕಳು ಜನಿಸಲಿ ಎಂದು ಜಗದ್ಗುರುಗಳು ಶುಭ ಹಾರೈಸಿದರು.

ವೀರಶೈವ ಧರ್ಮ ಸ್ಥಾಪನೆಯಾದಗಿನಿಂದಲೂ ಮಹಿಳೆಯರಿಗೆ ಪುರುಷನಷ್ಟೇ ಸಮಾನ ಅವಕಾಶ ನೀಡಲಾಗಿದೆ. ಅದರಂತೆ ಯರಗುಂಟೆ ಶ್ರೀಕ್ಷೇತ್ರದ ಶ್ರೀ ಕರಿಬಸವೇಶ್ವರ ಗದ್ದುಗೆ ಮಠದಲ್ಲಿ ವಿಶೇಷವಾಗಿ ಮಹಿಳೆಯರಿಂದಲೇ ತೇರು ಎಳೆಯುವ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ರಾಜಕೀಯವಾಗಿ ಶೇ. 33 ರಷ್ಟು ಮೀಸಲಾತಿಯನ್ನು ನೀಡಲು ಸಂಸತ್‌ನಲ್ಲಿ ಬಿಲ್ ಪಾಸ್ ಮಾಡಲಾಗಿದೆ. ಅನುಷ್ಠಾನಗೊಳ್ಳಬೇಕಾಗಿದೆ. ಇದು ಜಾರಿಯಾದಲ್ಲಿ ಕರ್ನಾಟಕದಲ್ಲಿ 7 ರಿಂದ 8 ಜನ ಮಹಿಳೆಯರಿಗೆ ಲೋಕ ಸಭೆಯಲ್ಲಿ ಸ್ಥಾನ ಸಿಗಲಿದೆ ಎಂದರು.

ಇನ್‌ಸೈಟ್ಸ್ ಐಎಎಸ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಜಿ.ಬಿ. ವಿನಯ್ ಕುಮಾರ್ ಮಾತನಾಡಿದರು. ಶ್ರೀ ಪರಮೇಶ್ವರ ಸ್ವಾಮೀಜಿ, ತಾವರೆಕೆರೆ ಶಿಲಾಮಠದ ಡಾ. ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ನುಡಿ ನೈವೇದ್ಯ ಸಮರ್ಪಿಸಿದರು.

ಪಾಲಿಕೆ ಸದಸ್ಯ ಕೆ. ಪ್ರಸನ್ನಕುಮಾರ್, ಶರಣ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಎನ್.ಎಸ್. ರಾಜು, ಉಜ್ಜಿನಿ ಹಜರತ್ ಸೈಯದ್ ರಹಮತ್ ಉಲ್ಲಾ ಮತ್ತಿತರರು ಉಪಸ್ಥಿತರಿದ್ದರು.

ಮುಷ್ಟೂರು ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಚನ್ನಗಿರಿ ಶ್ರೀ ಹಾಲಸ್ವಾಮಿ ವಿರಕ್ತಮಠದ ಡಾ. ಬಸವ ಜಯಚಂದ್ರ ಸ್ವಾಮೀಜಿ, ಚನ್ನಗಿರಿ ಹಿರೇಮಠದ ಶ್ರೀ ಕೇದಾರಲಿಂಗ ಶಿವ ಶಾಂತವೀರ ಶಿವಾಚಾರ್ಯ ಸ್ವಾಮೀಜಿ, ಖಾನಾಮಡುಗು ದಾಸೋಹ ಮಠದ ಶ್ರೀ ಶರಣಾರ್ಯರು, ನಾಗವಂದದ ಶ್ರೀ ಮರುಳಸಿದ್ದೇಶ್ವರ ಸ್ವಾಮಿ ಹೊರಮಠದ ಶ್ರೀ ಶಿವಯೋಗಿ ಶಿವಾನಂದ ಶಿವಾಚಾರ್ಯ ಸ್ವಾಮೀಜಿ ಸಮ್ಮುಖ ವಹಿಸಿದ್ದರು.

ಕಲ್ಲೂರು ಮಹಾಂತೇಶ್ ಶಾಸ್ತ್ರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಿದ್ಧಪ್ಪ ಸ್ವಾಗತಿಸಿದರು. ಸಮಿತಿ ಪದಾಧಿಕಾರಿಗಳಾದ ವಿಜಯಕುಮಾರ್, ಎಂ. ಮಂಜುನಾಥ್, ಎ.ಸಿ.ಕರಿಬಸಪ್ಪ, ಬಿ.ಲೋಹಿತ್, ಎಸ್.ಪಿ. ರಾಕೇಶ್ ಮತ್ತಿತರರು ಪಾಲ್ಗೊಂಡಿದ್ದರು.

## ಎಣಿಕೆ ಪೂರ್ಣ ಒಟ್ಟು 351 ಕೋಟಿ ಪತ್ತೆ

(1ನೇ ಪುಟದಿಂದ) ಗಂಟೆಯೂ ಹಣ ಎಣಿಕೆಯಲ್ಲಿ ತೊಡಗಿದ್ದವು.

ತೆರಿಗೆ ಅಧಿಕಾರಿಗಳು 10 ಅಲ್ಮೇರಾಗಳಲ್ಲಿ ತುಂಬಿದ್ದ ಹಣದ ರಾಶಿ ಪತ್ತೆ ಮಾಡಿದ ನಂತರ, ಇನ್ನೂ 200 ಅಧಿಕಾರಿಗಳು ಹಾಗೂ ಭದ್ರತಾ ಸಿಬ್ಬಂದಿಯನ್ನು ಕಾರ್ಯಾಚರಣೆಗೆ ಕರೆಸಲಾಗಿತ್ತು.

ಒಟ್ಟು 200 ಚೀಲ ಹಾಗೂ ಟ್ರಂಕ್‌ಗಳನ್ನು ಬಳಸಿ ನಗದನ್ನು ಒಡಿಶಾದ ಹಲವು ಬ್ಯಾಂಕ್ ಶಾಖೆಗಳಿಗೆ ರವಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಪತ್ತೆಯಾಗಿರುವ ಇಡೀ ಹಣ ಲೆಕ್ಕವಿಲ್ಲದ್ದು. ಇದನ್ನು ಮದ್ಯದ ನಗದು ಮಾರಾಟದ ಮೂಲಕ ಗಳಿಸಲಾಗಿತ್ತು ಎಂದು ಆದಾಯ ತೆರಿಗೆ ಇಲಾಖೆ ಭಾವಿಸಿದೆ.

ಒಂದೇ ಸಮೂಹದ ವಿರುದ್ಧ ನಡೆಸಲಾದ ದಾಳಿಯಲ್ಲಿ ಪತ್ತೆಯಾದ ಅತಿ ದೊಡ್ಡ ಮೊತ್ತ ಇದಾಗಿದೆ. 2019ರಲ್ಲಿ ಕಾನ್ಪುರದ ಉದ್ಯಮವೊಂದರ ಮೇಲೆ ನಡೆಸಲಾದ ದಾಳಿಯಲ್ಲಿ 257 ಕೋಟಿ ರೂ.ಗಳ ನಗದು ಪತ್ತೆಯಾಗಿತ್ತು. ಇದಕ್ಕೂ ಮುಂಚೆ 2018ರಲ್ಲಿ ತಮಿಳುನಾಡಿನ ರಸ್ತೆ ನಿರ್ಮಾಣ ಕಂಪನಿಯೊಂದರ ಮೇಲೆ ನಡೆಸಲಾದ ದಾಳಿಯಲ್ಲಿ 163 ಕೋಟಿ ರೂ. ಪತ್ತೆಯಾಗಿತ್ತು.

ಶೋಧದ ವೇಳೆ ಸ್ಥಳದಲ್ಲಿದ್ದ ಡಿಸ್ಟಿಲರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಕಂಪನಿಯ ಮುಖ್ಯ ಪ್ರವರ್ತಕರಿಗೆ ಶೀಘ್ರವೇ ಸಮನ್ಸ್ ಕಳಿಸಿ ಹೇಳಿಕೆ ಪಡೆಯಲಾಗುವುದು.

**SERVICES**
• EC • Khata Extract • Khata Change • Building Licence • Property tax • Site Merger and Bifurcation • Missed - Alenation Copy • Missed - Layout Plan • Family Tree (ವಂಶವೃಕ್ಷ) • Marriage Certificate • Cast & Income Certificate • Loans - ALL BANKS Site, Building & Construction • Property Registration, Gift Deed, Mortgage and Reconveyance.
Contact : Kiran Boosnur
98440 63409

**ಸೈಟು ಮಾರಾಟಕ್ಕೆ**
ಜೆ.ಹೆಚ್. ಪಟೇಲ್ 30x50 ಪೂರ್ವ, ವಾಜಪೇಯಿ ಲೇಔಟ್ 30x57 ಕಾರ್ನರ್, 30x47 ಪಶ್ಚಿಮ, ಸರ್ಕಾರಿ ನೌಕರರ ಬಡಾವಣೆ 30x40 ಪೂರ್ವ 30x40 ಪೂರ್ವ ಬನಶಂಕರಿ ಬಡಾವಣೆ ಸಂಭ್ರಮ್ ಹೋಟೆಲ್ ಹಿಂಭಾಗ 30x60 ಪೂರ್ವ, 60x52 ಪೂರ್ವ.
ಕಿರಣ್ ಭೂಸನೂರ್ (ಏಜೆಂಟ್)
98440 63409, 97315 63409
(ಸೈಟು, ಮನೆ ಬೇಕೇ? ವಿಚಾರಿಸಿ)

**ಸೈಟುಗಳು ಮಾರಾಟಕ್ಕಿವೆ ಕರ್ನಾಟಕ ಗೃಹ ಮಂಡಳಿಯಲ್ಲಿ**
50x80 East, Rate - 2800/- 40x60 East, 40x60 South, 30x50 East, 30x40 East, 30x50 West, 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
1) ಹೊಸ ಬನಶಂಕರಿ ಲೇಔಟ್‌ನಲ್ಲಿ 30x40, 30x40 West ಅಕ್ಕ-ಪಕ್ಕ, 40 ಅಡಿ ರೋಡಿಗಿದೆ, 2) 30x40 East ಅಕ್ಕ-ಪಕ್ಕ, 30x40 North ಗ್ಲಾಸ್ ಹೌಸ್ ಹತ್ತಿರ, 3) 30x40, 30x40 West ಅಕ್ಕ-ಪಕ್ಕ, S.S. 'A' Block ನಲ್ಲಿ,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ 30x40 ಪಶ್ಚಿಮ ಅಕ್ಕ-ಪಕ್ಕ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x50 ಪಶ್ಚಿಮ, ವಿನಾಯಕ ಬಡಾವಣೆಯಲ್ಲಿ 30x35 ದಕ್ಷಿಣ, ಶಿವಕುಮಾರ ಸ್ವಾಮಿ ಬಡಾವಣೆ 1ನೇ ಹಂತದಲ್ಲಿ 30x40 ಪೂರ್ವ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸರ್ಕಾರಿ ನೌಕರರ ಬಡಾವಣೆ ಸುತ್ತ-ಮುತ್ತ ಹೊಸ ಬಡಾವಣೆಯಲ್ಲಿ 30x40 ಪಶ್ಚಿಮ-ದಕ್ಷಿಣ ಕಾರ್ನರ್ 30x40 ಪಶ್ಚಿಮ, 30x40 ಪೂರ್ವ 30x50 ಪೂರ್ವ, 30x50 ಉತ್ತರ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಅಕೌಂಟೆಂಟ್ ಮ್ಯಾನೇಜರ್, ಸೇಲ್ಸ್ ಸ್ಟಾಫ್, ಗೋಡೌನ್ ಸ್ಟಾಫ್
ಸಮ್ಯಕ್ ಸೆರಾಮಿಕ್ಸ್
ಹದಡಿ ರೋಡ್, ದಾವಣಗೆರೆ.
96200 95520, 80888 92673

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18-35 ವರ್ಷದೊಳಗಿನ ಹುಡುಗರು, ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ. ಆಮಂತ್ರಣ
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
97400 01117

**ಸುಸಜ್ಜಿತ ಹೋಟೆಲ್ ಕೊಡುವುದಿದೆ**
ದಾವಣಗೆರೆಯ ಪ್ರತಿಷ್ಠಿತ ಬಡಾವಣೆಯಲ್ಲಿ ವೆಜ್ ಅಂಡ್ ನಾನ್ ವೆಜ್ ಹೋಟೆಲ್, ತಿಂಡಿ ತಿನಿಸುಗಳು, ಚಾಟ್ಸ್, ಕೆಫೆ ತಕ್ಷಣ ನಡೆಸಿಕೊಂಡು ಹೋಗಲು ಎಲ್ಲಾ ಅನುಕೂಲತೆಯುಳ್ಳ ಹೋಟೆಲ್ ಮಾರಾಟಕ್ಕಿದೆ. (ಕಟ್ಟಡ ಹೊರತುಪಡಿಸಿ)
ಸಂಪರ್ಕಿಸಿ: 77600 05504 / 99864 45843
Whatsapp : 8105676876

**ಲೀಸ್‌ಗೆ ಮನೆ ಇದೆ**
ನೂತನ ಕಾಲೇಜ್ ಹಿಂಭಾಗ, LIC ಕಾಲೋನಿಯಲ್ಲಿ 40x30 East, 2 ಬೆಡ್ ರೂಮ್ ಮನೆ, Rs. 15 ಲಕ್ಷಕ್ಕೆ.
ದಕ್ಷಿತ್ ಐನಳ್ಳಿ ಏಜೆಂಟ್
77955 06795

**ಬೇಕಾಗಿದ್ದಾರೆ**
ಪಾರ್ಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
98809 55777

**ಮನೆ ಬಾಡಿಗೆಗೆ ಇವೆ**
2 ಮನೆಗಳು ಬಾಡಿಗೆಗೆ ಇದೆ.
ಸಂಪರ್ಕಿಸಿ.
84948 20288

**WANTED**
Accountant
For Hotel Industry In Davangere.
With Tally Knowledge
70190 51306

**WANTED**
Receptionist
With Good Communication In Kannada, English And Hindi, For Hotel Industry In Davangere
70190 51306

**ಬೇಕಾಗಿದ್ದಾರೆ**
ಹರಿಹರ, ದೊಡ್ಡಬಾತಿ ಮತ್ತು ಕುಮಾರಪಟ್ಟಣಂಗೆ ಮೀಶೋ ಲಾಜಿಸ್ಟಿಕ್ಸ್ ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ.
86606 12391, 77604 96670

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟಿಂಗ್ ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ವಿಳಾಸ : ಕುಂದುವಾಡ ರಸ್ತೆ, ಬಂಟರ ಭವನ ಪಕ್ಕದಲ್ಲಿ, ದಾವಣಗೆರೆ.
97398 62551, 88848 20186

**ನೇರ ಪರೀಕ್ಷೆಗಳು**
SSLC, PUC, NTC : ನರ್ಸರಿ ಟೀಚರ್ಸ್ ಟ್ರೇನಿಂಗ್. BA, B.Com, MA, M. Com, MBA (ALL), ಸಂಪರ್ಕಿಸಿ : SGET (R) ಮೋತಿ ಸ್ವೀಟ್ಸ್/ ಟ್ರೆಂಡ್ಸ್ ಪಕ್ಕ, ಪಿ.ಬಿ. ರೋಡ್ ದಾವಣಗೆರೆ
86602 35013

**ಬೇಕಾಗಿದ್ದಾರೆ**
1. ಡಿಲೆವರಿ ಬಾಯ್ಸ್
2. ಕಂಪ್ಯೂಟರ್ ಆಪರೇಟರ್ (ಮಹಿಳೆ)
ಸಂಪರ್ಕಿಸಿ : ದೇವನಗರಿ ಗ್ಯಾಸ್ ಏಜೆನ್ಸಿ, ಹಿರೇಮಠ ಕಾಂಪ್ಲೆಕ್ಸ್, ಕಾಯಿಪೇಟೆ, ದಾವಣಗೆರೆ.
98441 14143

**ಬೇಕಾಗಿದ್ದಾರೆ**
ಪ್ಯಾಕೇಜಿಂಗ್ ಇಂಡಸ್ಟ್ರೀಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳವಿರುತ್ತದೆ. ಕೂಡಲೇ ಸಂಪರ್ಕಿಸಿ :
99020 20461
99644 61461

**HOUSES FOR RENT**
1BHK, 2BHK, 3BHK, 4BHK, Independent, Car parking, Vidyanagara, S.S. Layout, Residential Areas.
77955 06795
Dakshith Iyanahalli

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು ಬೆಡ್ ರಿಡನ್ ಪೇಷೆಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಮಾಡಿಸುತ್ತೇವೆ. ಸಂಪರ್ಕಿಸಿ :
85508 36642, 76191 70395

**ಮನೆ, ಸೈಟು ಬೇಕು**
ದೇವರಾಜ ಅರಸು ಬಡಾವಣೆಯಲ್ಲಿ ಮನೆ, ಸೈಟು ಬೇಕಾಗಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ :
99005-21848

**JOB OPORTUNITY**
Work From Home/ Office, Looking For Fluent English Speaking Female Telecallers. Call :
82969 57816

**24X7 CAR TAXI**
ಕಾರ್ ಬಾಡಿಗೆಗೆ
ಸಂಪರ್ಕಿಸಿ :
97436 54365
86609 98651

**PUPPIES FOR SALE**
Good Quality Golden Retriever puppies for Sale. Contact no.
70223 97039

**WANTED**
Pharmacist
fulltime with QP Retail Store
90360 59698

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, B.COM ಆದ ಮಹಿಳೆಯರು ಬಿಲ್ಲಿಂಗ್ ಮಾಡಲು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ ದಾವಣಗೆರೆ.

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಎಕ್ಸ್‌ಚೇಂಜ್ ಆಫರ್**
ಸೋಫಾ, ಕುಷನ್, ಫರ್ನೀಚರ್ ಹಾಗೂ ಸ್ಪಾಂಜ್ ಬೆಡ್‌ಗಳಿಗೆ ಎಕ್ಸ್‌ಚೇಂಜ್ ಇರುತ್ತದೆ. (ಕಂತಿನ ಸೌಲಭ್ಯ)
79751 07268
91486 70932

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**NEED COMPUTER OPERATOR**
Near Ram & Co. Circle, Male Only.
Contact :
70221 58395

**ಶಕೀರಾ ಬ್ಯೂಟಿ ಪಾರ್ಲರ್/ಸಲೂನ್**
Shakeera Beauty Parlour/Salon
ಕೆಲಸಕ್ಕೆ ಬೇಕಾಗಿದ್ದಾರೆ
ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸಕ್ಕಾಗಿ ಬೇಕಾಗಿದ್ದಾರೆ. ಬ್ಯೂಟಿಷಿಯನ್ - 2, ಸಹಾಯಕರು - 2
ಸಂಪರ್ಕಿಸಿ : 93420 19013
#741/4, 10th Main, P.J. Extension Opposite Modi Compound, Davanagere-2.

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್ ನಲ್ಲಿ ಹೆಲ್ಪರ್ ಕೆಲಸಕ್ಕೆ, ಯುವಕರು ಬೇಕಾಗಿದ್ದಾರೆ.
S & S MART
ಹೈಟೆಕ್ ಹಾಸ್ಪಿಟಲ್ ರಸ್ತೆ, ದಾವಣಗೆರೆ.
ಮೊ : 7411399485

**COSDERM HAIR & SKIN CARE WELLNESS CENTRE DAVANAGERE**
URGENTLY STAFF REQUIRED
Counsellor, Marketing manager, Nurse's, Therapist (Male, Female), House keeping (Male, Female), Dietitian
for more information
76192-57443, 81975-72499

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಜಮೀನು ಬೇಕಾಗಿದೆ**
ದಾವಣಗೆರೆಯ ಹೈವೇಗೆ ಹತ್ತಿರದ 5 ಎಕರೆ ಜಮೀನು ಬೇಕಾಗಿದೆ.
ಸಂಪರ್ಕಿಸಿ :
91642 56425
88822 21925

**FOR RENT**
2nd Floor 1000 Sq.ft with Aluminium partition for office use.
P.J Extension 8th Main Road, Mirza Plaza, Davanagere. Contact No.
99641 10810

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.



ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**HOUSE FOR RENT**
1st floor-2 BHK & Having solar water & borewel water facility available for rent.
# 1982/2, 6th cross, siddaveerappa layout, DVG.
94806 93506
82777 97633

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಬಾಡಿಗೆಗೆ ಇದೆ**
ವಿದ್ಯಾರ್ಥಿ ಭವನ್ ಹತ್ತಿರ, ಗ್ರೌಂಡ್ ಫ್ಲೋರ್, 25x13 ಮಳಿಗೆ, 1ನೇ ಮಹಡಿ ಹಾಗೂ 2ನೇ ಮಹಡಿಯಲ್ಲಿ 33x13 ಹಾಲ್, 12ನೇ ಕ್ರಾಸ್, ಕೆಟಿಜೆ ನಗರ, ಹದಡಿ ರೋಡ್, ಓಲ್ಡ್ ಜಿಲ್ಲಾ ಖಜಾನೆ ಎದುರು, ದಾವಣಗೆರೆ.
9164555150, 9844413530

**ಬೇಕಾಗಿದ್ದಾರೆ**
ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ನ್ಯೂ ಮೂನ್ ವೈಟ್ ರೆಸ್ಟೋರೆಂಟ್ ಬಾಡಾ ಕ್ರಾಸ್ ಹತ್ತಿರ ದಾವಣಗೆರೆ. ಸಂಪರ್ಕಿಸಿ :
99006 61421, 99010 79712

**ಮಾರಾಟಕ್ಕಿದೆ**
ಮಿಟ್ಲಕಟ್ಟೆಯಲ್ಲಿ 19 ಗುಂಟೆ ಗೋಡೌನ್‌ಸಹಿತ ಜಾಗ ಮಾರಾಟಕ್ಕಿದೆ. ದಾವಣಗೆರೆ, ಮಲೇಬೆನ್ನೂರು ರೋಡ್.
91641 29236

**ಮನೆ ಬಾಡಿಗೆಗಿದೆ**
2 BHK, ಜೆ.ಹೆಚ್. ಪಟೇಲ್ ನಗರ, ಇ ಬ್ಲಾಕ್, 2ನೇ ಮೇನ್, 2ನೇ ಕ್ರಾಸ್, ಶಾಮನೂರು, ದಾವಣಗೆರೆ.
9945140863
9880718509

**ಕಮರ್ಷಿಯಲ್ ಬಳಕೆಗೆ ಮನೆ ಬಾಡಿಗೆ/ ಲೀಸ್‌ಗೆ ಇದೆ**
ಸರಸ್ವತಿ ನಗರ, ಮುಖ್ಯ ರಸ್ತೆ ನಿಟ್ಟುವಳ್ಳಿಯಲ್ಲಿರುವ ಮನೆ, ಆಫೀಸ್, ಕ್ಲಿನಿಕ್, ಹೋಟೆಲ್, ಸರ್ವಿಸ್ ಸೆಂಟರ್ ಇನ್ನಿತರೆ ಕಮರ್ಷಿಯಲ್ ಬಳಕೆಗೆ ಬಾಡಿಗೆ / ಲೀಸ್ ಇದೆ. ಸಂಪರ್ಕಿಸಿ :
98444 97008, 63638 41943

## ಎಸ್. ನಿಜಲಿಂಗಪ್ಪನವರ 129ನೇ ಜನ್ಮ ದಿನಾಚರಣೆ



ದಾವಣಗೆರೆ, ಡಿ. 10 - ಮಾಜಿ ಮುಖ್ಯಮಂತ್ರಿ ಸಿದ್ದನಹಳ್ಳಿ ನಿಜಲಿಂಗಪ್ಪನವರ 129ನೇ ಹುಟ್ಟು ಹಬ್ಬದ ಪ್ರಯುಕ್ತ ವಿಧಾನಸೌಧದ ಮುಂಭಾಗದಲ್ಲಿರುವ ನಿಜಲಿಂಗಪ್ಪ ಅವರ ಪುತ್ಥಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಲಾರ್ಪಣೆ ಮಾಡಿದರು.

ಇದೇ ಸಂದರ್ಭದಲ್ಲಿ ನಿಜಲಿಂಗಪ್ಪ ಮೊಮ್ಮಗ ಮನೋಹರ ಸಿದ್ದವ್ವಹಳ್ಳಿ ಅವರು, ದಾವಣಗೆರೆಯಲ್ಲಿ ನಿಜಲಿಂಗಪ್ಪ ಅವರು ಬಾಲ್ಯದಲ್ಲಿ ಓದಿ ಬೆಳೆದಿದ್ದಾರೆ, ಈಗಲೂ ಸಹ ಹಳೆ ದಾವಣಗೆರೆಯಲ್ಲಿ ಎಸ್ಸೆನ್ ಹಳೆ ಮನೆ ಇದ್ದು, ಇಂದಿಗೂ ನಿಜಲಿಂಗಪ್ಪನವರ ಮನೆ ಪ್ರಸಿದ್ಧ ವಾಗಿರುತ್ತದೆ. ಈ ಸಂಬಂಧವಾಗಿ ದಾವಣಗೆರೆಯಲ್ಲಿ ನಿರ್ಮಾಣವಾಗುತ್ತಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಎಸ್ಸೆನ್ ಹೆಸರನ್ನು ಇಡಬೇಕು ಎಂದು ಮನವಿಯನ್ನು ಸಲ್ಲಿಸಿದರು.

ಮನವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಕಾರಾತ್ಮಕವಾಗಿ ಸ್ಪಂದಿಸಿದರು. ಇದೇ ಸಂದರ್ಭದಲ್ಲಿ ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಶಿವರಾಜ್ ಪಾಟೀಲ್ ಇದ್ದರು.

## ನಗರದಲ್ಲಿ ಇಂದು ಕೃತಿ ಲೋಕಾರ್ಪಣೆ

ನಿವೃತ್ತ ಶಿಕ್ಷಕಿ ಜಿ.ಎನ್. ಕಮಲಮ್ಮ ಚಂದ್ರಪ್ಪ ಅವರ ಸುಪುತ್ರಿ ಮತ್ತು ಕವಯತ್ರಿ ಲಿಂಗೈಕ್ಯ ಕು. ಜಿ.ಕೆ ಕಾವ್ಯ ಅವರ ಪ್ರಥಮ ವರ್ಷದ ಪುಣ್ಯಾರಾಧನೆ ಅಂಗವಾಗಿ ಇಂದು ಬೆಳಗ್ಗೆ 11 ಗಂಟೆಗೆ ಶ್ರೀಮತಿ ರಾಜನಹಳ್ಳಿ ಜಾನುಬಾಯಿ ಶ್ರೀನಿವಾಸ ಮೂರ್ತಿಯವರ ಧರ್ಮಶಾಲೆಯಲ್ಲಿ ಸರ್ವಶರಣ ಸಮ್ಮೇಳನ ಹಾಗೂ ಲಿಂ . ಜಿ .ಕೆ ಕಾವ್ಯ ಅವರ ರಚನೆಯ 'ಕಾವ್ಯ - ಕನ್ನಿಕೆ' ಕವನ ಸಂಕಲನದ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ.

ಪಾಂಡುಮಟ್ಟಿ ವಿರಕ್ತ ಮಠದ ಡಾ. ಶ್ರೀ ಗುರುಬಸವ ಸ್ವಾಮೀಜಿ, ಜಡೆಸಿದ್ದ ಶಿವಯೋಗೇಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯಲಿರುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ವಹಿಸುವರು. ಪತ್ರಕರ್ತ ಹುಬ್ಬಳ್ಳಿಯ ರಾಜೇಂದ್ರ ಪಾಟೀಲ್ ಅವರು ಕಾವ್ಯ ಕನ್ನಿಕೆ ಕವನ ಸಂಕಲನ ಬಿಡುಗಡೆ ಮಾಡುವರು.

ಮುಖ್ಯ ಅತಿಥಿಗಳಾಗಿ ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್. ಎಸ್ ಮಲ್ಲಿಕಾರ್ಜುನ, ಶ್ರೀಮತಿ ಪ್ರಭಾ ಎಸ್. ಎಸ್ ಮಲ್ಲಿಕಾರ್ಜುನ್, ಚಿತ್ರದುರ್ಗದ ರಾಜಯೋಗಿನಿ ಬ್ರಹ್ಮಾಕುಮಾರಿ ರಶ್ಮಿ, ಸಾಹಿತಿ ಎಸ್.ಟಿ. ಶಾಂತಗಂಗಾಧರ ಅವರುಗಳು ಭಾಗವಹಿಸುವರು.

ಕುಶಾಲ್ ಕೆ.ವಿ. ವಚನ ಗೀತೆ ಹಾಡುವರು. ಶ್ರೀಮತಿ ಶ್ವೇತಾ ಜಿ.ಆರ್, ಗಂಗಾಧರ ಬಿ.ಎಲ್ ನಿಟ್ಟೂರು, ಶ್ರೀಮತಿ ಜಿ.ಎನ್ ಕಮಲಮ್ಮ, ಶ್ರೀಮತಿ ಸುಧಾ, ಶ್ರೀಮತಿ ರಾಣಿ ಅವರು ಕಾರ್ಯಕ್ರಮ ನಿರ್ವಹಿಸುವರು.

## ಸರ್ವ ಧರ್ಮೀಯರ ಅಭಿವೃದ್ಧಿ, ರಕ್ಷಣೆಗೆ ಮುಖ್ಯಮಂತ್ರಿ ಬದ್ಧ : ಡಿಬಿ



ದಾವಣಗೆರೆ, ಡಿ. 10- ಅಲ್ಪಸಂಖ್ಯಾತರೂ ಸೇರಿದಂತೆ, ಸರ್ವ ಧರ್ಮೀಯರ ಅಭಿವೃದ್ಧಿ ಮತ್ತು ರಕ್ಷಣೆಗೆ ಬದ್ಧ ಎಂಬ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಹೇಳಿಕೆ ಸರಿಯಾಗಿದೆ ಎಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಧಿಕಾರದ ಆಸೆಗೆ ಮುಸ್ಲಿಂ ಮೀಸಲಾತಿ ಕಿತ್ತುಕೊಂಡು ದೇಶಕ್ಕೆ ಮಾದರಿಯಾದ ಕರ್ನಾಟಕ ಮೀಸಲಾತಿ ವ್ಯವಸ್ಥೆಯನ್ನು ಮಣ್ಣು ಪಾಲು ಮಾಡಿದ ಬಿಜೆಪಿಗೆ, ರಾಜ್ಯದ ಜನರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋಲುಣಿಸಿದ್ದಾರೆ ಎಂದರು.

ಸಿದ್ಧರಾಮಯ್ಯ ಎಲ್ಲಾ ಜಾತಿ, ಧರ್ಮದವರ ಕಾರ್ಯಕ್ರಮಗಳಿಗೆ ಹೋಗುವುದು ಅವರ ರೂಢಿಯಾಗಿದ್ದು, ಅದೇ ರೀತಿ ಡಿ. 4 ರಂದು ಹುಬ್ಬಳ್ಳಿಯಲ್ಲಿ ನಡೆದ ಮುಸ್ಲಿಂ ಧರ್ಮದ ಸಮಾವೇಶದಲ್ಲಿ ಪಾಲ್ಗೊಂಡು ಈ ಸಮುದಾಯಕ್ಕೆ ಸಂವಿಧಾನ ಬದ್ಧ ಹಕ್ಕು ಪ್ರತಿಪಾದಿಸಿ, ಸರ್ವ ಜನಾಂಗದವರು ಸಮಾನರು ಎಂಬ ಅರ್ಥದಲ್ಲಿ ಮಾತನಾಡಿದ್ದಾರೆ. ಆದರೆ ಈ ವಿಚಾರವನ್ನು ನೆಪವನ್ನಾಗಿಟ್ಟುಕೊಂಡು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿ ಪಕ್ಷದ ನಾಯಕ ಆರ್.ಅಶೋಕ್, ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಅಶ್ವತ್ಥ್ ನಾರಾಯಣ ಸೇರಿದಂತೆ ಮುಖ್ಯಮಂತ್ರಿಗಳ ವಿರುದ್ಧ ವಾಗ್ದಾಳಿ ನಡೆಸುತ್ತಿರುವುದು ಖಂಡನೀಯ ಎಂದರು.

ಸುದ್ದಿಗೋಷ್ಠಿಯಲ್ಲಿ ಮಹಮ್ಮದ್ ಜಿಕ್ರಿಯಾ, ಕೆ.ಎಂ. ಮಂಜುನಾಥ, ಎಂ.ಕೆ. ಲಿಯಾಕತ್ ಅಲಿ, ಡಿ.ಶಿವಕುಮಾರ್, ವೀರಭದ್ರಪ್ಪ, ಫಾರೂಖ್ ಉಪಸ್ಥಿತರಿದ್ದರು.

# ಬಸವರಾಜ ದೇಶಿಕೇಂದ್ರ ಶ್ರೀಗಳಿಂದಾಗಿ ಐರಣಿ ಮಠ ಉತ್ತುಂಗಕ್ಕೆ





## ಕೋಣನ ತಲೆ : ಶ್ರೀಗಳ ಪಟ್ಟಾಭಿಷೇಕದ 46ನೇ ವಾರ್ಷಿಕೋತ್ಸವದಲ್ಲಿ ಶಾಸಕ ಡಿ.ಜಿ. ಶಾಂತನಗೌಡ

ಮಲೇಬೆನ್ನೂರು, ಡಿ. 10 - ಶ್ರೀ ಸದ್ಗುರು ಬಸವರಾಜ ದೇಶಿಕೇಂದ್ರ ಸ್ವಾಮೀಜಿ ಮಠದ ಜವಾಬ್ದಾರಿ ವಹಿಸಿಕೊಂಡ ನಂತರ ಐರಣಿ ಹೊಳೆಮಠವು ಶಾಲೆಗಳು ಮತ್ತು ಕೋಣನತಲೆ ಬೀರನಕೆರೆ, ಹರಿಹರ, ದಾವಣಗೆರೆ, ಕಾಗಿನೆಲೆ, ಮೈಸೂರಿನಲ್ಲೂ ಶಾಖಾ ಮಠಗಳನ್ನು ತೆರೆಯುವ ಮೂಲಕ ಐರಣಿ ಮಠವನ್ನು ಉತ್ತುಂಗಕ್ಕೆ ಬೆಳೆಸಿದ್ದಾರೆ ಎಂದು ಹೊನ್ನಾಳಿ ಶಾಸಕ ಡಿ.ಜಿ. ಶಾಂತನಗೌಡ ಶ್ಲ್ಯಾಘಿಸಿದರು.

ಭಾನುವಾರ ಸಂಜೆ ಕೋಣನತಲೆ ಗ್ರಾಮದಲ್ಲಿರುವ ಶ್ರೀಗುರು ದೇವ ಮುಪ್ಪಿನಾರ್ಯ ಆಶ್ರಯದಲ್ಲಿ ಹಮ್ಮಿಕೊಂಡಿರುವ ಐರಣಿ ಹೊಳೆಮಠದ ಶ್ರೀ ಸದ್ಗುರು ಬಸವರಾಜ ದೇಶಿಕೇಂದ್ರ ಸ್ವಾಮೀಜಿಯವರ ಪಟ್ಟಾಭಿಷೇಕದ 46ನೇ ವಾರ್ಷಿಕೋತ್ಸವ ಮತ್ತು ಅಖಂಡ ಶಿವಭಜನಾ ಸಪ್ತಾಹ, ತುಲಾಭಾರ ಸೇವೆ, ಶ್ರೀ ಸಿದ್ಧಾರೂಢರ ಚರಿತ್ರೆ ಪಾರಾಯಣ ಮಂಗಲ, ಕಾರ್ತಿಕೋತ್ಸವ, ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವ, ಸಾಮೂಹಿಕ ವಿವಾಹ ಕಾರ್ಯಕ್ರಮಗಳ 2ನೇ ದಿನದ ಧರ್ಮಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

1978ರಲ್ಲಿ ಐರಣಿಯಲ್ಲಿ ನಾನು ನೋಡಿದ್ದ ಮಠಕ್ಕೂ ಮತ್ತು ಈಗ ಆಗಿರುವ ಅಭಿವೃದ್ಧಿಗೆ ಸಾಕಷ್ಟು ವ್ಯತ್ಯಾಸವಾಗಿದ್ದು, ಶ್ರೀಗಳು ತಮ್ಮ ಸರಳ ಹಾಗೂ ಮಹಾನ್ ತಪಸ್ಸಿನಿಂದ ಅಪಾರ ಭಕ್ತರ ಹೃದಯ ಗೆದ್ದಿದ್ದಾರೆ. ನನ್ನನ್ನೂ ಸೇರಿ ಎಲ್ಲಾ ಭಕ್ತರು ಈ ಮಠಗಳ ಅಭಿವೃದ್ಧಿ ಕೈ ಜೋಡಿಸಿದ್ದಾರೆ.

ಜನರನ್ನು ಸತ್ಯ ಧರ್ಮದ ಹಾದಿಯಲ್ಲಿ ಕರೆದುಕೊಂಡು ಹೋಗುವ ಪ್ರಯತ್ನವನ್ನು ನಮ್ಮ ನಾಡಿನಲ್ಲಿ ಮಠಗಳನ್ನು ಹಿಂದಿನಿಂದಲೂ ಮಾಡಿಕೊಂಡು ಬಂದಿದ್ದರೂ ಕೆಲವರು ಇನ್ನೂ ನೀಚತನದಲ್ಲಿದ್ದಾರೆ.

ಚಪ್ಪಲಿಗೆ ಇರುವ ಬೆಲೆ ಸತ್ತ ಮೇಲೆ ಮನುಷ್ಯನಿಗೆ ಇರುವುದಿಲ್ಲ ಎಂಬುದನ್ನು ನಾವೆಲ್ಲರೂ ಅರ್ಥ ಮಾಡಿಕೊಂಡು ದಾನ, ಧರ್ಮದ ಹಾದಿಯಲ್ಲಿ ಹೋಗಬೇಕು. ಬರಗಾಲವನ್ನು ಎದುರಿಸುವ ಶಕ್ತಿಯನ್ನು ಭಗವಂತ ಹಾಗೂ ಶ್ರೀಗಳು ನಾಡಿನ ಜನತೆಗೆ ನೀಡಬೇಕೆಂದು ಶಾಂತನಗೌಡರು ಪ್ರಾರ್ಥಿಸಿದರು.

ಇನ್‌ಸೈಟ್ ಮುಖ್ಯಸ್ಥ ಜಿ.ಬಿ. ವಿನಯ್ ಕುಮಾರ್ ಮಾತನಾಡಿ, ಸಿದ್ಧಾರೂಢರ ಮಠಗಳ ಸಂಪ್ರದಾಯದಲ್ಲಿ ಜನರಿಗೆ ಹೆಚ್ಚು ಭಕ್ತಿ, ನಂಬಿಕೆ ಇರುವುದನ್ನು ನಾವು ಇಲ್ಲಿ ನೋಡಿ ತಿಳಿದು ಕೊಂಡಿದ್ದೇನೆಂದು ಹೇಳಿದರು.

ಬೇಗೂರು ಶ್ರೀ ಗುರು ಮುಪ್ಪಿನಾರ್ಯ ಆಶ್ರಮದ ಕಾರ್ಯದರ್ಶಿ ಹಾಗೂ ಶಿಕ್ಷಕ ಮಂಜುನಾಥ್ ಕೊಟ್ಟಣ ಮಾತನಾಡಿ, ಸಿದ್ಧಾರೂಢರ ಪುರಾಣ ಸತ್ಸಂಗ ನಡೆಯುವ ಊರಿನಲ್ಲಿ ಶಾಂತಿ, ಸಮೃದ್ಧಿ ನೆಲಸುತ್ತದೆ. ಸಾಧು-ಸಂತರ ಸಂಘವೇ ಸತ್ಸಂಗವಾಗಿದ್ದು, ಸತ್ಸಂಗದ ಫಲವಾಗಿ ಕುರಿ ಕಾಯುವ ವ್ಯಕ್ತಿ ಪರಮೇಶ್ವರ -ಪಾರ್ವತಿಯನ್ನು ಧರೆಗಿಳಿಸಿದ ಸತ್ಯ ಕತೆಯನ್ನು ಮಂಜುನಾಥ್ ಹೇಳಿದರು.

ಸಂತೇಬೆನ್ನೂರಿನ ಶಿಕ್ಷಕ ಮಾರುತಿ ಮಾತನಾಡಿ, ಜಾತಿ, ವರ್ಗ ರಹಿತವಾದ ಆರೂಢ ಸಂಪ್ರದಾಯ ನಾಡಿನ ಜನರ ಹೃದಯ ಗೆದ್ದಿದೆ. ನಾವು-ನೀವು ದೀಪದಂತೆ ಬೆಳಕು ಹಿಡುವ ಕೆಲಸ ಮಾಡಬೇಕೆಂದ ಮಾರುತಿ ಅವರು, ಮಕ್ಕಳಲ್ಲಿ ನೈತಿಕತೆ ಬೆಳೆಸಬೇಕು. ಇಂತಹ ಸತ್ಸಂಗಗಳಿಗೆ ಕರೆತರಬೇಕೆಂದರು.

ಹೊನ್ನಾಳಿಯ ರೈಸ್‌ಮಿಲ್ ಮಾಲೀಕ ಹೆಚ್.ಎ ಉಮಾಪತಿ, ಮುಖಂಡ ಬಿ.ಸಿದ್ದಪ್ಪ ಮಾತನಾಡಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಹೋತನಹಳ್ಳಿ ಶ್ರೀ ಗುರು ಸಿದ್ಧಾಶ್ರಮದ ಶ್ರೀ ಶಂಕರಾನಂದ ಸ್ವಾಮೀಜಿ ಮಾತನಾಡಿ, ಬಸವರಾಜ ದೇಶಿಕೇಂದ್ರ ಶ್ರೀಗಳು ತಮ್ಮ ಅಧ್ಯಾತ್ಮಿಕ ಭಕ್ತಿ-ಭಾವದಿಂದ ನಮ್ಮ ರಾಜ್ಯದ ಜೊತೆಗೆ ಉತ್ತರ ಹಾಗೂ ದಕ್ಷಿಣ ಭಾರತದಲ್ಲೂ ಭಕ್ತರನ್ನು ಹೊಂದಿದ್ದಾರೆ ಎಂದರು.

ಶ್ರೀ ಸದ್ಗುರು ಬಸವರಾಜ ದೇಶಿಕೇಂದ್ರ ಸ್ವಾಮೀಜಿ, ಬಾಲಯೋಗಿ ಶ್ರೀ ಸಿದ್ಧಾರೂಢ ಸ್ವಾಮೀಜಿ ದಿವ್ಯ ನೇತೃತ್ವ ವಹಿಸಿದ್ದರು.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಬಸಾಪಟ್ಟಣ ಶಿಕ್ಷಕ ಶಾಂತರಾಜ್, ಮಾಜಿ ಛೇರ್ಮನ್ ನಾಗಪ್ಪ, ಸುಭಾಷ್ ಚಂದ್ರ, ಜಿಗಳಿಯ ಗೌಡ್ರ ಬಸವರಾಜಪ್ಪ, ಬಿ.ಎಂ. ದೇವೇಂದ್ರಪ್ಪ, ಬಿ. ಸೋಮಶೇಖರಚಾರಿ, ಬೆಣ್ಣೇರ್ ನಂದ್ಯೆಪ್ಪ, ಪಶು ವೈದ್ಯಾಧಿಕಾರಿ ಡಾ. ಮೇಘರಾಜ್ ಪ್ರಗತಿ ಪರ ಯುವ ಚಿಂತಕ ರಾಘು ದೊಡ್ಮನಿ, ಉಪ ಪ್ರಾಚಾರ್ಯ ರಾಜಶೇಖರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಕರ್ನಾಟಕ ಕಲಾಶ್ರೀ ಬೆಂಗಳೂರಿನ ವಿ. ಮುರಳಿ ಹಾಗೂ ಎಂ. ದುರುಗೇಶ್ ಮತ್ತು ಅವರ ತಂಡದವರ ನಾದಸ್ವರ ಹಾಗೂ ಡೋಳ್ಳು ವಾದನ ಎಲ್ಲರ ಮನಸೂರೆಗೊಂಡಿತು.

# ಜಗಳೂರು ದಾವಣಗೆರೆಯಲ್ಲಿಯೇ ಇರಲಿ



(1ನೇ ಪುಟದಿಂದ) ಏನು ಅನ್ಯಾಯವಾಗಿದೆ ಎಂಬುದನ್ನು ತೋರಿಸಲಿ. ಸಂವಿಧಾನದ ಮೂಲಕವೇ ಎಲ್ಲಾ ಬಂದಿದೆ. ಅಭಿವೃದ್ಧಿಯತ್ತ ಜಗಳೂರು ಮುಂದುರೆಯುತ್ತಿದೆ. ದಾವಣಗೆರೆ ಯಲ್ಲೇ ಜಗಳೂರು ಉಳಿಯಬೇಕು. ಉಳಿಸುವ ನಿಟ್ಟಿನಲ್ಲಿ ಹೋರಾಟ ಮಾಡೋಣ ಎಂದು ಕರೆ ನೀಡಿದರು.

ದಾವಣಗೆರೆ ಜಿಲ್ಲೆಯಲ್ಲೇ ಜಗಳೂರು ಮುಂದುವರೆಯಲು ಶಾಸಕ ಬಿ.ದೇವೇಂದ್ರಪ್ಪ ನೇತೃತ್ವದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ, ಉಪ ಮುಖ್ಯಮಂತ್ರಿಗಳಿಗೆ, ಕಂದಾಯ ಮಂತ್ರಿಗಳಿಗೆ, ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಿಗೆ, ಜಿಲ್ಲಾಧಿಕಾರಿಗಳಿಗೆ, ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲು ಸಭೆ ಸರ್ವಾನುಮತದತೀರ್ಮಾನಿಸಲಾಯಿತಲ್ಲದೇ ಜಗಳೂರು ತಾಲ್ಲೂಕು ದಾವಣಗೆರೆ ಜಿಲ್ಲೆಯಲ್ಲಿಯೇ ಉಳಿಯಲು ಎಲ್ಲರು ಒಕ್ಕೊರಲಿನಿಂದ ಹೋರಾಟ ನಡೆಸಲು ಸನ್ನದ್ದರಾಗಲು ತೀರ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ದಾವಣಗೆರೆ ಜಿಲ್ಲೆಯಲ್ಲೇ ಜಗಳೂರು ತಾಲ್ಲೂಕನ್ನು ಉಳಿಸುವ ಹೋರಾಟದ ಸಮಿತಿಯ ಮುಖಂಡರಾದ ಶಿವನಗೌಡ, ಬಸಾಪುರ ರವಿಚಂದ್ರ, ಹೆಚ್.ಸಿ.ಮಹೇಶ್, ಚಂದ್ರನಾಯ್ಕ್, ವೈ.ಎನ್.ಮಂಜುನಾಥ್, ನಾಗರಾಜ್ ನಾಯಕ್, ಓಮಣ್ಣ, ಕರಿಬಸವನಗೌಡ, ಶಿವಕುಮಾರಸ್ವಾಮಿ, ಗೋಗುದ್ದು ರಾಜು, ಗೋಡೆ ಪ್ರಕಾಶ್, ವೀರೇಂದ್ರ ಪಾಟೀಲ್, ಎಂ.ಎಸ್.ಪಾಟೀಲ್, ಡೆಂಕಪ್ಪ ಬಸವರಾಜ್, ಬೆಲ್ಲದ ಬಸವರಾಜ್, ಗಿರೀಶ್, ಜಗದೀಶ್‌ಗೌಡ್ರು, ಹರೀಶ್, ದೀಪಕ್ ಪಾಟೀಲ್, ಅಸಗೋಡು ಸುರೇಶ್‌ಗೌಡ್ರು ಮುಂತಾದವರು ಉಪಸ್ಥಿತರಿದ್ದರು.

## ಪರವಾಗಿ ನಾನು ಇರುತ್ತೇನೆ

(1ನೇ ಪುಟದಿಂದ) ದಾವಣಗೆರೆ ಜಿಲ್ಲೆಯ ಲ್ಲಿಯೇ ಉಳಿಯಬೇಕು ಇದಕ್ಕೆ ಸಹಕಾರ ನೀಡಬೇಕು. ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ದಿ ಕೆಲಸಗಳಾಗ ಬೇಕಾಗಿದೆ. ಕೆರೆಗಳಿಗೆ ನೀರು ತುಂಬಿಸಬೇಕಾಗಿದೆ. ಬರ ನಿರ್ವಹಣೆ ಮಾಡಬೇಕಾಗಿದೆ. ನನ್ನ ಮೇಲೆ ಸಾಕಷ್ಟು ಜವಾಬ್ದಾರಿ ಇದೆ. ಆದ್ದರಿಂದ ಎಲ್ಲರೂ ಒಗ್ಗೂಡಿ ಮಾತನಾಡಿ ತೀರ್ಮಾನ ಕೈಗೊಳ್ಳಲಾಗುವುದು. ಸ್ವಾತಂತ್ರ್ಯ ಭಾರತದಲ್ಲಿ ಹೋರಾಟ, ಪ್ರತಿಭಟನೆ ಸಹಜ ಇದರಲ್ಲಿ ಯಾರು ಮೇಲು, ಕೇಳು ಇಲ್ಲ ಎಲ್ಲರೂ ಸಮಾನರೇ ಆಗಿದ್ದೇವೆ. ಕ್ಷೇತ್ರ ಮುಂದಿನ ಐದು ವರ್ಷಗಳಲ್ಲಿ ಪ್ರಗತಿಯತ್ತ ಕೊಂಡೊಯ್ಯಲು ಎಲ್ಲರೂ ಸಂಪೂರ್ಣ ಸಹಕಾರ ನೀಡಬೇಕು ಎಂದರು.

## ಮತದಾರರಿಗೆ ಆಮಿಷ: ನೋಟಿಸ್

ದಾವಣಗೆರೆ, ಡಿ.10- ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮತದಾರರಿಗೆ ಗಿಫ್ಟ್ ಬಾಕ್ಸ್ ಹಾಗೂ ಹಣ ಹಂಚಿಕೆ ಮಾಡಿ ಗೆದ್ದಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ನಾಲ್ವರಿಗೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ ಎಂದು ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಸುಭಾನ್ ಖಾನ್ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ, ರಾಜ್ಯ ಮುಖ್ಯ ಚುನಾವಣಾಧಿಕಾರಿ, ಜಿಲ್ಲಾಧಿಕಾರಿ ಅವರಿಗೆ ಡಿಸೆಂಬರ್ 4ರಂದು ನೋಟಿಸ್ ಜಾರಿ ಮಾಡಿದೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಮತದಾರರಿಗೆ ಗಿಫ್ಟ್ ಬಾಕ್ಸ್, ಹಣದ ಹಂಚಿಕೆ ಮಾಡುತ್ತಿರುವ ಬಗ್ಗೆ ಕೆಟಿಜೆ ನಗರ ಮತ್ತು ಗಾಂಧಿನಗರ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಾಗಿದ್ದು, ಚುನಾವಣಾ ಅಧಿಕಾರಿಗಳೇ ಇದನ್ನು ಪತ್ತೆ ಹಚ್ಚಿ ದೂರು ದಾಖಲಿಸಿದ್ದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ಈ ಹಿನ್ನೆಲೆಯಲ್ಲಿ ರಾಜ್ಯ ಮುಖ್ಯ ಚುನಾವಣಾಧಿಕಾರಿ ಅವರಿಗೆ ದೂರು ಸಲ್ಲಿಸಲಾಗಿತ್ತು. ಅವರೂ ಯಾವುದೇ ಕ್ರಮ ತೆಗೆದುಕೊಳ್ಳದ ಹಿನ್ನೆಲೆಯಲ್ಲಿ ಹೈಕೋರ್ಟ್‌ನಲ್ಲಿ ದಾವೆ ಸಲ್ಲಿಸಲಾಗಿತ್ತು ಎಂದು ಮಾಹಿತಿ ನೀಡಿದರು.

ಪ್ರಕರಣ ದಾಖಲಾಗಿದ್ದರೂ ಸರಿಯಾಗಿ ತನಿಖೆ ನಡೆಸದ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರ ವಿರುದ್ಧ ಕ್ರಮ ಜರುಗಿಸುವಂತೆ ಕೋರಿ ರಾಜ್ಯಪಾಲರಿಗೂ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ಅಲ್ಲಾಭಕ್ಷಿ ಹಾಗೂ ಮಹಮ್ಮದ್ ಪರ್ವೇಜ್ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

## ನಗರದಲ್ಲಿ 17ರಂದು ಸಂಗೀತ ಶಿಬಿರ

ದಾವಣಗೆರೆ, ಡಿ.10- ನಗರದ ಮಹತೀ ಸಾಂಸ್ಕೃತಿಕ ಕಲಾ ಸಂಸ್ಥೆಯಲ್ಲಿ ಮಹತೀ ಸಂಗೀತ ಮಹಾವಿದ್ಯಾಲಯದ ವತಿಯಿಂದ ಇದೇ ದಿನಾಂಕ 17 ರಿಂದ ಮಧ್ಯಾಹ್ನ 3 ಕ್ಕೆ ಶ್ರೀ ಪುರಂದರದಾಸರ ದೇವರ ನಾಮಗಳು ಹಾಗೂ ಸದ್ಗುರು ಶ್ರೀ ತ್ಯಾಗರಾಜರ ಪಂಚರತ್ನ ಕೃತಿ, ಹಾಡುಗಾರಿಕಾ ಸಂಗೀತ ಶಿಬಿರವನ್ನು ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಆಸಕ್ತರು ಇದೇ ದಿನಾಂಕ 14ರೊಳಗೆ ಎಂ. ದ್ವಾರಕೇಶ್ (9448872944) ಹಾಗೂ ಸವಿತಾ ಕೂಲಂಬಿ (9986044145) ಅವರನ್ನು ಸಂಪರ್ಕಿಸಿ ಹೆಸರು ನೋಂದಾಯಿಸಬಹುದು.

# ದಾವಣಗೆರೆ ಖಾಸಗಿ ಬಸ್ ನಿಲ್ದಾಣ ಹೆಸರಿನ 'ವಸತಿ ಗೃಹ'



## ಓದುಗರ ಪತ್ರ

ಮಾನ್ಯರೇ,

ದಾವಣಗೆರೆ ನಗರವನ್ನು ಸ್ಮಾರ್ಟ್ ಸಿಟಿಯಾಗಿ ಮಾಡಲಾಗುವುದೆಂಬ ಘೋಷಣೆ ಯಾದಾಗಿನಿಂದ ನಗರದಲ್ಲಿ ಕಾಮಗಾರಿಗಳ ಹೆಸರಿನಲ್ಲಿ ಅನೇಕ ಕರಾಮತ್ತುಗಳೇ ನಡೆದಿವೆ. ಅದನ್ನು ಪುಸ್ತಕ ರೂಪದಲ್ಲೂ ಬರೆಯಬಹುದು. ಹೋಗಲಿ ಬಿಡಿ; ಮೊದಲು ಕಾಂಕ್ರೀಟ್ ರಸ್ತೆ ಮಾಡುವುದು, ನಂತರ ಒಳಚರಂಡಿ ಕಾಮಗಾರಿಗಾಗಿ ರಸ್ತೆ ಅಗೆಯುವುದು ಮತ್ತೆ ರಸ್ತೆ ರಿಪೇರಿ ಮಾಡುವುದು. ಅಷ್ಟೇನಾ ಎನ್ನಬೇಡಿ, ಜಲಸಿರಿ ಯೋಜನೆ ಜಾರಿಮಾಡಿ ಇಪ್ಪತ್ತನಾಲ್ಕು ಗಂಟೆ ನೀರು ಹರಿಸುತ್ತೇವೆಂದು ಮತ್ತೆ ರಸ್ತೆ ಬಗಿಯುವುದು ಇದನ್ನು ದಾವಣಗೆರೆಯ ಜನ ಕಳೆದ ಏಳೆಂಟು ವರ್ಷಗಳಿಂದ ನೋಡುತ್ತಲೇ ಬಂದಿದ್ದಾರೆ. ಜನರೂ ಕೂಡ ಎಷ್ಟು ಸಿನಿಕರೆಂದರೆ ನಮ್ಮದೇನು ಹೋಗುತ್ತೆ ಸರ್ಕಾರದ ದುಡ್ಡು ಮುಖ ತಿರುಗಿಸುವುದೂ ಉಂಟು.

ಹೀಗೆ ಕೆಡವಿ-ಕಟ್ಟಿ, ರಸ್ತೆ ಬಗೆದು ಮತ್ತೆ ಮುಚ್ಚಿ ಮತ್ತೆ ಬಗೆದಿರುವುದಕ್ಕೆ ಲೆಕ್ಕ ಉಂಟೆ? ಸಾಧ್ಯವೇ ಇಲ್ಲ. ಹೀಗೆಯೇ ಸ್ಮಾರ್ಟ್ ಸಿಟಿ ಮಾಡಬಹುದೆಂಬ ಅವರ ಲೆಕ್ಕಾಚಾರಗಳನ್ನು ಜಾರಿಗೆ ತರಲು ಅಧಿಕಾರಿ ವರ್ಗದವರಲ್ಲೇ ಪೈಪೋಟಿ ಶುರುವಾಗಿ ವರ್ಗವಾಗಿ ಹೋಗಿ ಬಂದವರಿಗೂ ಕೊರತೆ ಇಲ್ಲ. ಅಷ್ಟರಮಟ್ಟಿಗೆ ಅಧಿಕಾರಿಗಳಲ್ಲಿ ದಾವಣಗೆರೆಯನ್ನು ಸ್ಮಾರ್ಟ್ ಸಿಟಿಯನ್ನಾಗಿ ಪೈಪೋಟಿಯೇ ನಡೆದಿದೆ! ಈ ಕಾರಣದಿಂದ ಈ ನಗರ ಎಷ್ಟು ಸ್ಮಾರ್ಟ್ ಆಗಿದೆಯೋ ಗೊತ್ತಿಲ್ಲ, ಆದರೆ ಈ ಸಂಸ್ಥೆಗೆ ಬಂದು ಹೋಗುತ್ತಿರುವ ಅಧಿಕಾರಿಗಳ ಸಂಪತ್ತು ಸ್ಮಾರ್ಟ್ ಆಗಿರಲಿಕ್ಕೆ ಸಾಕು.

ಇವರ ಸಾಮಾನ್ಯ ಜ್ಞಾನವೂ ಅಂತಿತಹದ್ದಲ್ಲ. ಇವರ ಕಿರೀಟಕ್ಕೆ ಮತ್ತೊಂದು ಗರಿ ಎನ್ನುವಂತೆ 'ಖಾಸಗಿ ಬಸ್ ನಿಲ್ದಾಣ' ಮರುನಿರ್ಮಿತವಾಗಿ ಎದ್ದು ನಿಂತಿದೆ! ಮೊದಲಿದ್ದ ಹಳೇ ನಿಲ್ದಾಣದಲ್ಲಿ ಹಾಗೋ ಹೀಗೋ ಖಾಸಗಿ ಬಸ್‌ಗಳು ಪೈಪೋಟಿಯಿದ್ದರೂ ತಮ್ಮ ತಮ್ಮ ಬಸ್‌ಗಳನ್ನು ನಿಲ್ದಾಣದಲ್ಲಿ ಜಾಗಗಳನ್ನು ಹುಡುಕಿ ಕೊಳ್ಳುತ್ತಿದ್ದರು. ಆದರೀಗ ಬಸ್ ನಿಲ್ದಾಣದ ಹೆಸರಿನಲ್ಲಿ ಹೊಸ ಕಟ್ಟಡವೇನೋ ಎದ್ದು ನಿಂತಿದೆ ಆದರೆ ಅಲ್ಲಿ ಬಸ್‌ಗಳಿಗೇ ಜಾಗ ಸಿಗಬಾರದೇ? ಹತ್ತಿರತ್ತಿರ ಹತ್ತು ಲಕ್ಷ ಜನ ಸಂಖ್ಯೆ ಮೀರುತ್ತಿರುವ, ಶರವೇಗದಲ್ಲಿ ಮತ್ತಷ್ಟು ವೇಗದಲ್ಲಿ ಬೆಳೆಯುತ್ತಿರುವ ಈ ನಗರಕ್ಕೆ ಕನಿಷ್ಟ ಹತ್ತು ಬಸ್ ಗಳು ನಿಲ್ಲಲೂ ಸಾಮರ್ಥ್ಯವಿಲ್ಲದ, ಅದೂ ಪ್ರಮುಖ ಬಸ್ ನಿಲ್ದಾಣದ ಈ ಮಾದರಿಯನ್ನು ತಯಾರಿಸಿದವರಿಗೂ ಇದಕ್ಕೆ ಒಪ್ಪಿಗೆ ಕೊಟ್ಟವರಿಗ ಎಂತಹ ಪ್ರಶಸ್ತಿ ಕೊಟ್ಟರೂ ಕಡಿಮೆಯೇ. ಥೇಟ್ ತ್ರೀ ಸ್ಟಾರ್ ವಸತಿ ಗೃಹದಂತಿರುವ ಈ ಕಟ್ಟಡ ಮತ್ತು ಅದರ ಮುಂದಿರುವ ಖಾಲಿ ಜಾಗ ವಸತಿ ಗೃಹಕ್ಕೆ ಬರುವವರ ವಾಹನಗಳಿಗೆ ಹೇಳಿ ಮಾಡಿಸಿದಂತ ಪಾರ್ಕಿಂಗ್ ಇರುವಂತಿದೆ. ಇಂತಹ ಮಾದರಿ ಕಟ್ಟಡ ಕಟ್ಟಲು ಅದ್ಯಾವ ಜನ ಪ್ರತಿನಿಧಿಗಳಿಗೆ ಕನಸು ಬಿದ್ದಿತ್ತೋ ಆ ದೇವರಿಗೇ ಗೊತ್ತು.

ಬಸ್‌ಗಳೇ ನಿಲ್ಲಲು ಸಾಕಷ್ಟು ಸ್ಥಳವಿಲ್ಲದ ಇದನ್ನು ಬಸ್ ನಿಲ್ದಾಣವೆಂದು ಕರೆಯಲು ಯಾರೂ ತಯಾರಿಲ್ಲ. ಇದೇ ಕಾರಣಕ್ಕೆ ಏನೋ ಇದು ತಯಾರಾಗಿ ಆರು ತಿಂಗಳಾ ದರೂ ಉದ್ಘಾಟನೆಯ ಭಾಗ್ಯ ಕಂಡಿಲ್ಲ! ಉದ್ಘಟಿಸಲು ಯಾರಿಗಾದರೂ ಮುಜುಗರ ವಾಗಲಿಕ್ಕೂ ಸಾಕು.

ಒಂದಲ್ಲಾ ಒಂದು ದಿನ ಉದ್ಘಾಟನೆಗೊಂಡು ಬಲು ಖುಷಿಯಿಂದ ಪ್ರಯಾಣಿಕರು ಪರದಾಡಿ ಬಸ್ ಹತ್ತಿ ಸಂತೋಷ ಪಡದಿದ್ದರೆ ಹೋಗಲಿ. ಆ ಕಟ್ಟಡದಲ್ಲಿ ನಿರ್ಮಿಸಿರುವ 'ಎಸ್ಕಲೇಟರ್'ನ್ನು ಹತ್ತಿ, ಇಳಿದು ಸಂತೋಷ ಪಡುವುದಂತೂ ಗ್ಯಾರಂಟಿ. ಊರು ತಲುಪಿದ ಮೇಲೆ ಬಂಧು ಗಳಿಗೆ ಈ ಎಸ್ಕಲೇಟರ್ ನ ಮಹಿಮೆಯನ್ನು ಕೊಂಡಾಡುವುದಂತೂ ಸತ್ಯ. ಅಷ್ಟರಮಟ್ಟಿಗೆ ಜನರಿಗೆ ಇದರ ಉಪಯೋಗ ಖಂಡಿತ.

**- ಇಮ್ತಿಯಾಜ್ ಹುಸೇನ್**
ದಾವಣಗೆರೆ.

## ಮಾನವ ಹಕ್ಕುಗಳ ದಿನಾಚರಣೆ ಇಂದು

ದಾವಣಗೆರೆ, ಡಿ. 10- ನಗರದ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಡಿಸೆಂಬರ್ 11 ರಂದು ಬೆಳಿಗ್ಗೆ 11 ಗಂಟೆಗೆ 'ಮಾನವ ಹಕ್ಕುಗಳ ದಿನಾಚರಣೆ' ಕಾರ್ಯಕ್ರಮ ವನ್ನು ಹಮ್ಮಿ ಕೊಳ್ಳಲಾಗಿದೆ ಎಂದು ಅಪರ ಜಿಲ್ಲಾಧಿ ಕಾರಿ ಪಿ.ಎನ್. ಲೋಕೇಶ್ ತಿಳಿಸಿದ್ದಾರೆ

## 13ಕ್ಕೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ

ಬೆಂಗಳೂರು, ಡಿ. 10 – ಬೆಳಗಾವಿ ಯಲ್ಲಿ ಇದೇ ದಿನಾಂಕ 13ರಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದೆ. ಮುಖ್ಯಮಂತ್ರಿ ಸಿದ್ದರಾ ಮಯ್ಯ ಸಭೆ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಶಾಸಕಾಂಗ ಪಕ್ಷದ ಕಾರ್ಯ ದರ್ಶಿ ಇ. ತುಕಾರಾಂ ತಿಳಿಸಿದ್ದಾರೆ.

## ನಾಗರಿಕ ಪೊಲೀಸ್ ಲಿಖಿತ ಪರೀಕ್ಷೆ: 1266 ಗೈರು



ದಾವಣಗೆರೆ, ಡಿ.10- ಕಲ್ಯಾಣ ಕರ್ನಾಟಕ ಪ್ರದೇಶದ ನಾಗರಿಕ ಪೊಲೀಸ್ (CPC)-454 ಹುದ್ದೆಗಳ ನೇಮಕಾತಿ ಸಂಬಂಧ ಭಾನುವಾರ ನಗರದ 7 ಪರೀಕ್ಷಾ ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆ ನಡೆಯಿತು.

ಪೊಲೀಸ್ ಅಧೀಕ್ಷಕಿ ಶ್ರೀಮತಿ ಉಮಾ ಪ್ರಶಾಂತ್ ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿ, ಪರೀಕ್ಷಾ ಸಂಬಂಧ ಕರ್ತವ್ಯದಲ್ಲಿದ್ದ ಅಧಿಕಾರಿ, ಸಿಬ್ಬಂದಿಗಳಿಗೆ ಸೂಕ್ತ ಸಲಹೆ-ಸೂಚನೆ ನೀಡಿದರು.

ಜಿಲ್ಲೆಯ ಪರೀಕ್ಷಾ ಕೇಂದ್ರಗಳಿಗೆ ಹಂಚಿಕೆಯಾಗಿದ್ದ ಒಟ್ಟು 3740 ಪರೀಕ್ಷಾ ಅಭ್ಯರ್ಥಿಗಳಲ್ಲಿ 2474 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. 1266 ಅಭ್ಯರ್ಥಿಗಳು ಗೈರು ಹಾಜರಾಗಿರುತ್ತಾರೆ.

## ಕಮ್ಯುನಿಸ್ಟ್ ಮುಖಂಡ ಕಾನಮ್ ರಾಜೇಂದ್ರನ್ ನಿಧನಕ್ಕೆ ಸಿಪಿಐ ಶೋಕ



ದಾವಣಗೆರೆ, ಡಿ. 10 - ಕೇರಳ ರಾಜ್ಯದ ಸಿಪಿಐ ರಾಜ್ಯ ಕಾರ್ಯದರ್ಶಿ ಕಾಮ್ರೆಡ್ ಕಾನಮ್ ರಾಜೇಂದ್ರನ್ ನಿಧನಕ್ಕೆ ಸಿಪಿಐ ದಾವಣಗೆರೆ ಜಿಲ್ಲಾ ಮಂಡಳಿ ಸಂತಾಪ ಸೂಚಿಸಿದೆ.

ಶನಿವಾರ ಕಾಂ. ಪಂಪಾಪತಿ ಭವನದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ರಾಜೇಂದ್ರನ್ ರವರಿಗೆ ಸಂತಾಪ ಸೂಚಿಸಿ, ಕೇರಳ ರಾಜ್ಯದಲ್ಲಿ ರೈತರು ಮತ್ತು ಕಾರ್ಮಿಕರನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ರಾಜೇಂದ್ರನ್ ಅವರು ಪಕ್ಷದ ಎಲ್ಲಾ ಸಾಮೂಹಿಕ ಸಂಘಟನೆಗಳಲ್ಲಿ ವಿವಿಧ ಸ್ಥಾನಗಳನ್ನು ವಹಿಸಿ ಕೆಲಸ ನಿರ್ವಹಿಸಿದ್ದರು ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ಹೇಳಿದರು. ಕಾಂ ರಾಜೇಂದ್ರನ್ ನಿಧನದಿಂದ ದುಡಿಯುವ ಜನರಿಗೆ ತುಂಬಲಾರದ ನಷ್ಟವಾಗಿದೆ ಎಂದು ಸಿಪಿಐ ಜಿಲ್ಲಾ ಖಜಾಂಚಿ ಆನಂದ ರಾಜ್ ಮತ್ತು ಸಿಪಿಐ ಜಿಲ್ಲಾ ಸಹಕಾರ್ಯದರ್ಶಿ ಹೆಚ್.ಜಿ. ಉಮೇಶ್ ಹೇಳಿದರು.

ಸಂತಾಪ ಸಭೆಯಲ್ಲಿ ಟಿ.ಎಸ್. ನಾಗರಾಜ್, ಆ ವರಗೆರೆ ವಾಸು, ನಿಟುವಳ್ಳಿ ಬಸವರಾಜ್, ಎನ್.ಎಚ್. ರಾಮಣ್ಣ, ಯಲ್ಲಪ್ಪ, ಸರೋಜ, ಶಾರದಮ್ಮ, ಪದ್ಮಾ, ಎ.ತಿಪ್ಪೇಶ್, ಸಿ.ರಮೇಶ್ ಮತ್ತಿತರರು ಭಾಗವಹಿಸಿದ್ದರು.

## ನಗರದಲ್ಲಿ ದಿಂಡಿ ಉತ್ಸವದ ಸಮಾರೋಪ

ಭಾವಸಾರ ಕ್ಷತ್ರಿಯ ದೈವ ಮಂಡಳಿಯಿಂದ ನಡೆಯುತ್ತಿರುವ ಶ್ರೀ ವಿಠ್ಠಲ ರುಖುಮಾಯಿ ದೇವರ ದಿಂಡಿ ಉತ್ಸವ ಮಹೋತ್ಸವವದ ಕಾರ್ಯಕ್ರಮವು ಮಹಾರಾಜ ಪೇಟೆಯಲ್ಲಿರುವ ಶ್ರೀ ವಿಠ್ಠಲ ಮಂದಿರದಲ್ಲಿ ಇಂದು ನಡೆಯಲಿದೆ.

ಶ್ರೀ ಸಂತ ಜ್ಞಾನೇಶ್ವರ ಮಹಾರಾಜರ ಸಮಾಧಿ ಸೋಹಳ, ಬೆಳಿಗ್ಗೆ 5:30 ರಿಂದ ಕಾಕಡಾರತಿ ಭಜನೆ, ಹರಿಪಾಠ, 10ರಿಂದ ಕೀರ್ತನೆ, ಶ್ರೀ ಗುರುವರ್ಯ ಹ.ಭ.ಪ. ಪ್ರಭಾಕರ್ ದಾದಾ ಬುವಾ ಬೋದಲೆ ಮಹಾರಾಜ್ ಅವರಿಂದ 12:30 ರಿಂದ ಗುಲಾಲ್ ನೆರವೇರಲಿದೆ. ಶ್ರೀ ಸಂತ ಸಮಾರಾಧನೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಳ್ಳಲಿದೆ.

**LADIES PG BUILDING FOR RENT**

ಸುಸಜ್ಜಿತವಾದ ಮಹಿಳಾ ವಸತಿ ನಿಲಯ ಬಾಡಿಗೆಗಿದೆ.
ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.

Mobi. : 95351 14063,
96203 71544, 97428 35642

## ಭರಮಸಾಗರ ಕೆರೆಗೆ ತರಳಬಾಳು ಜಗದ್ಗುರುಗಳಿಂದ ಪೂಜೆ, ಸನ್ಮಾನ



ಭರಮಸಾಗರ, ಡಿ.10- ಇದೇ ದಿನಾಂಕ 28ರಂದು ಭರಮಸಾಗರ ಕೆರೆಗೆ ಸಿರಿಗೆರೆ ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಪೂಜೆ ಹಮ್ಮಿಕೊಂಡಿದ್ದು, ಇದೇ ವೇಳೆ ಕೆರೆಗೆ ನೀರು ತುಂಬಿಸುವಲ್ಲಿ ಶ್ರಮಿಸಿದ ಎಲ್ಲಾ ರಾಜಕೀಯ ಮುಖಂಡರುಗಳನ್ನು ಸನ್ಮಾನಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಅಂದಿನ ಕಾರ್ಯಕ್ರಮಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಡಾ.ಸುಧಾಕರ್, ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವ ಹೆಚ್.ಆಂಜನೇಯ ಇತರರು ಆಗಮಿಸಲಿದ್ದಾರೆ.


ಈ ಹಿನ್ನೆಲೆಯಲ್ಲಿ ಇಲ್ಲಿನ ಪ್ರವಾಸಿ ಮಂದಿರದಲ್ಲಿ ಭಾನುವಾರ ಪೂರ್ವ ಭಾವಿ ಸಭೆ ನಡೆಯಿತು. ಚಿಕ್ಕಬೆನ್ನೂರು ತೀರ್ಥಪ್ಪ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕೋಗುಂಡಿ ಮಂಜಣ್ಣ, ಡಿ.ಎಸ್. ಪ್ರವೀಣ್ ಕುಮಾರ್, ಬಸವರಾಜಪ್ಪ ಇತರರು ಸಭೆಯಲ್ಲಿದ್ದರು.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಮಠದಲ್ಲಿ ನಾಳೆ ಛಟ್ಟಿ ಅಮಾವಾಸ್ಯೆ



ದಾವಣಗೆರೆ, ಡಿ. 10 - ನಗರದ ಕೊಟ್ಟೂರು ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಸಮಿತಿಯಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ನಾಡಿದ್ದು ದಿನಾಂಕ 12ರ ಮಂಗಳವಾರ ಛಟ್ಟಿ ಅಮಾವಾಸ್ಯೆ ಪ್ರಯುಕ್ತ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ಪಾದಗಳಿಗೆ ಅಭಿಷೇಕ - ಪೂಜೆ, ನಂತರ ಪ್ರಸಾದ ದಾಸೋಹವನ್ನು ಏರ್ಪಡಿಸಲಾಗಿದೆ. ಶ್ರೀಮತಿ ಲೀಲಾ, ಡಿ. ಕೊಟ್ರಪ್ಪ ಅವರು ಪ್ರಸಾದ ಸೇವಾಕರ್ತರಾಗಿದ್ದಾರೆ. ದಾಸೋಹ ಮನೆ ಕಟ್ಟಡಕ್ಕೆ ಭಕ್ತಾದಿಗಳು ದೇಣಿಗೆ ಸಲ್ಲಿಸಲು ಕೋರಿದೆ ಎಂದು ದೇವಸ್ಥಾನ ಸಮಿತಿಯ ಕಣಕುಪ್ಪಿ ಮುರುಗೇಶಪ್ಪ (96118 89151) ತಿಳಿಸಿದ್ದಾರೆ.

## 'ಬೆಸ್ಟ್ ಇನ್ ಪಲ್ಮನಾಲಜಿ' ರಾಷ್ಟ್ರೀಯ ಕಾನ್ಫರೆನ್ಸ್‌ನಲ್ಲಿ ನಗರದ ಡಾ. ಕೃಷ್ಣ




ದಾವಣಗೆರೆ, ಡಿ.10- ಗುವಾಹಟಿ ಯಲ್ಲಿ ದಿನಾಂಕ ದಿನಾಂಕ 10 ರಂದು ಜರುಗಿದ 'ಬೆಸ್ಟ್ ಇನ್ ಪಲ್ಮನಾಲಜಿ' ರಾಷ್ಟ್ರೀ ಯ ಕಾನ್ಫರೆನ್ಸ್‌ನಲ್ಲಿ ದಾವಣಗೆರೆಯ ವೈದ್ಯರೂ ಆದ ಚೆಸ್ಟ್ ಕೌನ್ಸಿಲ್ ಆಫ್ ಇಂಡಿಯಾದ ಸಂಸ್ಥಾಪಕ ಡಾ.ಎನ್.ಹೆಚ್.ಕೃಷ್ಣ ಅವರು ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ವೇದಿಕೆಯಲ್ಲಿ ಡಾ. ಕೃಪೇಶ್ ರಂಜಾನ್ ಸರ್ಮಾ, ಡಾ.ಸುಶ್ಮಿತಾ ಚೌಧರಿ, ಡಾ.ಯೋಗೇಶ್ ಶರ್ಮಾ, ಡಾ.ಪ್ರಣಬ್ ಬರುವಾ, ಡಾ.ಮಧುಮಿತಾ ದಾಸ್ ಉಪಸ್ಥಿತರಿದ್ದರು.

## ಮಾಯಾವತಿ ಉತ್ತರಾಧಿಕಾರಿಯಾದ ಅಳಿಯ ಆಕಾಶ್ ಆನಂದ್




ಲಖ್ನೌ, ಡಿ. 10 – ಬಿಎಸ್‌ಪಿ ಅಧ್ಯಕ್ಷೆ ಮಾಯಾವತಿ ಅವರ ಸಹೋದರನ ಪುತ್ರ ಆಕಾಶ್ ಆನಂದ್ ಅವರನ್ನು ಬಿ.ಎಸ್.ಪಿ. ಉತ್ತರಾಧಿಕಾರಿ ಯಾಗಿ ನೇಮಿಸಲಾಗಿದೆ ಎಂದು ಪಕ್ಷದ ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆಕಾಶ್ ಅವರನ್ನು ಮಾಯಾವತಿ ಅವರ ಉತ್ತರಾಧಿಕಾರಿಯಾಗಿ ನೇಮಿಸಲಾಗಿದೆ ಎಂದು ಬಿ.ಎಸ್.ಪಿ.ಯ ಶಹಜಹಾನ್‌ಪುರ ಜಿಲ್ಲಾ ಘಟಕದ ಅಧ್ಯಕ್ಷ ಉದಯವೀರ್ ಸಿಂಗ್ ತಿಳಿಸಿದ್ದಾರೆ.

ಬಿ.ಎಸ್.ಪಿ.ಯ ರಾಷ್ಟ್ರೀಯ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಉತ್ತರ ಪ್ರದೇಶ ಹಾಗೂ ಉತ್ತರಾಖಂಡ ಹೊರತಾಗಿ ದೇಶದ ಉಳಿದೆಡೆ ಪಕ್ಷ ಬಲಪಡಿಸುವ ಹೊಣೆಯನ್ನು ಅವರಿಗೆ ನೀಡಲಾಗಿದೆ ಎಂದು ಸಿಂಗ್ ತಿಳಿಸಿದ್ದಾರೆ. ಬಿ.ಎಸ್.ಪಿ. ಪರಿಷತ್ ಸದಸ್ಯ ಭೀಮ ರಾವ್ ಅಂಬೇಡ್ಕರ್ ಸಹ ಈ ಬೆಳವಣಿಗೆಯನ್ನು ಖಚಿತ ಪಡಿಸಿದ್ದಾರೆ.

# ಅರಿವು ಮೂಡಿಸಿದರೆ 25 ಲಕ್ಷ ಜೈನರಾಗುತ್ತೇವೆ : ಹೊಂಬುಜ ಶ್ರೀ



ದಾವಣಗೆರೆ, ಡಿ. 10 - ಕರ್ನಾಟಕದಲ್ಲಿ ಈಗ ಮೂರು ಲಕ್ಷದಷ್ಟು ಜೈನರಿದ್ದೇವೆ. ಆದರೆ, ಅರಿವು ಮೂಡಿಸಿದರೆ ಜೈನ ಧರ್ಮದ ತತ್ವ ಪಾಲಿಸುವವರ ಸಂಖ್ಯೆ 25 ಲಕ್ಷಕ್ಕೆ ತಲುಪುತ್ತದೆ ಎಂದು ಹೊಂಬುಜದ ಜಗದ್ಗುರು ಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮೀಜಿ ಅಭಿಪ್ರಾಯ ಪಟ್ಟಿದ್ದಾರೆ.

ನಗರದ ಕುವೆಂಪು ಕನ್ನಡ ಭವನದಲ್ಲಿ ಇಂದು ಆಯೋಜಿಸಲಾಗಿದ್ದ ಭಗವಾನ್ ಶ್ರೀ 1008 ಕಲ್ಪದ್ರುಮ ಆದಿನಾಥ ಜಿನಮಂದಿರದ ದಶಮಾನೋತ್ಸವ ಹಾಗೂ ಶ್ರೀ ಮಹಾವೀರ ಸಂಘದ ಸುವರ್ಣ ಮಹೋತ್ಸವ ಸಂಭ್ರಮದ ಎರಡನೇ ದಿನದ ವೇದಿಕೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಈ ಹಿಂದೆ ಕರ್ನಾಟಕ ಸೇರಿದಂತೆ ದೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ಜೈನರಿದ್ದರು. ಕಾಲಾಂತರದಲ್ಲಿ ಬೇರೆ ಧರ್ಮದ ಪ್ರಭಾವಕ್ಕೆ ಸಿಲುಕಿ ಜೈನ ಧರ್ಮದ ಗುರುತು ಹಾಗೂ ಹೆಸರು ಹೇಳುತ್ತಿಲ್ಲ ಎಂದವರು ತಿಳಿಸಿದರು.

ಧರ್ಮಾಂತರಗೊಂಡರೂ ಸಹ ಜೈನ ತತ್ವಗಳ ಪಾಲನೆ ಮುಂದುವರೆಸಿದ್ದಾರೆ. ಈ ಬಗ್ಗೆ ಅರಿವು ಮೂಡಿ ಸಿದರೆ ಧಾರ್ಮಿಕವಾಗಿ ಜೈನರ ಸಂಖ್ಯೆ 25 ಲಕ್ಷಕ್ಕೆ ತಲುಪುತ್ತದೆ ಎಂದು ಶ್ರೀಗಳು ಹೇಳಿದರು.

ಆದರೆ, ಧಾರ್ಮಿಕ ಕಾರಣದಿಂದ ಅನುಕೂಲ ಕಲ್ಪಿಸಲು ಹೋದರೆ ಸಾಮಾಜಿಕವಾಗಿ ಅನಾನುಕೂಲವೂ ಆಗಬಹುದು. ಜೈನರೆಂದು ಗುರುತಿಸಿಕೊಂಡರೆ ಸರ್ಕಾರದಿಂದ ಸೌಲಭ್ಯ ಗಳು ಸಿಗುವುದಿಲ್ಲ. ಸೌಲಭ್ಯಗಳ ಪ್ರಮಾಣ ಪತ್ರಕ್ಕಾಗಿ ಕೆಲವರು 2ಎ ಇಲ್ಲವೇ 3ಬಿ ಮುಂತಾದ ಪ್ರವರ್ಗಗಳಲ್ಲಿದ್ದಾರೆ. ಜೈನ ಎಂದು ಹೇಳಿದರೆ ಶಿಕ್ಷಣ ಹಾಗೂ ಉದ್ಯೋಗ ಸಿಗುವು ದಿಲ್ಲ ಎಂಬ ಅನಾನುಕೂಲತೆ ಇದೆ ಎಂದವರು ತಿಳಿಸಿದರು.

ಆದರೂ, ಅವರು ಎಲ್ಲೇ ಇದ್ದರೂ ಅಹಿಂಸಾ ಧರ್ಮ ಪಾಲಿಸುತ್ತಿರುವುದೇ ಸಂತೋಷಕರ. ಜಬರ್‌ದಸ್ತ್ ಮೂಲಕ ಧರ್ಮ ಬದಲಿಸಲು ಸಾಧ್ಯ ವಿಲ್ಲ. ಜೈನ ಧರ್ಮದ ತತ್ವ ಪಾಲಿಸಲು ಜಾಗೃತಿ ಮೂಡಿಸಬೇಕಿದೆ ಎಂದು ಶ್ರೀಗಳು ಹೇಳಿದರು.

ಕರ್ನಾಟಕ ಹಾಗೂ ದೇಶದಲ್ಲಿ ಜೈನರ ಸಂಖ್ಯೆ ಒಂದು ಕಾಲದಲ್ಲಿ ದೊಡ್ಡ ಮಟ್ಟದಲ್ಲಿತ್ತು. ದಾವಣ ಗೆರೆ, ಚಿತ್ರದುರ್ಗ, ಕೋಲಾರ, ಚಿಕ್ಕಬಳ್ಳಾಪುರ ಇಲ್ಲಿ ಜೈನರಿದ್ದರು. ಜೈನ ಶ್ರಾವಕರು ನಂತರ ಸಾದರಾಗಿ ಬದಲಾಗಿದ್ದಾರೆ. ಕೇರಳ, ಮೈಸೂರು ಗಡಿಯಲ್ಲಿ ನಾಮಧಾರಿ ಗೌಡರು, ಮಲೆನಾಡಿನಲ್ಲಿ ಒಕ್ಕಲಿಗರು ಇವರೆಲ್ಲರೂ ಮೊದಲು ಜೈನರಾಗಿದ್ದರು. ಮೊಘಲರ ಕಾಲದಲ್ಲಿ ಸ್ಥಾನಾಂತರಗೊಂಡು ಕರ್ನಾಟಕಕ್ಕೆ ಬಂದ ದೇಶಪಾಂಡೆ, ದೇಸಾಯಿ, ಪಾಟೀಲ ಮುಂತಾದವರೂ ಜೈನರಾಗಿದ್ದರು ಎಂದು ಶ್ರೀಗಳು ಅಭಿಪ್ರಾಯ ಪಟ್ಟರು.

ಪಶ್ಚಿಮ ಬಂಗಾಳ ಕಾಡು ಪ್ರದೇಶದಲ್ಲಿನ ಸರಾಗ್ ಎಂಬ ಆದಿವಾಸಿಗಳು ಅಹಿಂಸಾವಾದಿಗಳು. ಕಾಡಿನಲ್ಲಿದ್ದರೂ ಅಹಿಂಸೆ ಪಾಲಿಸುತ್ತಿದ್ದಾರೆ. ಅವರೆ ಲ್ಲರೂ ಮೂಲತಃ ಜೈನರು ಎಂದು ಹೇಳಿದರು.

ಸಮಾರಂಭದ ವೇದಿಕೆ ಮೇಲೆ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ಕರ್ನಾಟಕ ಜೈನ್ ಅಸೋಸಿಯೇಷನ್ ಅಧ್ಯಕ್ಷ ಬಿ. ಪ್ರಸನ್ನಯ್ಯ, ಮಹಾವೀರ ಸಂಘದ ಗೌರವಾಧ್ಯಕ್ಷ ಎಂ.ಎ. ಸುದರ್ಶನ ಕುಮಾರ್ ಉಪಸ್ಥಿತರಿದ್ದರು.

ದಾವಣಗೆರೆ ಮಹಾವೀರ ಸಂಘದ ಅಧ್ಯಕ್ಷ ಬಿ.ಎಸ್. ಅಜಿತ್ ಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಮಹಾವೀರ ಸಂಘದ ಕಾರ್ಯದರ್ಶಿ ಡಿ. ಸುನೀಲ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಹಾವೀರ ಯುವ ಮಂಚ್ ಉಪಾಧ್ಯಕ್ಷ ಕೋಮಲ್ ಕುಂದಪ್ಪ ಸ್ವಾಗತಿಸಿದರು. ಕುಮುದ ನಾಗಭೂಷಣ್ ನಿರೂಪಿಸಿದರು. ಮಹಾವೀರ ಯುವ ಮಂಚ್ ಸಂಘಟನಾ ಕಾರ್ಯದರ್ಶಿ ಧರಣೇಂದ್ರ ಪ್ರಸಾದ್ ವಂದಿಸಿದರು.

## ವೀರಶೈವ ಮಹಾ ಅಧಿವೇಶನ ಪ್ರಚಾರಕ್ಕೆ ಎಸ್ಸೆಸ್ ಚಾಲನೆ



ದಾವಣಗೆರೆ, ಡಿ.10- ಇದೇ ದಿನಾಂಕ 23 ಹಾಗೂ 24ರಂದು ನಗರದಲ್ಲಿ ನಡೆಯಲಿರುವ ವೀರಶೈವ ಮಹಾಸಭೆಯ ಮಹಾ ಅಧಿವೇಶನದ ಹಿನ್ನೆಲೆಯಲ್ಲಿ ಎಂ.ಬಿ.ಎ. ಕಾಲೇಜು ಆವರಣದಲ್ಲಿ ಪ್ರಚಾರ ವಾಹನಗಳಿಗೆ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಇಂದು ಚಾಲನೆ ನೀಡಿದರು.

ಇದೇ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಎಸ್ಸೆಸ್, ಸಮಾವೇಶದಲ್ಲಿ ಸುಮಾರು 2 ಲಕ್ಷಕ್ಕೂ ಅಧಿಕ ಜನರು ಭಾಗವಹಿಸುವ ನಿರೀಕ್ಷೆ ಇದೆ. ಎಲ್ಲರಿರಗೂ ವಸತಿ ಹಾಗೂ ಊಟದ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಹೇಳಿದರು.

ವೀರಶೈವ ಪರಂಪರೆಯ ಎಲ್ಲ ಸ್ವಾಮೀಜಿಗಳೂ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಈಗಾಗಲೇ ಮಹಾ ಅಧಿವೇಶನದ ಬಗ್ಗೆ ಜಿಲ್ಲಾದ್ಯಂತ ಜನರಿಗೆ ಮಾಹಿತಿ ನೀಡಲು ಹಾಗೂ ಹೆಚ್ಚಿನ ಜನ ಸೇರುವಂತೆ ಕೋರಲು ಪ್ರಚಾರ ವಾಹನಕ್ಕೆ ಚಾಲನೆ ನೀಡಲಾಗಿದೆ ಎಂದು ಹೇಳಿದರು.

ಜಾತಿ ಗಣತಿ ಬೇಕಿದ್ದರೇ ಸಿಎಂ ಸಿದ್ದರಾಮಯ್ಯ ಮಾಡಲಿ ನಮ್ಮದೇನು ಬೇಸರವಿಲ್ಲ. ಈ ಬಗ್ಗೆ ವೀರ ಶೈವ ಮಹಾ ಅಧಿವೇಶನದಲ್ಲಿ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದರು. ವೀರಶೈವ ಲಿಂಗಾಯತ ಸಮುದಾಯವನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಬೇಕು ಎಂದು ಒತ್ತಾಯಿಸುವುದಾಗಿ ಇದೇ ವೇಳೆ ಹೇಳಿದರು.

ಚಿತ್ರದುರ್ಗದ ಶ್ರೀ ಶಿವಮೂರ್ತಿ ಮುರುಘಾ ಶರಣರು ಮೊದಲು ಆರೋಪದಿಂದ ಹೊರಗೆ ಬರಲಿ. ಆಮೇಲೆ ಅವರನ್ನು ಅಧಿವೇಶನಕ್ಕೆ ಕರೆಯುವ ಕುರಿತಂತೆ ಚರ್ಚೆ ನಡೆಸುತ್ತೇವೆ ಎಂದು ಎಸ್ಸೆಸ್ ಹೇಳಿದರು.

ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಅಥಣಿ ವೀರಣ್ಣ, ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್ ಹಾಗೂ ಇತರರು ಈ ಸಂದರ್ಭದಲ್ಲಿದ್ದರು.

## ಮೇ ನಹಿ, ಹಮ್ : ಐ.ಎನ್.ಡಿ.ಐ.ಎ.ದ ಘೋಷಣೆ

ನವದೆಹಲಿ, ಡಿ. 10 – ಪ್ರತಿಪಕ್ಷಗಳ ಒಕ್ಕೂಟವಾದ ಐ.ಎನ್.ಡಿ.ಐ.ಎ. ಮುಂದಿನ ಸಭೆಯಲ್ಲಿ ಸಕಾರಾತ್ಮಕ ಅಜೆಂಡಾ, ಸೀಟು ಹಂಚಿಕೆ ಹಾಗೂ ಜಂಟಿ ಸಮಾವೇಶಗಳನ್ನು ನಡೆಸುವ ಕುರಿತು ಪ್ರಮುಖವಾಗಿ ಚರ್ಚಿಸಲಾಗುವುದು.

ಒಕ್ಕೂಟವು ಐಕ್ಯತಾ ಸಂಕೇತವಾಗಿ 'ಮೇ ನಹೀ, ಹಮ್' (ನಾನಲ್ಲ, ನಾವು) ಎಂಬ ಘೋಷಣೆಯನ್ನು ಮುಂದಿಡಲಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವಿರುದ್ಧ ಈ ಘೋಷಣೆ ಬಳಸಿಕೊಳ್ಳಲಾಗುವುದು ಡಿಸೆಂಬರ್ 18 – 19ರಂದು ಐ.ಎನ್.ಡಿ.ಐ.ಎ. ಸಭೆ ನಡೆಯಲಿದೆ.

ಇತ್ತೀಚೆಗೆ ನಡೆದ ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಹಿನ್ನಡೆ ಕಂಡಿತ್ತು. ಅದರ ಬೆನ್ನಲ್ಲೇ ಐ.ಎನ್.ಡಿ.ಐ.ಎ. ಸಭೆ ನಡೆಯುತ್ತಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಎದುರಿಸುವ ಪರ್ಯಾಯ ಅಜೆಂಡಾ ಹೊಂದುವುದು ಪ್ರಮುಖ ಸವಾಲಾಗಿದೆ. ಸೀಟು ಹಂಚಿಕೆ, ಜಂಟಿ ಸಮಾವೇಶ ಹಾಗೂ ಏಕರೂಪದ ಯೋಜನೆಗಳ ಕುರಿತು ಪ್ರಮುಖವಾಗಿ ಚರ್ಚೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ವಿಧಾನಸಭಾ ಚುನಾವಣೆಯಲ್ಲಿ ಸೋಲಾಗಿದೆ ಎಂಬ ಮಾತ್ರಕ್ಕೆ, ಪ್ರಚಾರದ ಸಂದರ್ಭದಲ್ಲಿನ ಘೋಷಣೆಗಳನ್ನು ಜನರು ತಿರಸ್ಕರಿಸಿದ್ದಾರೆ ಎಂದರ್ಥವಲ್ಲ. ಜಾತಿ ಗಣತಿ ಹಾಗೂ ಹಳೆಯ ಪಿಂಚಣಿ ಮರು ಜಾರಿ ವಿಷಯಗಳನ್ನು ಜನ ತಿರಸ್ಕರಿಸಿಲ್ಲ ಎಂದೂ ಮೂಲಗಳು ಹೇಳಿವೆ. ಪ್ರಧಾನಿ ಮೋದಿ ಎದುರಿಸುವ ಸಲುವಾಗಿ 'ಮೇ ನಹಿ, ಹಮ್' ಎಂಬ ಘೋಷಣೆ ಬಳಸಲು ಸಭೆಯಲ್ಲಿ ಸಮ್ಮತಿ ಸಿಗುವ ನಿರೀಕ್ಷೆ ಇದೆ. ಜಾತಿ ಗಣತಿ, ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಗ್ಯಾರಂಟಿ ಹಾಗೂ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ವಿಷಯಗಳಲ್ಲಿ ಮುಂದುವರೆಯಲು ತೀರ್ಮಾನ ತೆಗೆದುಕೊಳ್ಳಲುವ ಸಾಧ್ಯತೆ ಇದೆ.

## ಶ್ರೀ ದಾನಮ್ಮ ದೇವಸ್ಥಾನದಲ್ಲಿ ನಾಳೆ ಛಟ್ಟಿ ಅಮವಾಸ್ಯೆ ವಿಶೇಷ ಪೂಜೆ



ದಾವಣಗೆರೆ, ಡಿ.10- ನಗರದ ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ಗುಡ್ಡಾಪುರದ ದಾನಮ್ಮ ದೇವಿ ದೇವಸ್ಥಾನದಲ್ಲಿ ಛಟ್ಟಿ ಅಮಾವಾಸ್ಯೆ ಪ್ರಯುಕ್ತ ಪ್ರತಿದಿನ ಸಂಜೆ 7 ಗಂಟೆಗೆ ಪುರಾಣ, ಪ್ರವಚನ ನಡೆಯುತ್ತಿದೆ.

ಶ್ರೀ ಪುಟ್ಟರಾಜ ಕವಿ ಗವಾಯಿಗಳವರಿಂದ ರಚಿತ ವಾದ ಶಿವಶರಣೆ ಗುಡ್ಡಾಪುರದ ದಾನಮ್ಮ ದೇವಿ ಪುರಾಣ ಮತ್ತು ಶ್ರೀ ಅಕ್ಕಮಹಾದೇವಿಯ ಚರಿತ್ರೆ ಪ್ರವಚನವನ್ನು ಶ್ರೀ ಪುಟ್ಟರಾಜ ಕವಿ ಗವಾಯಿ ಗಳವರ ಶಿಷ್ಯರಾದ ವೇ. ಮಹಾಂತೇಶ ಶಾಸ್ತ್ರಿಗಳು ಹಿರೇಮಠ (ಕಲ್ಲೂರು, ಚನ್ನಗಿರಿ) ಇವರು ನಡೆಸಿ ಕೊಡುತ್ತಿದ್ದಾರೆ. ಸ್ಥಳೀಯ ಶ್ರೀ ವೀರೇಶ್ವರ ಪುಣ್ಯಾಶ್ರಮದ ಯಲಗೂರೇಶ ಟಕ್ಕಳಿಕಿ ತಬಲಾ ವಾದನ ನುಡಿಸುವರು.

ನಾಡಿದ್ದು ದಿನಾಂಕ 12 ರ ಮಂಗಳವಾರ ಛಟ್ಟಿ ಅಮಾವಾಸ್ಯೆ ಇದ್ದು, ಅಂದು ಬೆಳಿಗ್ಗೆ ಶ್ರೀ ಸ್ವಾಮಿಗೆ ಅಭಿಷೇಕ, ಪೂಜೆ, ಮುತ್ತೈದೆ ಯರಿಗೆ ಉಡಿ ತುಂಬುವುದು, ಮದುವೆ ಆಗುವವ ರಿಗೆ ಕಂಕಣ ದಂಡಿ ಹಾಕಿಸುವ ಕಾರ್ಯಕ್ರಮ ಜರುಗಲಿದೆ. ನಂತರ ಮಧ್ಯಾಹ್ನ 12.30ಕ್ಕೆ ಸರ್ವ ಭಕ್ತಾದಿಗಳಿಗೆ ದಾಸೋಹ ಏರ್ಪಡಿಸಲಾಗಿದೆ. ಶ್ರೀಮತಿ ದೇವರಮನೆ ಗಂಗಮ್ಮ ಮತ್ತು ಮಕ್ಕಳು (ದಾವಣಗೆರೆ), ಶ್ರೀಮತಿ ವೈ. ಭಾರತಿ ಮತ್ತು ವೈ. ವೆಂಕಟೇಶ ರೆಡ್ಡಿ (ಬೆಂಗಳೂರು) ಇವರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

## ವಿಷ್ಣು ದೇವ ಸಾಯಿ ಛತ್ತೀಸ್‌ಘಡ ಸಿಎಂ



ರಾಯಪುರ, ಡಿ. 10 – ಬಿಜೆಪಿಯ ಪ್ರಮುಖ ಬುಡಕಟ್ಟು ನಾಯಕರಾಗಿರುವ ವಿಷ್ಣು ದೇವ ಸಾಯಿ ಅವರನ್ನು ಛತ್ತೀಸ್‌ಘಡದ ನೂತನ ಮುಖ್ಯ ಮಂತ್ರಿ ಯಾಗಿ ಆಯ್ಕೆ ಮಾಡಲಾಗಿದೆ.

ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ 59 ವರ್ಷದ ಸಾಯಿ ಅವರನ್ನು ಮುಖ್ಯಮಂತ್ರಿ ಹುದ್ದೆಗೆ ಆಯ್ಕೆ ಮಾಡಲಾಗಿದೆ. ನೂತನವಾಗಿ ಆಯ್ಕೆಯಾದ ಬಿಜೆಪಿಯ 54 ಶಾಸಕರು ಸಭೆಯಲ್ಲಿ ಉಪಸ್ಥಿತರಿದ್ದರು.

### ಅಣಬೇರು ಶಿವಪೂಜೇರ ಎಸ್.ಸುಭಾಷ್ ನಿಧನ



ದಾವಣಗೆರೆ ತಾಲ್ಲೂಕು, ಅಣಬೇರು ಗ್ರಾಮದ ವಾಸಿ
ಬಿಜೆಪಿ ಮುಖಂಡ ಶಿವಪೂಜೇರ ಪಾಲಾಕ್ಷಪ್ಪನವರ ಸಹೋದರ ಜಮೀನ್ದಾರರಾದ

**ಶಿವಪೂಜೇರ ಎಸ್. ಸುಭಾಷ್**

ಇವರು ದಿನಾಂಕ 10.12.2023ರ ಭಾನುವಾರ ಸಂಜೆ 4 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 68 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.12.2023ರ ಸೋಮವಾರ ಮಧ್ಯಾಹ್ನ 12 ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಅಣಬೇರು ಗ್ರಾಮದ ಮೃತರ ತೋಟದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ : ಮೊ : 97427 33826, 99019 93751**







